ಮಾಹಾತ್ಮ್ಯ ಎಂದು ತಿಳಿಯುತ್ತಾರೆ. ಈ ಮತಕ್ಕಾಗಿ ಘೋರವಾ
ಡಕಡಿಗೆ ಏನಕೆ ಇನಾಮು ಉಂಟು. ಈ ಮಹಾತ್ಮ್ಯಬಗ್ಗೆ ಸ
ವೀನ ಸುಧಾರಿಸಿ ವಜನರಿಗೆ, ನಂಬಿಗೆ ಬೇಕಾದರೆ ರಾ. ಹಯ
ವದನ ಭಗವಂತ ಮಾಮಲೇದಾನ ಬೆಳಗಾಂವಿ ವ ರಾ. ಬಾಳಕೃ
ಷ್ಣ ಗೋವಿಂದ ಮಾಮಲೇದಾರ ಬದಾಮಿ ಇವರಿಬ್ಬರಿಗೆ ಪ್ರ
ಮಾಡಿ ವಿಚಾರಿಸಿದರೆ ಅವರಿಗೆ ಮನದಟ್ಟಿ ಖಾತ್ರಿ ಯಾಗುವ
ದು. ಅಥವಾ ಸದರ ಮುದ್ದತಿಗೆ ಶಿಂದಗೀಗೆ ಬಂದವರಿಗಂಜು
ಪಕ್ಕಾ ಖಾತ್ರಿ ಯಾಗುವದು. ಇದೇಮೇರಿಗೆ ಎರಗಲ್ಲ ತಾಲೂ
ಕ ಶಿಂದಗಿಯಲ್ಲಿ ಸಹ ಚಮತ್ಕಾರ ಆಗುತ್ತದೆ. ಈ ಮತ
ವಲ್ಲಿ ಬಹುತ್ಕೃಷ್ಟ ಆದದುಂಟು ಪತ್ರವಿಸ್ತಾರದಶಿಂದಾ ಮಾಫಿ
ಬೇಡಿಕೊಳ್ಳುತ್ತೇನೆ. ಸಮುಜೋಚೆತ ತಿಳಿಸುವೆನು ಇಂತಿ ವಿನಃ.

ಶ್ರೀ॥ ೫ ಅಗಟಂಬರ ಇಸವಿ } ಹನುಮಂತ ಶ್ರೀನಿವಾಸ ಹ
ಶ್ರೀ॥ ಮು. ಶಿವಣಗಿ ತಾ॥ ವಿಜಾ } ತ್ತರಕಿ ಹಾಳಕರ ಸ್ಕೂಲವಾ
ಪ್ತೂರ ಜಿ. ಕಲಾದಗಿ. } ಸ್ತರ ಶಿವಣಗಿ ತಾ. ವಿಜಾಪ್ತೂರ

CORRESPONDENCE.
ಪತ್ರ ವ್ಯವಹಾರವು.

ಯಜಮಾನ್ಯರಾಜಶ್ರೀ ಶಾಲಾಪತ್ರಿಕೆಯ ಎಡಿಟರರಿಗೆ

ವಿನಂತಿ ವಿಜ್ಞಾಪನಾ ಕರದೊಳುದ್ಭವಿಸುವ ಪತ್ರಿಕೆಯಲ್ಲಿ
ಳಗೆ ಬರೆದ ನಾಲ್ಕು ಪಂಗ್ತಿಗಳಿಗೆ ಸ್ಥಳದೊರಿಯುವದೆಂದು ಆ
ಶೈಯುತ್ತೇನೆ.

ಲೆಖ್ಖವು.

ಒಂದು ಶೇಹರದಲ್ಲಿ ಏಳು ಕೊಟ್ಯಿಗಳಿದ್ದವು. ಒಂದೊಂ
ಕೊಟ್ಯಿಯಲ್ಲಿ ಯೆಪ್ಪತ್ತೆಪ್ಪತ್ತೂ ಜನರಿದ್ದರು. ಆವಾಗ್ಗೆ ವೈರಿಗ

ಳು ಮೊದಲನೇ ಕೋಟೆಗೆ ಮುತ್ತಿಗೆ ಹಾಕಿದ್ದು ಅದರ ಯಜಮ
ನನು ತನ್ನಲ್ಲಿ ಇದ್ದ ದಂಡಿನಲ್ಲೇ ದಂಡನ್ನು ನಿಮ್ಮ ನಿಮ್ಮ
ನ್ನೆದಲ್ಲಿ ನನಗೆ ಕೊಡರಿ ಅಂತಾ ಬಾಕಿ ಕೋಟೆಯವರಿಗೆ ಕ್ಷೀಣ
ಕ್ಕೆ ಅವರು ಅದರಂತೆ ಕೊಟ್ಟರು. ಶತ್ರುಗಳು ಆ ಕೋಟೆಯನ್ನು
ರಡನೇ ಕೋಟೆಗೆ ಮುತ್ತಿದರು ಅದರ ಧಣಿಯು ಬಾಕಿ ಕೋಟೆ
ಯವರಿಗೆ ನನ್ನಲ್ಲಿ ಇದ್ದಷ್ಟೇ ಜನವನ್ನು ನೀವು ಕೊಡರಿ ಅ
ತಾ ಕೇಳಲು ಅವರು ಅದರಂತೆ ಕೊಟ್ಟರು. ವೈರಿಗಳು ಆ ಕೋ
ಯನ್ನು ಬಿಟ್ಟು ಹೋದವು ಆದರೀತೀಯಿಂದ ಶತ್ರುಗಳು ಈ
(ಯೇಳು) ಕೋಟೆಗೆ ಮುತ್ತಿದರು. ಅದರ ಧಣಿಯು ಬಾಕಿ
ಕೋಟೆಯವರಿಗೆ ನನ್ನಲ್ಲಿದ್ದಷ್ಟು ಜನವನ್ನು ಕೊಡರಿ ಅಂ
ಕೇಳಲು ಅವರು ಅದರಂತೆಯೇ ಕೊಟ್ಟರು. ಶತ್ರುಗಳು ಈ
ಪ್ರಕಾರವಾಯಿದ್ದನ್ನು ಕಂಡು ಹಿಮ್ಮೆಟ್ಟಿದರು. ಕಡೆಗೆ ನೋ
ಲಾಗಿ ಆ ಕೋಟೆಗಳೊಂದೊಂದರಲ್ಲಿ ಸುಮಾರಾಗಿ ಜನರು ಇ
ದ್ದರು. ಅಂದರೆ ಮೊದಲನೇ ಕೋಟೆಯಲ್ಲಿ ಯಷ್ಟು ಜನರು ಇ
ದ್ದರೋ ಅದರಷ್ಟು ಜನರು ೨|೩|೪|೫|೬|೭ ಕೋಟೆಗಳಲ್ಲಿ
ಇದ್ದರು ಆದರೆ ಮೊದಲು ಪ್ರತ್ಯೇಕ ಪ್ರತ್ಯೇಕ ಕೋಟೆಯ
ಲ್ಲಿ ಎಷ್ಟು ಜನರು ಇದ್ದರು.

ಈ ಲೆಖ್ಖವು ನಾನು ಅಲ್ಪ ಬುದ್ಧಿಗೆ ತೋಚಿದಷ್ಟಾಗಿ ನಿ
ಮ್ಮ ಬಂಧುಜನರಾಗಿರುವರು ಇದರ ರೀತಿವಾರ ಸಹಿತವಾಗಿ ಆ
ದೇ ಪತ್ರದ್ವಾರದಿಂದಲೇ ನನಗೆ ಬಂದ ಈ ಲೆಖ್ಖವ ತೋಂ
ದೆಯನ್ನು ದೂರ ಮಾಡಬೇಕೆಂದು ಅಪೇಕ್ಷಿಸುತ್ತೇನೆ.

ತಾ. ೧೯ ಮಾಹೆ ನವಂ) ಪೆಂಕಾಜೆ ಜನಾರ್ದನ ಬಿಂಗಿಗೌ
ಬರ ಸನ್ನ ೧೮೭೬) ಶಿಷ್ಟಕ ಶಾಲಾ ಬೇಡಕಿಹಾಳ ತಾ. ಜ
ಇಸವಿ) ಕೊಪ್ಪಳ ಜಿ. ಬೆಳಗಾವ.

REGISTERED NO. 31
1876

ಜಾಹಿರಾತ್ರು.

ಬೇಪ್ಪೂರ ಕೃತ ಹಿಂದುಸ್ಥಾನ ಅತಿಹಾಸ, ಕ್ರ. ೧೦ ಅಣೆ, ಟ. ಹಾ. ೧ ಅಣೆ, ಇಂಗ್ರಜೀ ೧ ನೇ ಬುಕ್ಕಿನ ಸ ೆಬಲ ಬಿಡಿಸಿದ ಟೈಕ್ಸ್ನೇಂಟ ಸಹಿತ ಸ್ಪೆಲು, ಉಚ್ಚಾರ, ಅ ಥ್ ಸಹಿತ ಕಬ್ಬ ಸಂಗ್ರಹ ಕ್ರ. ೪ ಅಣೆ ಟ. ಹಾ. ೫ ಕ್ಕೆ ೧ ಅಣೆ. ರಾ. ಹ. ಬೇಪ್ಪೂರ ಇ. ಮಾ. ಹಳ್ಯಾಳ ಇವರ ಹತ್ತರ ಸಿಗುತ್ತವೆ. ಹಣ ಕಳಸಿದರೆ ಬಹ್ಮ ತೀವ್ರ ರವಾನೆ ಆಗುವದ್ರು.

ಕನ್ನಡ ಶಾಲಾಪತ್ರಿಕೆ

CANARESE

SCHOOL PAPER.

ಪುಸ್ತಕ ೩೭] [ಸಂಚಿಕೆ ೯

ತಾರೀಖು ೨೫ ನೇ ಮೊಹೆ ದಿಶಂಬರ ೧೮೭೬.

ಅನುಕ್ರಮಣಿಕೆಯು.

ವಿಷಯಗಳು..... ಪುಟ.

ವಿದ್ಯಾ ಸುಧಾರಣಾ ಸಂಬಂಧದ ದೃಷ್ಟಾಂತಗಳು..... ೪೮೧

ಜಾಹೀರಾತುಗಳು..... ೪೮೩

ಸರಕಾರಿ ರಾವುಗಳು..... ೪೮೬

ಪತ್ರವ್ಯವಹಾರವು..... ೪೮೬

CONTENTS ..... Page

Educational Intelligence..... 481

Departmental Notices..... 485

Government Resolutions..... 486

Correspondence 486

BELGAUM.

Printed at the "Belgaum Samachar" Press.

ತೆಯು ಸಹಾ ಕವಿತಾ ವಿದ್ಧತಿಗೆ ವಿರುದ್ಧ ವಹಿಸಿರುವ ಕಾರಣಾ, ಅನುಮಾನವು ಹೆಚ್ಚಾಗಿರುತ್ತದೆ. ಮತ್ತು ಆ ಕವಿತೆಯನ್ನು ಕೆಳಗೆ ಬರದಿದ್ದೇನೆ.

ಆದರೆ ಈ ಶ್ಲೋಕಗಳು ತಪ್ಪಿರುವವು ನಿಜವೆಂಬ ವಿಷಯದಲ್ಲಿ, ಎಣ್ಣೀಟರ ಮಹಾರಾಯರು ಇದನ್ನು ಛಾಪಿಸಿ ಪ್ರಸಿದ್ಧ ಪಡಿಸಿದಲ್ಲಿ ಮುಂದೆ ಈ ಪ್ರಕಾರ ನೇಮ ವಿರುದ್ಧವಾದ ಕವಿತೆಗಳು ಉಂಟಾಗುವ ವದ್ಧತಿ ಮುರಿದು ಸರ್ವತ್ರರು ಕವಿತಾ ವದ್ಧತಿ ನೇಮವನ್ನು ರವಷಾವರೂ, ಬಿಡದೆ, ನಿಯಮದಂತೆಯೇ ಕವಿತಾ ಮಾಡುವರೆಂದು. ತಿಳಿಸಿಕೊಳ್ಳುತ್ತೇನೆ. ಈ ಶ್ಲೋಕಗಳಲ್ಲಿ ತಪ್ಪಿರುವ ಸಂಗತಿಯನ್ನು ಕೆಳಗೆ ತೋರಿಸಿದ್ದೇನೆ.

ಹಲಸಿಗೀ ಮಹಾಸ್ತರರು ಕೊಟ್ಟ ಕವಿತೆಯು.

ಭೂಮಿನಿಷಟ್ಪದಿ–ಹನುಮನಾಮವಮನವಿನೆನವರೆ!
ಮನವಜಾಡ್ಯವಪ್ಪೋಗಿಚಪಲತೆ!
ಮನದಿಉದ್ಭವಿಸುವದುನಿಭ್ರಯಬಲ್ಮೆಯಲ್ಲದಲೆ!!
ಮನಜನಿತಮಳಕೀರ್ತಿಮತಿಗಳು!!
ಮನಿಕನವೃತನನುಕರಿಸಿದನಿಲ!
ಮನನುತಿಸುತಿಹಭಕ್ತ ಜನಕತಿಫಲವಿಂದಲೊದಗುವವ್ರೊ!!೭!

"ಮೇಲಿನ ಕವಿತೆಗಳಲ್ಲಿ ಅನಿಮಿತವಾದ ಮಾತ್ರೆಗಳು.

ಭೂಮಿನಿಷಟ್ಪದಿ–ನಂಬಿಗಡ ಮಹಾಸ್ತರರು ಕೊಟ್ಟ ಮೊದನೇ **ಕವಿತೆಯ** ಮೂರನೇ ಚರಣದಲ್ಲಿ ಮೂವತ್ತೆರಡು ಮಾಗಳು ಇರತಕ್ಕವು. ಹೀಗಿದ್ದು ಒಂದು ಮಾತ್ರೆ ಹೆಚ್ಚಾಗಿತ್ತದೆ. ಹಾಗು ಐದನೇ ಚರಣದಲ್ಲಿ ಪ್ರಾಯಷ್ಟರ ಲಘು ಇರಕ್ಕದ್ದು ಗುರು ಇರುತ್ತವೆ. ಮತ್ತು ನೇಮದ ಮೇರೆಗೆ ಯಲಘುಗಳು ಇರದ ಪ್ರಯುಕ್ತಾ ಕವಿತೆಯು ಛಾಪಿಗೆ ಪ್ರಸೂಲವಾಗಿದೆ. ಮತ್ತು ಆರನೇ ಚರಣದಲಿ ಸಹಾ ಒಂದು

ಮಾತ್ರೆ ಹೆಚ್ಚಾಗಿರುತ್ತದೆ.

ಕಂದ-ಎರಡನೇ ಕವಿತೆಯ ಮೊದಲನೇ ಚರಣದಲ್ಲಿ ಹ
ನ್ನೆರಡು ಮಾತ್ರೆಗಳು ಅನಕ್ಕವಿದ್ದು ಕತ್ತು ಮಾತ್ರೆಗಳೇ ಇ
ರುವವ್ರ. ಹಾಗು ಎರಡನೇ ಚರಣವಲ್ಲಿ ಇನ್ನತ್ತು ಮಾತ್ರೆ ಗ
ಳು ಅನಕ್ಕವಿದ್ದು ಹದಿನೆಂಟು ಮಾತ್ರೆಗಳು ಇರುತವೆ. ಇ
ದೇ ಪ್ರಕಾರ ಈ ಶ್ಲೋಕದ ಮೂರನೇ ಚರಣಲ್ಲಿ ಹನ್ನೆ
ರಡು ಮಾತ್ರೆಗಳು ಇರಬೇಕ್ಕತ್ತ ಕಾನಾಲ್ಕು ಮಾತ್ರೆಗಳು ಇ
ರುತವೆ. ಮತ್ತು ನಾಲ್ಕನೇ ಚರಣಲ್ಲಿ ಒಂದು ಮಾತ್ರೆ ಕಾ
ಮಿಯಾಗಿರುತದೆ. ಹೀಗಿದ್ದು ಅಕ್ಕವಿದ್ದಲ್ಲಿ ಗುರು ಲಘು
ಗಳನ್ನು ಕೇರಿವ್ಯಾಪ್ತಿಲ್ಲ.

ಭೂಮಿನಿಷಟ್ಪದಿ-ಮೂರನೇ ಕವಿತೆಯು ಮೊದಲನೇ ಎರಡ
ನೇ ಹಾಗು ಮೂರನೇ ಚರಣಗಳಲ್ಲಿ ಸಾದೃಂದು ಮಾತ್ರೆಗಳ
ಕಡಿಮಿಯಾಗಿವೆ. ಹಾಗು ಎರನೇ ಚರಣವಲ್ಲಿ ಮೂರು ಮಾತ್ರೆ
ಗಳು ಕಡಿಮಿಯಾಗಿದ್ದು ಗುರುಲಘುಗಳಿಗೆ ಕಟ್ಟು ಇಲ್ಲವ್ರ.

ಭೂಮಿನಿಷಟ್ಪದಿ-ಕೊನೆಗೀ ಮಾತರರು ಕೊಟ್ಟ ಕವಿ
ತೆಯ ಐದನೇ ಚರಣಲ್ಲಿ ಒಂದು ಮಾತ್ರೆ ಹೆಚ್ಚಾಗಿದ್ದಲ್ಲದೆ ಆರನೇ ಚರಣವಲ್ಲಿ ಮೂರು ಮಾತ್ರೆಗಳು ಅಧಿಕವಾ
ಗಿರುತ್ತವೆ. ಹೀಗಿರುವಕವಿತೆಯು ಧಾಟಿಗೆವಿರುದ್ಧ ಕಾ
ಡು ಅಶುದ್ಧ ಕಾಣಿಸುತ್ತದೆ. ಆದರೆ ಇವೇ ಕವಿತೆಯ ಅಥ
ವ್ಯಳ್ಳ ಕವಿತೆಗಳನ್ನು ಸಾಸು ಮುಂದಿನ ಪತದಲ್ಲಿ ಪ್ರಗಟಿ
ಸುತೇನೆ. ಎಡಿಟರ ಮಹಾರಾಯರೇ ಪತ್ರವಿಸ್ತಾರವಾದ
ಕ್ಕೆ ಕ್ಷಮವಾ ಇರಬೇಕು. ಇಂತಿ ಬೆನ್ನಹಾ.

ತಾರೀಖು ೨೭ ನೇ ಮಾಹೆ ಸಪ್ಟಂಬರ ಸನ್ ೧೯೨೬ ಇಸವಿ.

ವಿ ಮು. ಹಾ. ಶಾ ಬೀ. ಜೆ. ಬಿ. ಕ ಬೇಡಿ, ಜಿಲ್ಲಾ ಬೆಳಗಾಂವಿ

ಮ ರಾ. ರಾ· ಕನ್ನಡ ಶಾಲಾಪತ್ರಿಕೆಯ ಎಡಿಟರರ
ಸನ್ನಿಧಾನಕ್ಕೆ –

ಉಪ್ಪೇಶ್ವರ ಸಂಜೆಯ ವಿದ್ಯಾರ್ಥಿಗಳು ವಿನಯದಿಂದ ಬೇ
ಡಿಕೊಳ್ಳುವದೇನಂದರೆ ಜಿಲ್ಲೆ ಬೆಳಗಾವಿ ತಾ. ಪರಸಗಡ
ಮು· ಸಂಗ್ರಾಮಿಕೊಪ್ಪದ ಸ್ಕೂಲ್ ವಾಸ್ತರರಾದ ಸ್ವಯುದಶಾ
ಬುದ್ಧೇಶಾ. ಧಾರವಾಡ ಇವರು ನಡಿಸುವ ವರ್ಷದ ಜುಲಾ
ಯಿ ತಿಂಗಳಿನ ಶಾಲಾಪತ್ರಿಕೆಯ ಪಾನು ೧೨ ಪುಟದಲ್ಲಿ
ಹಾಕಿದ ಲೆಕ್ಕಗಳ ರೀತಿಯನ್ನು ನಮ್ಮ ಅಲ್ಪ ಬುದ್ಧಿಗೆ ತಿಳಿ
ಸಲು ಬೇಸಿ ಕಳುಹಿಸಿದಾರೆವೆ. ದೋಷಗಳಿದ್ದಲ್ಲಿ ಛಾಪಿಸಿ
ಸಿದ್ಧಿಸುವಿರೆಂದು ತುಂಬಾ ಅಪೇಕ್ಷೆಯಿಟ್ಟು.

(೨) ನೇ ಲೆಕ್ಕದ ರೀತಿ ಏನಪ್ಪ ದೊಡ್ಡ ಗಾರ್ಡನ್ ಗು
ರಿಯಿಂದ ಹೂವರಂಭ ಮಾಡುವ ಗಾರ್ಡನರ ಬೇವರಿಗೆ ಕೇವ್ಯ
ಪುಷ್ಪಗಳನ್ನು ಏರಿಸಿ ಬಾಕಿ ಎಷ್ಟು ಉಳಿದವೆಂದು ತಿಳಿಯು
ವ ಕಾರಣ ಒಂದಕ್ಕೆ ಇದ್ದಂತೆ ಹತ್ತು ಪುಷ್ಪಗಳಾದವು. ಆ
ಪುಷ್ಪಗಳನ್ನೆಲ್ಲ ಇದ್ದ ಬೇವರಿಗೆ ಏರಿಸಿದನು. ಎಲ್ಲಾ ದೇವ
ರಿಗೂ ಸಮನಾಗಿ ಪುಷ್ಪಗಳನ್ನು ಏರಿಸಿದ್ದರಿಂದ ಲೆಕ್ಕದಲ್ಲಿ ಬೇ
ರಿನ ಕಾರಣ ಗಾರ್ಡನ್ ಬೇವರಿಗಾದರೂ ಅನ್ನೇ (೨೦)
ಪುಷ್ಪಗಳನ್ನು ಏರಿಸಿದನು ಅವುಗಳಲ್ಲಿ ಬಾಕಿ ಉಳಿದ ಎಗ
ರು ಪುಷ್ಪಗಳನ್ನು ಕೂಡಿಸಲಾಗಿ ಆ ಗುಡಿಗೆ ಹೋಗುವಾಗ
ಅ ಪುಷ್ಪಗಳನ್ನು ಪೈದಿದ್ದನೆಂಬುವದು ಸಿದ್ಧವು. ಇದರಂ
ತೆ ಮೂರನೇ ದೇವರಿಗೆ (೩) ಪುಷ್ಪಗಳನ್ನು ಏರಿಸಿ ಬಾಕಿ
೨ ಪುಷ್ಪಗಳುಳಿದಿರಬೇಕು. ಯಾಕಂದರೆ ಒಂದಕ್ಕೆ ಮೂರ
ತೆ (೩೨) ಪುಷ್ಪಗಳಾಗಬೇಕು. ಅಂದರೆ ಆ ಗುಡಿಗೆ ಹೋ
ವಾಗ (೨೪) ಪುಷ್ಪಗಳನ್ನೊಯದಿರಬೇಕು. ಎರಡನೇ ದೇ
ರಿಗೆ (೨) ಏರಿಸಿ ಬಾಕಿ ಎರಡು ಉಳಿಯುವಿಕು. ಮತ್ತು

ೊವಲನೇ ದೇವರಿಗೆ (೩) ಏರಿಸಿ ಬಾಕಿ (೬) ಉಳಿದೀ
ೀಕು. ಆದದರಿಂದ ಮೊದಲನೇ ದೇವರಿಗೆ ಏರಿಸಿದ ಪುಷ್ಪಗ
ೂ ಬಾಕಿ ಉಳಿದ ಪುಷ್ಪಗಳೂ ಕೂಡಿಸಲಾಗಿ(೩೬)ಉತ ರ.

(೨) ನೇ ಲೆಕ್ಕದ ರೀತಿ ದಿನಾಲೂ ಬಿಡದೆ ನಡಿಯುವ ಪುಸುವಿನ ಹರದಾರಿಯ ಸಂಖೆಗ (೪) ರಿಂದ ಗುಣಿಸಿ, (೨) ಕಳದರೆ, ಬಂದದ್ದೇ ಉತ್ತರ. ಈ ಲೆಕ್ಕದಲ್ಲಿ ಆನೆಯು ಬಿಡದೆ ದಿನಾಲೂ (೪೩) ಅರದಾಗ ನಡಿಯುವದರಿಂದ

೪೩

೪ ಗುಣಿಕೆ

೧೭೨

೨ . ಕಳದರೆ

೧೭೪ ದಿವಸ ಉತ್ತರ.

ಜಲ್ಲಾ ಧಾರವಾಡ ತಾ. } ಹೊಂಡೋ ಕೇಕವ ಜೋಶಿ ಮಹಾಂ
ಅಹ್ಮದ್ನಗರ. } ತ ಸಿದರಾಮಪ್ಪ.

ಮಹಾರಾಜ ರಾಜಪ್ರೂಜಿತ ರಾಜಮಾನ್ಯರಾಜಶ್ರೀ ಕಂ
ನಡ ಶಾಲಾಪತ್ರಕರ್ತರಿಗೆ,

ಗುಡ ಮಾರ್ನಿಂಗ ರಾಯರೇ ಕೆಳಗೆ ಬರದಿರುವ ನಾಲ್ಕು ಪಂ
ಕ್ತಿಗಳಿಗೆ ತಮ್ಮ ಅಂದವಾದ ಶಾಲಾಪತ್ರಿಕೆಯಲ್ಲಿ ಸ್ಥಳದೊರೆ
ದು, ಛಾಪಿಸಿ ಪ್ರಸಿದ್ಧ ಪಡಿಸುವಿರೆಂದು ಭಯ ಭಕ್ತಿಯಿಂದ ಚ
ರಣಾಂಬುಜಕ್ಕೆ ಯರಗಿ ಬೇಡಿಕೊಳ್ಳುತ್ತೇನೆ.

ಕವಿತೆಯು.

ವಾಧೀಕಪ||ಮರಗಿದವ್ಯಕೋಕಕೋಕನವಂಗಳಾಗಬಾ
ಯ್ದಿರಲ್ಪಾಜಕೊಳಲುಜೋರಿದಕಾಯ್ ಕಾಯಿಗ ।
ಳು ರುಗಿದತಮಸ್ಸನುಚಾರೋಕಲೋ ಕಸ್ಥಿತಿಗೆತೊಲಗಿದವ್ರದೆಳೆ

ಮೊರದುದುಸನುದ ಮುವ್ರನದವೆಚ್ಚಿ ಗೆಯಿಂದ ।
ಸೊರತುದು ಕಾಂತಕಾಂತಿಪ ತಜಿಜು ಸುಪುಸಿದ ।
ರುರುಬಿವನಗಲ್ದರಂಚಾವಚೂಪಲಹಸ್ತನಾಗಚಿಂಪ್ಯೋದಯದುದೊ
ಳು ॥೧॥

ಈ ಕವಿತೆಯು ನನಗೆ ಚಮತ್ಕಾರವಾಗಿ ಕಂಡ ಬಂದದ
ಂದ ಇದರ ಭಾವಾರ್ಥ ಕಬ್ಬಾರ್ಥವ್ಯ ನನಗೆ, ನಮ್ಮ
ನೇಕದ ವಿದ್ವಜ್ಜನರು ಅರುಹಿ ನನ್ನ ಕಾಂಕ್ಷೆಯನ್ನು
ನೂರು ಮಾಡುವಿರೆಂದು ಕೊರುತೇನೆ. ಇಂತಿ ಬಿನ್ನಹಾ.

ಶಾರೀಖು ೨೪ ನೇ ಮಾಪೆ
ನವಂಬರ ಸನ್ ೧೮೬೬ } ಪಂಚಾಕ್ಷರೀ ವಿರುಪಾಕ್ಷಪ್ಪ
ಇಸವಿ. } ತಲೀ, ವಿದ್ಯಾರ್ಥಿಹಂಚಿನಾಳ
} ತಾ. ಪರಸಗಡ.

ಮ ರಾ. ರಾ. ಕನ್ನಡ ಶಾಲಾಪತ್ರಕದ ಎಡೀಟರ
ರಾಯರಿಗೆ.

ಬಾಳಾಜೀ ಗೋಪಾಳ ಸರ್ಕಾರೀ ಸ್ಕೂಲ ಮಾಸ್ತರ ಗೋ
ನನಕೊಪ್ಪ ಇವನ ವಿಸಯ ವಿನಂತಿಯ:-ಅಯ್ಯಾ ಈ ಪ
ಪ್ರದ ಸಂಗಡ ಕಳುಹಿಸಿದ ನಾಲ್ಕು ಕಬ್ಬುಗಳಿಗೆ ಶಾಲಾಪತ್ರಕ
ದಲ್ಲಿ ಸ್ಥಳ ದೊರೆಯುವದೊಂಬ ನಂಬಿಗೆಯನ್ನು ತುಂಬಾಲುಂಟು.
ಅದನ್ನು ಕೊನೆಗಾಣಿಸುವವರು ತಾವೇ ಸರಿ.

ಶಾರೀಖು
೨೫।೧೨।೬೬. } ಬಾಳಾಜೀ ಗೋಪಾಳ ಸರ್ಕಾರೀ ಸ್ಕೂ
} ಲಮಾಸ್ತರ ಗೋವನಕೊಪ್ಪ.

ಶಬ್ದವ್ಯುತ್ಪತ್ತಿ.

ಅಧ್ಯಯನ–ಈ ಶಬ್ದವ್ಯ ಆ+ಅಧಿ, ಅಂದರೆ ಅಭ್ಯಾಸಮಾ
ಡು, ಎಂಬ ಧಾತುವಿನಿಂದ ಬಂದದೆ. ಅಧ್ಯಯನ=ಅಭ್ಯಾಸ.

ಅಧಿಕಾರ-ಈ ಶಬ್ದವು ಅಧಿ+ಕೃ ಅಂದರೆ ಹಿಳು. ಎಂ
ಧಾತುವಿನಿಂದ ಬಂದು ಅದೆ. ಅಧಿಕಾರ=ಹಿಳಿಕೆ.

ಅನುಗ್ರಹ-ಈ ಶಬ್ದವು ಅನು+ಗ್ರಹ್. ಅಂದರೆ ದಯ
ಮಾಡು ಎಂಬ ಧಾತುವಿನಿಂದ ಬಂದದೆ ಅನುಗ್ರಹ=ದಯ

ಅಪಹಾರ-ಈ ಶಬ್ದವು ಅಪ+ಹೃ ಅಂದರೆ ಬಾಯಿ
ಡಿ ಎಂಬ ಧಾತುವಿನಿಂದ ಬಂದದೆ ಅಪಹಾರ = ಬಾಯಿ
ಡಕತನ.

ಅಭಿಧಾನ-ಈ ಶಬ್ದವು ಅಭಿ+ಧಾ ಅಂದರೆ ಹೆಸರು
ಎಂಬ ಧಾತುವಿನಿಂದ ಬಂದದೆ. ಅಭಿಧಾನ=ಹೆಸರು.

ಅಮರ-ಈ ಶಬ್ದವು *ಅ+ಮೃ ಅಂದರೆ ಸಾಯುವಿದ
ಎಂಬ ಧಾತುವಿನಿಂದ ಬಂದದು ಅಮರ=ಸಾಯುವವರು (ದೇವ

ಅವತಾರ-ಈ ಶಬ್ದವು ಅವ+ತೃ ಅಂದರೆ ಕೆಳಗೆ ಬಾ
ಡ್ಡುವು. ಎಂಬ ಧಾತುವಿನಿಂದ ಬಂದದೆ. ಅವತಾರ=ಕೆಳಗೆ
ಬರೋಣ ಡ್ಡುವಿಕೆ.

ಅಲಂಕಾರ-ಈ ಶಬ್ದವು ಅಲಂ+ಕೃ ಅಂದರೆ ಚೆನ್ನಾಗಿ
ಳಿಸು, ಎಂಬ ಧಾತುವಿನಿಂದ ಬಂದದೆ. ಅಲಂಕಾರ=ಕೆಂಪ

ಆಕಸ-ಈ ಶಬ್ದವು ಆಕ್ ಅಂದರೆ ಉಗುಳು, ಎಂಬ ಧ
ತುವಿನಿಂದ ಬಂದದ ಆಸನ=ಉಗುಟ.

ಆಚಾರ-ಈ ಶಬ್ದವು ಆ+ಚರ್ ಅಂದರೆ ನಡಿ, ಎಂ
ಧಾತುವಿನಿಂದ ಬಂದದೆ. ಆಚಾರ=ನಡಾವಳಿ.

ಆದರ-ಈ ಶಬ್ದವು ಆ+ದೃ ಅಂದರೆ ಮುನ್ನಿಸು ಎಂಬ
ಧಾತುವಿನಿಂದ ಬಂದದೆ. ಆದರ=ಮುನ್ನಣೆ.

ಆವರಣ-ಈ ಶಬ್ದವು ಆ+ವೃ ಅ ದರೆ ಮುಚ್ಚು ಎಂಬ
ಧಾತುವಿನಿಂದ ಬಂದದೆ ಆವರಣ=ಮುಸಗು.

---

* ಅಮೃತ, ಎಂಬುದಾದರೂ ಇದೇ ಧಾತುವಿನಿಂದ ಆಗಿರುವದು.

ಆವಾಸ-ಈಶಬ್ದವು ಆ+ವಸ್ ಅಂದರೆ ಇರು ಎಂಬ ಧಾತುವಿನಿಂದ ಬಂದದೆ. ಆವಾಸ=ಇರುವದು.(ಮನೆ.)

ಆಸನ-ಈಶಬ್ದವು.ಆ+ಸೀ ಅಂದರೆ ಕೂಡು, ಎಂಬ ಧಾತುವಿನಿಂದ ಬಂದದೆ ಆಸನ=ಕುಳಿತುಕೊಳ್ಳುವದು (ಗದ್ದಿಗೆ.)

ಕರ್ಮ--ಈ ಶಬ್ದವು * ಕೃ ಅಂದರೆ ಕೆಲಸಮಾಡು ಎಂಬ ಧಾತುವಿನಿಂದ ಬಂದದೆ. ಕರ್ಮ=ಕೆಲಸ.

ಶ್ಲೋಕ-ಈ ಶಬ್ದವು ಶ್ಲಿಷ್ ಅಂದರೆ ದುಃಖಪಡು ಎಂಬ ಧಾತುವಿನಿಂದ ಬಂದದೆ. ಶ್ಲೋಕ=ಮುಖ.

ಕೋಪ-ಈ ಶಬ್ದವು ಕುಪ್. ಅಂದರೆ ಸಿಟ್ಟಾಗು, ಎಂಬ ಧಾತುವಿನಿಂದ ಬಂದದೆ. ಕೋಪ=ಸಿಟ್ಟು.

ಕ್ರೋಧ-ಈ ಶಬ್ದವು ಕ್ರುಧ್. ಅಂದರೆ ಕನಲು ಎಂಬ ಧಾತುವಿನಿಂದ ಬಂದದೆ. ಕ್ರೋಧ=ಕನಲಿಕೆ.

ಗಾನ ಈ ಶಬ್ದವು ಗೈ ಅಂದರೆ,ಹಾಡು, ಎಂಬ ಧಾತುವಿನಿಂದ ಬಂದದೆ. ಗಾನ=ಹಾಡು.

ಘೋಷ-ಈ ಶಬ್ದವು ಘುಷ್ ಅಂದರೆ ಸಾವಗೊಳ್ಳಿಸು ಎಂಬ ಧಾತುವಿನಿಂದ ಬಂದದು. ಘೋಷ=ಸಾವು

ಜನ್ಮ-ಈ ಶಬ್ದವು+ ಜನ್ ಅಂದರೆ ಹುಟ್ಟು ಎಂಬ ಧಾತುವಿನಿಂದ ಬಂದದ. ಜನ್ಮ=ಹುಟ್ಟುವಿಕೆ.

ಜಾಗರ-ಈ ಶಬ್ದವು ಜಾಗೃ ಅಂದರೆ ಎಚ್ಚರಿತು ಎಂಬ ಧಾತುವಿನಿಂದ ಬಂದದೆ. ಜಾಗರ=ಎಚ್ಚರಿಕೆ. (ಜಾಗರಣ) ಎಂಬದು (ಜಾಗರ) ದಹಾಗೇ ಆಗಿದೆಂತದು

ಜಯ-ಈ ಶಬ್ದವು ಜೀ ಅಂದರೆ ಗೆಲ್ಲು. ಎಂಬ ಧಾತುವಿ

* ಕಾರ್ಯ, ಎಂಬ ಪದವಾದರೂ ಇದೇ ಧಾತುವಿನಿಂದಲೆ ಆಗಿರುವದು

+ ಜನನ, ಜನಕ, ಎಂಬವುಗಳಾದರೂ ಇದೇ ಧಾತುವಿನಿಂದ ಆಗಿರುವದು.

ನಿಂದ ಬಂದದೆ. ಜಯ=ಗೆಲುವ್ಯ.

ಜೀವ-ಈ ಶಬ್ದನ್ನ ಜೀವ್ ಅಂದರೆ ಬಾಳು, ಎಂಬ ಧಾತುವಿನಿಂದ ಬಂದದೆ. ಜೀವ=ಬಾಳಿಕೆ.

ಜ್ವಾಲಾ-ಈ ಶಬ್ದನ್ನ ಜ್ವಲ್ ಅಂದರೆ ಉರಮು, ಎಂಬ ಧಾತುವಿನಿಂದ ಬಂದದೆ. ಜ್ವಾಲಾ=ಉರಿ.

ಶಾರೀಖು
೫೫।೧೨।೭೬. ಬಾಳಾಜಿ ಗೋಪಾಳ ಸಕ್ಕರಿ. ಹೆಡ್ಡಮಾಸರ ಗೋವನಕೊಪ್ಪ. ತಾಲೂಕ ಬಾದಾಮಿ, ಜಲ್ಲಾ ಕಲಾದಗೀ.

(ಮುಂದೆ ಸಾಗುವದು.)

ರಾಮರಾಯಣಸಾರ.

ದೇವತೆಗಳ

ಸ್ತುತಿಯು.

ಭಾವ ॥ಶೀರಮಾಕರಕಂಜಪ್ರೂಜೆತ ।
ಜಾರುಪಾದಸರೋಜನಾಭಿಜ ।
ವಾರುತಾಹಿಷಗೆಂದ ದಾವರತಿಪತಿಗಳಿಗೆವಂದ್ಯ ॥
ಮಾರಮಣವಿಶೋಭ್ಯದಯಂಗಳ ।
ಕಾರಣನೆಕವಿಗೇಹನಿಂನವ ।
ದಾರವಿಂದವನೆನಿವೆರಶ್ಲಿಸುನರಹರಿಯನಿತ್ಯ ॥ ೧ ॥

ರಂಗರಾಯಸಕಾಲ್ ಬೆರಳತುದಿ ।
ಸಂಗವಾಗಲುಬೊಂಮನಂಡವ ।
ಭಂಗಗ್ಯೆವ್ಯೆತಂದಗಂಗೆಯನುತ್ತ ಮಾಂಗದಲಿ ॥
ಸಿಂಗರಿಸಿಕೊಂಡಂಗ-ಸಂತಾ- ।
ಪಂಗಳನುಕಳೆಕೊಂಡಿರುವಮೂ ।
ನಂಗಳನೆಕೊಡುವಂಗಳವತುತಿಸುವೆನುನಾನಿಂನ ॥ ೨ ॥

ಗಜವದನಹೇರಂಬಗಣಪತಿ ।
ಜಗಭೂಷಣವಿಘ್ನಮದಸೂ ।
ಜಕೆಪಂಚಾನನಮಹೇಶ್ವರಪುತ್ರ ಕುಭಗಾತ್ರ ॥
ಜಕಜನಮಂದಾರನಿಂನನು ।
ಬೆಸಿಸ್ತೋಜೆಸಿನತಿಸಿನುತಿಸುವೆ ।
ಪಕವನವನುಬರೆಯಲೊದಗುವವಿಘ್ನವಪಹರಿಸು ॥ ೩ ॥
ಕರದಚಂದ್ರನಕಿರಣಗಳಧಿ ।
ರಿಪಹೀತಾಂಬರದಪದನೂ ।
ರದಕಾಂಚಿಯಕಂಕಣದಕಿಂಕಿಣಿಯಝೇಂಕೃತಿಯ ॥
ೂರಲಹಾರದಕರ್ಣಪ್ರೂರದ ।
ರದಚಲ್ಯಸು ಪಲ್ಲವದಶುಭ ।
ರವದನೆಶಾರದೆಯಸ್ತುತಿಸುವೆಸನ್ಮತಿಯಕೊಡುನೀ ॥ ೪ ॥
ಚರಣ ಯತಿ ಗಣ ಪ್ರಾಸ ಮೇಣ್ವ್ಯಾ ।
ರಣ ವಾತಾನ್ಸಯ ಕ್ರಿಯಾಪದ ।
ರಿಯೆಶೃಂಗಾರಾದಿನವರಸ ಭಾವ. ಲಕ್ಷ್ಣವ ॥
ರಚಿಸುವೆನಾದಡೆಯುವಿಕೃತಿ ।
ಬರಲಿಕರದಜ್ಞನದೋಷವ್ರ ।
ೂರೆದುಸ್ವೀಕರಿಸುವದುವಿಬುಧರುಯಿಂತಿರಿಯಕೃತಿಯ ॥ ೫ ॥

ಮಂಗಲಾಚರಣಾ ಸಮಾಪ್ತಿ ಯು.

ರಾಮಾಯಣಸಾರ

ಬಾಲಕಾಂಡವ್ರ.

ಭಾಂಪಂ ॥ ಆಲಿಪ್ರದುಷವಿಭಕ್ತ ರೆಲ್ಲರು ।
ಬಾಲಕಾಂಡದಕಥೆಯದಶರಥ ।
ನಾಯುಏನಾರಾಯಣನೆರಾವಣಾಭಿಧಾನದೊಳು ॥

---

* ಮನೆಯಲ್ಲಿ.

ಬಾಲನೋ೪ವತಾರವಾಡಿದ ।
ಮೇಲೊಂಭ್ಮಿ ಭರತ ಕಪ್ಪಾಸ ।
ಸಾಲುವವುವಿನವನಕೆಬೆಳೆದವುಲೋಕನರವಂತೆ ॥ ೩ ॥
ಹೆತ ಮುಕ್ಕಳನಿತ್ಯದಶರಥ ।
ಸುತ ಮುತ ಲೆನೋ ಡುತಲೆಪ್ಪದು ।
ಕೋ೬ತನುಜಲಿ ಗೆತಾಕೃತ್ ಕೃತ್ಯನೆಂಬೆಂದ ॥
ಪತ ೯ನದವಾನನರವಾತ್ಮರು ।
ಹೆತ್ತ ತಾಯ್ಗಳುಮಿಕ್ಕಸಖಿಯರು ।
ಮತೆ ಪರಿಜಾತಕರು ದಾನ೯ರು ವಿಷಯಜರುಕ್ಕಾಡಾ ॥ ೪ ॥
ಬಂದುಶೀರಘುರಾಮಚಂದ್ರನ ।
ಮುಂದಹಾಸಾಂಕಿತದ ಮೋಗದರ– ।
ವಿಂದವಂಕಾಡಾಗಳೆ ಸಾ೯ನಂದನ್ಯೊಂವಿದವು ॥
ಚಂವಿದಾ೯ನರಾಜ ಭಿಭೂತಪ್ಪ ೨ ।
ರಂದನುತಾ “ಗಾಧಿ” ನಾಮಜ ।
ಲಿಂದಕರಿಪುವನ್ಯಪಗೆಪೃಥ್ವಿಸಕಂದನೊಬ್ಬಾತ ॥ ೫ ॥
ವರವಿಭೂಸುರನಾಗಿಬಹಳ ।
ತರವಿಬುಂದನು * ಜಗದಮಿತ್ತನು ।
ಧರಿಂಸುಪ್ಪೈದಬುಕಾಲಶತಧರಾಯುನರಮಸೆಗೆ ॥
ಹಿರಿಯರಾಯುನಬೇಡಲಾತಗೆ ।
ಪರಮಕ್ಕಳ್ವಂದಿಕೊಟ್ಟಭೂವರ ।
ನಿವಿವನಕಡುಕೋಪಶಾಪಗಳೆಂಬಭೀತಿಗಳ ॥ ೬ ॥
ಅನುಜನೊಡಗೊಂಡಮುಜನಾಭನು ।

---

೧ ನಾಡಾಡಿಗಳಹಾಗೆ. ೨ ರಾಮಚಂದ್ರನ. ೩ ಧನ್ಯ. ೪ ಸಗರ. ೫ ಸು+ಅರಿನದ=ಸ್ವಾನದಿಂದ. ೬ ವಂಕ. ೭ ಇಂದ್ರನು. * ವಿಷ್ಣುವಿನು. ೮ ರಾಜನು. ೯ ಕಷ್ಟದಿಂದ.

ಘನಹರುಷದಲಿಸಿದ್ಧರೆಂಬುವ ।
ಮುನಿಗಳಾಶಮವನಂನುಸುರಿವಬಹ್ವಿನಯದಿಂದ ॥
ದಿನಪಕೋಟಿಗಳೆಂಬನರಪೀ ।
ಜನಪಮಿಗಿಸಿನಿರಂಪಿಸವಶೀ ।
ವನಿತೆಯಂತಸನುಮುನಿಗನುಗಹತಾಡಜೇಕೆಂದು ॥ ೫ ॥

ಶಸ್ತ್ರವಿದ್ಯಾಪಟುತೆಯಿಂದಸು ।
ಧಿಸ್ತ್ರನಯಜಾಗಜಿನುಲಿಯು ।
ಸ್ತ್ರಸ್ತಾದೇವತಚಿತ ತಪಸ್ಸಬಾಬಾಗವದು ॥

ಚಿತ್ತವನುಮೀರಿರಿಯುತಾಮುನ ।
ಮಿತ ನಾಜಿಜಸಕ್ಷತ ।
ಮಿಶ್ರಿತಕ್ಷಿತಾಟೀಯುತಶತ್ರುಸಂಪನನು ॥ ೬ ॥

ಒಲೆಮುದಾಹಂಮೀಪಸಹಿತವಿ ।
ಶಾಸ್ತ್ರಾಣಮನಬಾಂಗಿನಗೆ ।
ಶ್ರೋಷುವಿಸೆಸಂಮೋದೆಮನಾಸ್ತ್ರವಿಸ್ಮಿಂದು ॥
ಗತ ತವತನುಶತ್ರವಾಡಿಸ ।
ಯಥಾದೇವನುಜೊಂದನತಕನು ।
ಪತೆ ಜೋಳಿಸುಬಾಹುಬಹಳುನ್ಮತ್ತನಾಗಿರಾ ॥ ೭ ॥

ಮಡನತರಗಳನುರಿದುತಾಬಾ ।
ಡಗಿಸಿಂಪಲಿಮೊಡೆಮನೀರನ ।
ಡಪೊಳಗೆಚಲ್ಲವನುಜೊಂತುನನುಜಿಗೆಬಾಣಪಲಿ ॥
ಪೆಮುತಿಮುತುಣಿಕೆಸೆಂಬುವ ।
ಡೆಮೆತಜೆನೀಚಕನತಂನನು ।
ಡೆವಮುನಿಪನಯಜ್ಞನುಕಡೆತನಕಪಾಲಿಸಿದಾ ॥ ೮ ॥

---

೧ ಕಾಂತಿಗೆ. ೨ ಕಶ್ಯಪ್ಪ. ೩ ಬ್ರಹ್ಮ. ೪ ನಾವು. ೫ ಈಶ್ವರನ. ೬ ವಿಶ್ವಾಮಿತ್ರನ.

ಅಪ್ಪರಲಿ ಸೀತಾಸ್ವಯಂವರ ।
ಹುಪ್ಪಿಫೋಷನ ಸಮರವಿಕ್ಕೆ ।
ಪೆಟ್ಟುಪೆಟ್ಟಿಗೆಬರಲುಕೇಳುತಬಟ್ಟುತೋಷವನು ॥
ಭಟ್ಟರಾಘವನನುಜರಿಂದವಿ ।
ಶಿಷ್ಟನಾಮುನಿಪತಿಗಳಾಶ್ರಮ ।
ಜಿಟ್ಟುಪೊರಟನುವಿಶ್ವಸಖನನುಸರಿಸಿರಭಸದಲಿ ॥೬॥
ಜನಕರಾಯನಸೀಮೆಗ್ಯೆದಲು ।
ವನಜನಾಭನುಕಂಡಹಲ್ಯೆ ।
ತನುಸಹಸ್ರಾಕ್ಷನನುಮುಟ್ಟಿದಪಾಪಬಲ್ಮೆಯಲಿ ॥
ಘನಶಿಲೀಕೃತಳಾಗಿತಂನಯ ।
ಯಿನಯಸಿಂಪಂಥದಲಿಬೀಳ್ಕೊ ।
ಮನುಜಳಂಮಾಡಿದನುಗೌತುಮಮುನಿಗೆಕೂಡಿಸಿದ ॥೭॥

---

೬ ವಿಶ್ವಾಮಿತ್ರ. † ಇಂದ್ರನ. ೭ ಹಾದಿಯಲ್ಲಿ ೩ ಅಹಲ್ಯೆಯ ಗಂಡನು.

(ಮುಂದೆ ಸಾಗುವದು.)

ಶಾಲಾಪತ್ರಕಬ್ಬ.

ಪುಸ್ತಕ ೩೭] [ಸಂಚಿಕೆ ೯

ತಾರೀಖು, ೨೫ನೇ ಮಾಹೆ ದಿಶೆಂಬರ, ೧೮೭೬.

EDUCATIONAL INTELLIGENCE.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮೆಹೆರಬಾನ ಎಜ್ಯುಕೇಶನಲ ಇನಸ್ಪೇಕ್ಟರದೊರೆಗಳವರು ಮೂರು ತಿಂಗಳಹಕ್ಕಿನ ರಜೆ ತಕ್ಕೊಂಡು ಹೋದಮೇಲೆ ಅವರ ಕೆಲಸಕ್ಕೆ ಧಾರವಾಡದ ಡಿಪ್ಯುಟಿಇನಸ್ಪೇಕ್ಟರರಾದ ರಾವ ಸಾಹೇಬ ಚೆನ್ನಬಸಪ್ಪ ಬಸಲಿಂಗಪ್ಪ ಧಾರವಾಡ ಇವರನ್ನು, ಧಾರವಾಡದ ಡಿಪ್ಯುಟಿ ಇನಸ್ಪೇಕ್ಟರಕೆಲಸಕ್ಕೆ ರಾವಸಾಹೇಬ ಪಾಂಡುರಂಗ ವೆಂಕಟೇಶ ಜೆಂತಾಮಣಿ ಪೇಟಕರ ಇವರನ್ನು ನೇಮಿಸಿದಬಗ್ಗೆ ಸರಕಾರಿ ಗ್ಯಾಜೇಟಿನಲ್ಲಿ ಪ್ರಸಿದ್ಧವಾಗಿರುತ್ತದೆ.

ದಕ್ಷಿಣಭಾಗದೊಳಗಿನ ಸಾಲೆಗಳಿಗಾಗಿ ಸುಧಾರಿಸಿದ ಹೊಸ ಇಯತ್ತೆಗಳೂ ಮೂಸ್ತರಜನರಿಗಾಗಿ ನಿಯಮಗಳೂ ಬಹುಶಃ ಸಿದ್ಧವಾಗಿವೆ. ಅವು ತೀವವೇ ಪ್ರಕಟವಾಗಿ ಅಮಲಿನಲ್ಲಿ ಬರುವವೆಂದು ಕಂಡು ಬರುತ್ತದೆ.

ಮಿಸರ ಹೊರಮುಸಜೆ ಜಹಾಂಗೀರ ಭಾಭಾ ಎಮ್. ಏ ಇವರನ್ನು ಬೆಂಗಳೂರ ಸೆಂಟ್ರಲ ಕಾಲೇಜದ ವೈಸ ಪ್ರಿನಸಿಪಾಲ ಕೆಲಸಕ್ಕೆ ನೇಮಿಸಿರುತ್ತಾರೆ. ಈ ಗ್ರಹಸ್ಥರು ಬಹಳ ಉತ್ತಮ ವಿದ್ವಾಂಸರಿದ್ದು, ಮುಂಬಯಿ ಎಲಫಿನಸ್ಟನ ಕಾಲೇಜದಲ್ಲಿ ಕೆಲವ್ವ ದಿವಸ ಅಸಿಸ್ಟಾಂಟ ಪ್ರೊಫೆಸರ ಕೆಲಸಮಾಡಿ, ಒಳ್ಳೇ ಸಿಫಾರಸು ಪಡೆದಿರುತ್ತಾರೆ.

ಮುಂಬಯಿ ಯುನಿವರ್ಸಿಟಿಯ ನಡೆದ ವರ್ಷದ ಮ್ಯಾಟ್ರಿಕುಲೇಶನ ಪರೀಕ್ಷೆಯಲ್ಲಿ ಒಟ್ಟಿಗೆ ೧೧೫೪ ಜನರು ಉಮೇದವಾರರು ಹೊರಗಿದ್ದರು; ಆದರೆ ಅವರಲ್ಲಿ ೨೩ ಜನರು ಮಾತ್ರ ಪಾಸಾದರು. ಇದರ ಮೇಲಿಂದ ಪರೀಕ್ಷೆಯು ಬಹಳ ಕಠಿಣವಾಯಿತೆಂದು ಹೇಳಬಹುದು. ಈ ವರ್ಷ ಈ ಪರೀಕ್ಷೆಯ ಸಂಬಂಧದಿಂದ ಸಂಸ್ಕೃತ ಸ್ಕಾಲರ ಶಿಪ್ಪುಗಳಲ್ಲಿ ಒಂದು ರತ್ನಗಿರಿ ಹಾಯಸ್ಕುಲಿನೊಳಗಿನ ವಿದ್ಯಾರ್ಥಿಗೆ ಒಂದು ಪುಣೆ ಹಾಯಸ್ಕೂಲಿನ ವಿದ್ಯಾರ್ಥಿಗೆ ಶಿಕ್ಕಿವೆ.

ಈ ವರ್ಷ ಬೀ. ಏ. ಪರೀಕ್ಷೆಯಲ್ಲಿ ೧೯೦ ನೇ ವರ್ಗದಲ್ಲಿ ೧೩, ೨ನೇ ವರ್ಗದಲ್ಲಿ ೨೬ ಈ ಮೇರೆಗೆ ೩೯ ಉಮೇದವಾರರು ಪಾಸಾದರು. ಎಮ್. ಏ. ಪರೀಕ್ಷೆಯಲ್ಲಿ ಸರದುನಜೆವಾಣೆಕಜಿ ದಸ್ತೂರ ವಿಠ್ಠಲ ವಿಷ್ಣು ಗೋಖಲೆ ಎಂಬವರಿಬ್ಬರು ಪಾಸಾದರು. ಎಲೆಲ. ಬೀ. ಪರೀಕ್ಷೆಯಲ್ಲಿ ವಾಸುದೇವ ಕೃಷ್ಣ ಭೈರ್ಯವಾನ ಗಣೇಶ ರಾಮಜಾಂದ್ರ ಕೆಲೋರ್ಕರ, ರಘುನಾಥ ಶಿವರಾಮ ಪಟವರ್ಧನ ಎಂಬವರು ಪಾಸಾದರು.

DEPARTMENTAL NOTICES.

ಜಾಹೀರಾತ್ತುಗಳು.

———000———

ಸರಕ್ಯುಲರ ನಂಬರ ೨೬ಲಿಟ ಸನ್‌೧೮೭೬ ಇಸವಿ.

ಮೆಹರಬಾನ ಎಜ್ಯುಕೇಶನಲ ಇನಸ್ಪೇಕ್ಟರ ದಕ್ಷಿಣಭಾಗ ಇವರ ಕಡಿಯಿಂದ ಧಾರವಾಡ ಜಿಲ್ಲೆಯ ಡೆಪ್ಯುಟಿ ಇನಸ್ಪೆಕ್ಟರರಿಗೆ.

ಮುಂದೆ ಎರಡನೆ ಹುಕುಮುಆಗುವವರಿಗೆ ೨ ಆಣೆ ಕೂಡಲಿಕ್ಕೆ ಆಸಮರ್ಥರಾದ (ಸರಕಾರೀಹೊಲ ಮಾಡದಂಥ) ದಿನಗೂಲಿಕಾರ ಮುಂತಾದವರ ಮಕ್ಕಳಕಡಿಯಿಂದ ೬ ಪೈಯಂತೆ ಫೀ ತಕ್ಕೊಳ್ಳಬೇಕು. ಸರಕಾರೀ ಹೊಲ ಮಾಡುವವರ ಮಕ್ಕಳು ಈಗಿನಂತೆ ಅರ್ಧ ಆಣೆ ಕೊಡಲಿಕ್ಕೇಬೇಕು.

೩ಪ್ರತಿವೊಂದು ಸಾಲೆಯಲ್ಲಿ ಮೂಫೀ ಹುಡುಗರಲ್ಲಿ ನಿಡಾನ ಅರ್ಧ ದಿನ ಕೂಲಿಕಾರರ ಹುಡುಗರಾಗಲಿ ಕೀಳ ಜಾತಿಯ ಹುಡುಗರಾಗಲಿ ಇರಲಿಕ್ಕೆಬೇಕು. ಉಳಿದ ಅರ್ಧ ಭಾಗದಲ್ಲಿ ಸೋಯಿ ಕಂಡು ಬಂದಪ್ರಕಾರ ಕೀಳ ಜಾತಿಯವರವಾಗಲಿ ಉಚ ಜಾತಿಯವರವಾಗಲಿ ಹುಡುಗರು ಇರಬಹುದು.

ದಸ್ಕಂಬರ ೩೧ ೧೮೭೬ } Signed W. A. Tussell.
ಎ. ಇನಸ್ಪೇಕ್ಟರ ದಕ್ಷಿಣಭಾಗ.

———————

ಸದ್ಯಕ್ಕೆ ಹಣದ ಅಡಚಣೆ ಬಹಳ ಇದ್ದ ಕಾರಣ ಈಗಿದ್ದ ಸಾಲೆಗಳನ್ನು ಸಾಗಿಸುವದೇ ಬಹಳ ಕಠಿಣವಾಗಿರುತ್ತದೆ. ಆದದರಿಂದ ಈ ಇಂಥ ಸ್ಥಿತಿಯಲ್ಲಿ ಮೂಸರ ಜನರಿಗೆ ಸ್ಕೂಲಿಕನಸಿ ಮತು ಕ್ಯಾಪಿಟೇಕನ ಅಲಾವನ್ಸ ಕೊಡಲಿಕ್ಕೆ ಆಸ್ಪದ

ವಿರುವದಿಲ್ಲ ಎಂಬ ಅಸಮಾಧಾನಕರ ಸಂಗತಿಯನ್ನು ಯಾವ ತರಿಗೆ ಜಾಹೀರ ಮಾಡುತ್ತೇವೆ.

ಬೆಳಗಾವ
ಇನ್ನೇ ದಶಂಬರ ೧೮೬೬ } Signed W. A. Russell.
ಎ. ಇ. ದಕ್ಷಿಣಭಾಗ.

ಸನ್ ೧೮೬೯ ಇಸವಿಯ ಮೇ ತಿಂಗಳಿಂದ ಇತ್ತಲಾಗಿ ಟ್ರೇಂಡ ಆದ ಪ್ರತಿವ್ಯೊಬ್ಬ ಮಾಸ್ತರನು ಮುಂದೆ ಕೊಟ್ಟ ನಮುನೆಯ ಪ್ರಕಾರ ಪತ್ರಕವನ್ನು ತುಂಬಿ ಆದಷ್ಟ ತ್ವರವಾಗಿ ತನ್ನು ಜಿಲ್ಲೆಯ ಡೆಪ್ಯುಟಿಇನಸ್ಪೇಕ್ಟರರ ಕಡಿಗೆ ರವಾನೆ ಮಾಡಬೇಕು. ಈ ಪ್ರಕಾರ ಮಾಡಿದರೆ ಟ್ರೇನಿಂಗದ ಸಂಬಂಧದಿಂದ ಅವರ ನೌಕರಿ ವ್ಯರ್ಥ ಹ್ಯೋಗಲಿಕ್ಕಿಲ್ಲ.

Signed W. A. Russell.
ಎ. ಇನಸ್ಪೇಕ್ಟರ ದಕ್ಷಿಣಭಾಗ.

ಸನ್ ೧೮೬೯ ಇಸವೀ ಮೇ ತಿಂಗಳಿಂದ ಟ್ರೇನಿಂಗಕಾ
ಲೆಜಕ್ಕೆ ಕಳಿಸಿದ ನೌಕರಜನರ (ಅಂದರೆ ಸ್ಕೂಲಮಾಸ್ತರ)
ಪತ್ರಕ.

ಹೆಸರು, ತಂದೆಯ ಹೆಸರು, ಜಾತಿ ಹೆಸರು.	ಯಾವ ಸಳಿನಿಂದ ಬಂದಿದ್ದಾನೆ ಮತ್ತು ಎಷ್ಟು ಕಾಲದಿಂದ.	ಬಂದ ನಂತರದ ಸಂಬಳ. ಪ್ರತಿ ತಿಂಗಳಿಗೆ ರೂ ಆಣೇ ಪೈ.	ಟ್ರೇನಿಂಗಕಾಲೇಜಿನಲ್ಲಿ ಪಟ್ಟು ಆದ ಕಾಲೇಜಿನಲ್ಲಿರುವಾಗ ಪಡೆದ ಬಹುಮಾನ ಸಂಖ್ಯೆ.	ಟ್ರೇನಿಂಗ ಕಾಲೇಜಿನಿಂದ ಬಿಟ್ಟ ಮೇಲೆ ತಿರುಗಿ ಬಂದ ಕಾಲ.

GOVERNMENT RESOLUTIONS.
ಸರಕಾರಿ ತರಾವುಗಳು.

———000———

೨೦೦ ರೂಪಾಯಿಗಿಂತ ಕಡಿಮೆ ಸಂಬಳದ ಸರಕಾ
ನೌಕರನು ಹಕ್ಕಿನ ರಜೆ ತಕ್ಕೊಂಡರೆ, ತನ್ನ ವರಿಷ್ಠ ಆಫೀ
ರಯ ವಿಶೇಷ ಅಪ್ಪಣೆಯಿಂದ ಆತನಿಗೆ ಆತನ ಎರಡು ತಿಂ
ಳ ಸಂಬಳದಷ್ಟು ಹಣ ಮುಂಗಡ ಕೊಡಬಹುದಾ
ದು ಸರಕಾರದವರು ನಂಬರ ೪೫೬೨ ತಾರೀಖು ೭ ನವಂ
ರ ೧೮೮೬ ದ ತಮ್ಮ ತರಾವಿನಲ್ಲಿ ಪ್ರಸಿದ್ಧ ಮಾಡಿದ್ದಾರೆ
ಈ ತರಾವಿನ ಮೇರೆಗೆ ಶಿಕ್ಷಕತಕ್ಕ ಮುಂಗಡ ಸಂಬಳವನ್ನು
ಕ್ಕಿನ ರಜೇಮೇಲೆ ಹೋಗುವ ದಿವಸ ದೊರೆಯುವದು.

ಸಾಟಪೇಡ್ ಅರ್ಜಿ ಮುಂತಾದವುಗಳನ್ನು ತಿರಿಗಿ ಹಾಕಿ
ಹಾಸಲು ಕೊಟ್ಟು ತಕ್ಕೊಂಡು ಆದ ಹಾಸಲಿನ ಖರ್ಚು ಕ
ಟಿಂಜಟ ಖರ್ಚಿಗೆ ಶೇರಿಸಿ ತಕ್ಕೊಳಬೇಕೆಂದು ಸರಕಾರಿ ನಂ
ಬರ ೪೩೪೪ ತಾರಿಖ ೯ ಅಗಟಂಬರ ೧೮೬೬ ದ ತರಾವು
ಆಗಿರುತ್ತದೆ.

CORRESPONDENCE.
ಪತ್ರವ್ಯವಹಾರವು

ಮೇಹರಬಾನ ರಾವಸಾಹೇಬ ಕರ್ನಾಟಕ ಶಾಲಾಪತ್ರಿಕೆ
ಎಡೀಟರ ದಕ್ಷಿಣಭಾಗ ಇವರಿಗೆ.

ಕೇವಕನಾದ ವೆಂಕಾಜಿ ಗೋವಿಂದಕಿತ್ತೂರ, ಮಾಸ್ತರಶಾ
ಳಾ ಶೇಡಬಾಳ, ಇವನು ವಿನಯಪೂರ್ವಕ ವಂದನೆಮಾಡಿ,

ಪ್ರಾರ್ಥಿಸುವದೇನಂದರೆ, ನಮ್ಮ ಮಿತ್ರರಾದ ರಾ|| ರಾ|| ಜಗನ್ನಾಥ ಶ್ರೀಧರ ಗೋಖಲೇ ಮಾ. ಬೊಮ್ಮನಹಳ್ಳಿ ಇವರು ಮಾಹೆ ಜೂನ್ ಮತ್ತು ಅಗಷ್ಟ ತಿಂಗಳ ೩ನೇ ೫ನೇ ಸಂಚಿಕೆಯ ಮಹಪತ್ರಿಕೆಗಳಲ್ಲಿ ಬಹು ರಮ್ಯರಂಮ್ಯವಾದ ಕಲಿಸುವ ಪದ್ಧತಿ ಬರೆದಿರುವದನ್ನು ನೋಡಿ ನನಗೆ ಬಹ್ಯ ಆನಂದವಾಯಿತು. ಪರಂತು ಮಾಹ ಅಗಷ್ಟ ಸ. ೫ನೇ ಪುಠ ೪೧ನೇ ಳ ೨ ನೇ ದರಲ್ಲಿ ಬರೆದ ವ್ಯಾಕರಣದೊಳಗಣ ಕ್ರೀಯಾಪದ ಪ್ರಕರಣದ ನೇಮಗಳು ಬರೆದಿರುವದನ್ನು ನೋಡಲಾಗಿ, ನನ್ನ ತಿಳಿದಿರುವ ನೇಮಕ್ಕೂ, ಅವರು ಹೇಳುವ ನೇಮಕ್ಕೂ ಸ್ವಲ್ಪ ಬಿಡುಗಡೆಯಾಗುವಂತೆ ತೋರುತ್ತದೆ. ಆದರೆ ಯಾವರೀತಿಯಿಂದ ವ್ಯಾಕರಣ ಕಲಿಸಲೆಂದ ಬಹ್ಯ ತೊಂದರೇ ಉಂಟಾಗಿ ನನ್ನ ಅಲ್ಪ ಬುದ್ಧಿಗೆ ಶ್ರೀಹರಿಗುರುಗಳ ಪ್ರೇರಣೆ ಆದಷ್ಟು ಬರೆದು ತಮ್ಮ ಸನ್ನಿಧಿಗೆ ಕಳುಸಿರುವೆನು. ತಮ್ಮ ಜೆತ್ತಾನುಸಾರವಾಗಿ ಕಂಡರೆ ಸ್ವಾಮಿಗಳ ಕರಕಮಲದೊಳುದ್ಭವಿಸುವ ಜ್ಞಾನಪ್ರದವಾದ ಶಾಲಾವತಿಕೆಯಲ್ಲಿ ಸ್ಥಲ ದೊರದರೆ ನಮ್ಮ ಬಂಧುವರ್ಗದವರಾದ ಮಾಸ್ತರ ಜನರು ನೋಡಿ ಈ ನೆಮದಂತೆ ಕಲಿಸಬೇಕು, ಅಥವಾ ಸದರ ಮಾಸ್ತರರು, ಬರೆದ ನೇಮದಂತೆ ಕಲಿಸಬೇಕು, ಎಂಬದು ತಿಳಿಸಿ ನನ್ನ ಸಂಶಯ ಪರಿಹರಿಸಿದರೆ ಕಲಿಸಲಿಕ್ಕೆ ಮಾರ್ಗವಾಗುವದೆಂಬ ಕಾಂಕ್ಷೆಯಿಂದ ಬರಕೊಂಡಿಧೇನೆ. ತಮ್ಮ ಮರ್ಜಿ ಪ್ರಕಾರ ಮಾಡುವವರು ಸಮರ್ಥರೆ ಇಧೀರಿ.

:: ಕ್ರಿಯಾಪದ ಪ್ರಕರಣ :: ಕ್ರೀಯಾಪದದಲ್ಲಿ ಮೂರು ಭಾಗಗಳುಂಟು. ಅವು ಯಾವವೆಂದರೆ ಪ್ರಕೃತ್ಯರ್ಥಕ (ಅಖ್ಯಾತ ಕ್ರಿ.) ಆಖ್ಯಾತ್ಯರ್ಥಕ, ನಾಮಾತ್ಯರ್ಥಕ, ಎಂಬ ಮೂರು ಕ್ರೀಯಾಪದಕ್ಕೆ (೨೦) ಲಕ್ಷಣಗಳುಂಟು. ಅವು ಯಾವವೆಂದರೆ

:: ಧಾತ್ವರ್ಥತ್ರಯ :: ಸಕರ್ಮಕ, ಅಕರ್ಮಕ, ಪ್ರಯೋಜಕ
(ಪ್ರೇರಣಾರ್ಥ) ಎಂಬ ಮೂರು ಅರ್ಥಗಳು.

:: ಧಾತುರೂಪತ್ರಯ :: ಸಿದ್ಧರೂಪ ವೃತ್ತನ್ನರೂಪ, ಸಮ
ಸಿತರೂಪ (ಸಂಯುಕ್ತರೂಪ) ಎಂಬ ಮೂರ ರೂಪಗಳು.

:: ಅರ್ಥ ವಿಶೇಷಣತ್ರಯ :: ಸಂಭವಾರ್ಥ, ಅಭವಾರ್ಥ, ನಿ
ರ್ವ್ಯರ್ಥ ಎಂಬ ಮೂರು ಅರ್ಥ ವಿಶೇಷಣಗಳು.

:: ಕಾಲತ್ರಯ :: ವರ್ತಮಾನಕಾಲ, ಭೂತಕಾಲ, ಭವಿಷ್ಯತ್ಕಾ
ಲ ಎಂಬ ಮುಖ್ಯ ಮೂರು ಕಾಲಗಳು.

:: ಪುರುಷತ್ರಯ :: ಉತ್ತಮ ಪುರುಷ ಮಧ್ಯಮ ಪುರುಷ
ಪ್ರಥಮ ಪುರುಷ ಎಂಬ ಮೂರು ಪುರುಷಗಳು.

:: ಲಿಂಗತ್ರಯ :: ಪುಲ್ಲಿಂಗ, ಸ್ತ್ರೀಲ್ಲಿಂಗ, ನಪುಸಕಲಿಂಗ ಈ
ಪ್ರಕಾರ ಮೂರು ಲಿಂಗಗಳು.

:: ವಚನದ್ವಯ :: ಏಕವಚನ ಬಹುವಚನ ಎಂಬ
ರಡು ವಚನಗಳು. ಈ ಇಪ್ಪತ್ತು ಲಕ್ಷಣಗಳು ಉಂಟು.

ಈ ಯಾವತ್ತು ಲಕ್ಷಣಗಳಪ್ಪೈಕಿ ಒಂದೊಂದು ಆಖ್ಯ
ಕ್ರಿಯಾಪದಕ್ಕೆಮಾತ್ರ ಹತ್ತುವವು. ಮಿಕ್ಕಾದ ಯಡೆರ್ಯ ಕ್ರಿಯಾ
ಪದಕ್ಕೆ ಎಲ್ಲಾ ಲಕ್ಷಣಗಳು ಹತ್ತುವದಿಲ್ಲಾ.

:: ಆಖ್ಯಾತ ಕ್ರೀಯಾಪದ :: ಉ. (ಮಾಡುತ್ತಾನೆ) ಕ
ಡು ಎಂಬ ಉಕಾರಾಂತ ಧಾತುವಿಗೆ ರೂಪಗಳು ಹಚ್ಚುವ

ಮಾಡು ಧಾತು. ಸಿದ್ಧರೂಪ ಸಕರ್ಮಕ, ಸಂಭವಾ
ವರ್ತಮಾನಕಾಲ, ಪುಲ್ಲಿಂಗ, ಪ್ರಥಮ ಪುರುಷ ಏಕವಚನ

ಮಾಡುತ್ತಾನೆ ಎಂಬ ಕ್ರೀಯಾಪದಕ್ಕೆ ಮೇಲಿನ ಇಪ್ಪತ್ತು
ಲಕ್ಷಣಪ್ಪೈಕಿ ಯಾವತ್ತು ಹತ್ತಿರುವವು.

ಇದರ ಪ್ರಯೋಗ ಮಾಡಬೇಕಾದರೆ- ಈ ವಾಕ್ಯದ
ಅವನು ಅದ್ಯಾಹಾರ ಕರ್ತೃ, ಕೆಲಸವನ್ನು ಅದ್ಯಾಹಾ

ರ್ಮ, ಮಾಡುತ್ತಾನೆ. ಕ್ರೀಯಾಪದವ ಸಕರ್ಮಕ ಕರ್ತ್ರೃ ಪ್ರ
ಯೋಗ. ಹೀಗೆ ಹೇಳಬೇಕೆಂಬುವಹಾಗೆ ನನ್ನಗೆ ತೋರುವದು.
ಆದರೆ ಸದರ ಮಾಸ್ತರರ ನೇಮಕ್ಕೆ ಸ್ವಲ್ಪ ಬಿಡುವದು.
ಯ್ಯಗಂದರೆ ಅವರು ಧಾತು ರೂಪತ್ರಯ ಹಚ್ಚೆಲ್ಲಾ. ಹಾಂಗು
ಯೋಗ ಹೇಳಲ್ಲಿ ಕಾರಣ ಯಾವರೀತಿಯಿಂದ ಕಲಿಸತಕ್ಕ
ತಿಳಿಸಬೇಕು. ಅವರ ನೇಮ « ಸ ಜನೇ ಪ್ರಥ ಅ ಇ
ನೇಡರಿ.

« ಅವ್ಯಯಾತ್ಮಕ ಕ್ರೀಯಾಪದ ಅವ್ಯಯಾತ್ಮಕದಲ್ಲಿ ಎರಡು
ಗಗಳು. ನ್ಯೂನ್ಯಾ ಭಾವರೂಪ ಪ್ರಕಾರ.

« ನ್ಯೂನ್ಯ :: ಕ್ರೀಯಾನ್ಯೂನ್ಯಕ್ಕೆ ಧಾತುರೂಪತ್ರಯ ಧಾ
ರ್ಥತ್ರಯ, ಕಾಲತ್ರಯ, ಅರ್ಥ ವಿಶೇಷಣತ್ರಯ. ಇಪ್ಪ
ಷಣಗಳು ಹತ್ತುವವ್ರ. ಉ. (ಮಾಡುತ್ತಾ) ಮಾಡು ಎಂಬ
ಕಾರಾಂತ, ಧಾತು. ಶಿದ್ಧರೂಪ ಸಕರ್ಮಕ ಸಂಭವಾರ್ಥ
ರ್ತಮಾನಕಾಲ ಈ ಪ್ರಕಾರ ಹತ್ತುತ್ತವೆ. ಮಾಡುತ್ತಾ ವರ್ತ
ನ ನ್ಯೂನ್ಯ. ಸದರ ಮಾಸ್ತರರ ನ್ಯೂನ್ಯಕ್ಕೆ ಧಾತುತ್ರ
ಕಾಲತ್ರಯ. ಹಾಂಗು ನ್ಯೂನ್ಯಗಳ ಪ್ರಕಾರವನ್ನು ಹೇ
ಕೆಂದು ಹೇಳಿರುವರು. ಪ್ರಕಾರ ಯಾವದೋತಿಳಿಯಲಿ
ಮತ್ತು ಧಾತುತ್ರಯವೆಂದು, ಧಾತ್ವರ್ಥಕ್ಕೆ ಹೇಳಿದರು, ಆ
ಧಾತುರೂಪಕ್ಕೆಂದು, ಯಾಕ ತಿಳಿಯಬಾರದು ಹಾಗು
ರ್ಥ ವಿಶೇಷಣ ಯಾಕೆ ಹಚ್ಚಬಾರದು?

«ಭಾವರೂಪ,—ಭಾವರೂಪಕ್ಕೆ ಧಾತ್ವರ್ಥತ್ರಯ ಧಾತುರೂ
ಯವಮಾತ್ರ ಹತ್ತುವವ್ರ

ಉ. (ನುಡಿಯಬು) ನುಡಿ ಎಂಬ ಇಕಾರಾಂತ ಧಾ
ಸಿದ್ಧ ರೂಪ. ಸಕರ್ಮಕ. ಇವಕ್ಕೆ ಅ ಉ ಎಂಬ ಪ್ರತ್ಯ
ತ್ತಿ ಭಾವರೂಪ ವಾಗಿದೆ. ಸದರ ಮಾಸ್ತರರು ಧಾ

ತುತ್ರಯ ವಾತ್ರ ಹತ್ತುವದೆಂಬುವರು.

(೬ ಸಾಮಾತ್ಕಕ ಕೈ . ;;) ಇದರಲ್ಲಿ ಮೂರು ಭಾಗಗಳು ಉಂಟು. ಕೃದ್ವಾಚೆ ಕೃದ್ನಾಮ, ಕ್ರೀಯಾನಾಮ ವೆಂದು ಮೂರು.

೬ ಕೃದ್ವಾಚೆ ;; ಇದಕ್ಕೆ ಧಾತುತ್ರಯ ಕಾಲತ್ರಯ ಇಪ್ಪ್ಪ್ಪ್ ಹಚ್ಚಬೇಕೆಂದು ಹೇಳಿದರು; ಆದರೆ ಧಾತ್ವರ್ಥತ್ರಯ ಧಾತು ರುಪತ್ರಯ. ಅರ್ಥವಿಶೇಷಣತ್ರಯ. ಕಾಲತ್ರಯ ಇವ್ರ ಹತ್ತುವ ದಿಲ್ಲೋ ಹ್ಯಾಗೆ!

೬೧.(ಹ್ಯೋಗುವ) ಹ್ಯೋಗು ಈ ಉಕಾರಾಂತ ಧಾತು ಸಿದ್ಧರೂಪ ಅಕರ್ಮಕ ಸಂಭವಾರ್ಥ, ವರ್ತಮಾನಕಾಲ ಈ ಪ್ರಕಾರ ಕೃದ್ವಾಚೆಗಳಿಗೆ ಲಕ್ಷಣ ಹತ್ತುವವು: ಹಾಗು ಕೃ ದ್ವಾಚೆಗಮಕ ಸಮಾಸದಲ್ಲಿ ಪರಪದಕ್ಕೆ ವಿಶೇಷಣ ವಾಗುವ್ರ-ಉ. (ಹ್ಯೋಗವನು ಮನುಷ್ಯನು) ಕೃದ್ವಾಚಕಗಮಕ ಸಮಾಸ ಹ್ಯೋಗುವ ವಿಶೇಷಣ ಮನುಷ್ಯಗೆ.

೬ ಕೃದ್ನಾಮ ;; ಕೃದ್ವಾಚೆಕಗಳಿಗೆ ಪ್ರಥಮಪುರುಷರ ಪ್ರ ತ್ಯಯಹತ್ತಿ ಕೃದ್ನಾಮವಾಗುವವ್ರ. ಇವಕ್ಕಾದರು ಮೇಲಿನಂ ತೆ ಲಕ್ಷಣಗಳು ಹತ್ತುವವ್ರ. ಉ. (ಮಾಡುವವನು) ಮಾ ಡುವ. ಕೃದ್ವಾಚೆ + ಅವನು ಪ್ರಥಮಪುರುಷ ಪ್ರತ್ಯಯಹತ್ತಿ ಮಾಡುವವನು,-ವರ್ತಮಾನ ಕೃದ್ನಾಮ ವಾಯಿತು. ಮಾಡು ವವನು ಕೃದ್ನಾಮ, ಪುಲಿಂಗ, ಪ್ರಥಮಾ ಏಕವಚನ, ಇಷ್ಟೇ, ಹೇಳಿದರೆ ಸಾಕು.

೬ ಕ್ರೀಯಾನಾಮ ; ಇದು ಭಾವಾರ್ಥಕ ನಾಮವಾಗಿರು ರೂಪಿಸುವದಕ್ಕೆ ಕೃದ್ವಾಚೆಗಳಿಗೆ ೬ದು ;; ಎಂಬ ನಪುಂಸಕ ಏಕವಚನ ಪ್ರತ್ಯಯ ಹತ್ತುವದು. ಮತ್ತು ಇದಕ್ಕೆ ಪ್ರತಿಯಾ ಗಿ ವರ್ತಮಾನಕ್ಕೆ ೫ ಪ್ರತ್ಯಯ ಬರುತ್ತದುಂಟು. ಇವಕ್ಕೆ

ಸೀಲಿನಂತೆ ರೂಪಗಳು ಹತ್ತಿ ವಿಭಕ್ತಿಸಹ ಹಪ್ಪು ವನ್ನು. ಉ. ೬ನುಡಿದದ್ದು.; ನುಡಿಧಾತು ಸಿದ್ಧರೂಪ. ಸಕರ್ಮಕ ಸಂಜ ಸಾರ್ಥ ಭೂತಕಾಲ. ಕ್ರೀಯಾಮಾಮು, ವಿಕವಚನ ಹಾಂಗು ವ ರ್ತಮಾನಕ್ಕೆ (ಉಂನುಡಿಯೋಣ.) ಣ ಪ್ರತ್ಯಯ ಹತ್ತಿತು. ವಿ ದಕ್ಕೆ ವರ್ತಮಾನ ಕ್ರೀಯಾನಾಮು ವೆನಬೇಕು ಬಹ್ವಾವ ಕನ ವಿಲ್ಲ.

ಈ ಪ್ರಕಾರ ಕ್ರೀಯಾಪದಗಳಲ್ಲಿ ಪಜ್ಜು ಕಡಿಮೇ ಯಾಗುವದು, ಇವರೆ ಈ ನೇಮವಂತೆ ನಡಿಸಬೇಕೆಂಬ ಅಥವಾ ವರ ನೇಮುವಪ ಕಾರ ಕಲಿಸತಕ್ಕದ್ದೋ ಇದು ಶ್ರಿಯುರಾವ ಶಾಸ್ತ್ರರರು ಹೇಳಿ ನನ್ನಲ್ಲಿ ಬಂದ ಸಂಶಯ ಪರಿಹರಿಸುವ ಂದು ಪ್ರಾರ್ಥ ನೆಂಬಿದ್ದೆನೆ. ಪತ್ರ ಬೆಳವ ಕಾರಣ ಮುಗಿಸಿದ್ದೆ . ಎಡಿಟರ ಮಹಾರಾಯರೆ ಪತ ವಿಸ್ತಾರವಾವಕ್ಕೆ ಕ್ಷಮಿಸಿ, ಲ ದೊರಿಯಬೇಕೆಂದು ಪ್ರಾರ್ಥನೆ ಉಂಟು ಇ. ಬಿನ್ನಿ ಪು. ಕೇಡಬ್ಬಾಳ ತಾ. ಅಳ ನರಂಬರ ಸನ್ ೧೮೭೬ ಇಸ

ಕಾಶಿ ಗೋವಿಂದ ಹಿರೇರ.
ಹೆ. ಮಾಸರ. ಕೇಡಬ್ಬಾಳ ತಾ|| ಅಥಣಿ.

ಮಹಾರಾಜ ರಾ. ರಾ. ರಾವಸಾಹೇಬ . ದಕ್ಷಿಣ ಭಾಗ ಕನ್ನಡ ಶಾಲಾಪತ್ರ ಕರ್ತರಿಗಳಿಗೆ.

ವಿನಂತಿ ವಿಜ್ಞಾಪನಾ. ಕೆಳಗೆ ಬರೆವ ನಾಲ್ಕು ಪಂಕ್ತಿಗಳಿಗೆ ತಂಮ ಸುಂದರವಾದ ಮತಪತ್ರಿಕೆಯಲ್ಲಿ ಸ್ಥಳ ದೊರದೀತೆಂಬ ಕಾಂಕ್ಷಾಭರಿತನಾಗಿದ್ದೇನೆ.

ಸಂಶಯಸ್ತವಾವ ಕವಿತೆಗಳು.

ನಂದಗಡವ ವರ್ಣನೆಯು.

ಮಾದಿಕಪಟ್ಟಣ-ಬೆಳಗಾವಿಜಿಲ್ಲೀದಲೆಂಕಣದೆಯೆಳಿಪ್ಪ

ಕಳೆಯುಳ್ಳನಂದಗಡವೆಂಬ ಮಹಾದೇವಪ್ಪರ।
ಪ್ರೊಲಗಳಿಂಬನಗಳಿಂಸದಾಸ್ಥಿಯಿಂ ಮನೆಗಳಿಂಪಶುಪಕ್ಷಿಗಳ
ಲೂ ॥
ಫಲಗಳಿಂವೆಪಹಾಧಮುಂತಾದಬಗೆಬಗೆಯ।
ಕಲಾಕ ಶಬ್ಯಗಳಿಂಸಜ್ಜನರುಗಳಿಂದ।
ನೆಲೆಲೇವಿಪಡುನದೇಕೆಗೊಡಿಯುನಾಪ್ಪರದಂತೆಮೆ ರದುದೀನ
ಗಡವ್ರೂ ॥೩॥

ಕಂದ–ಕೆರೆವಚ್ಚರತ್ನದೊಲ್।
ಕೆರೆತೀರದೋಳ್ಮಾಮರಂತಣ್ಣಿರಲಿಂ ॥
ನೆರೆದಬಳ್ಳಾಕಗಿಳಿಗುಂಬಿಸಿಂ।
ನಿರಂತರದೊಳ್ಪಾರಿತ್ರೀವಿಕಣ್ಣೆಸೆಗುಂ ॥೩॥

ಭಾಮಿನಿಷಟ್ಪದಿ–ಅರಲಿಂಕಾಯ್ಗಳಿಂಪಣ್ಣಿಂ। ಮರಮುಂ
ಳವಣಾದ್ಯಾನ।
ನೆರೆದಪಿಣ್ಣಿಳಿಯಿಂದಸದ್ಬಾಗಾಳಿಯಿಂದಲೂ ॥
ಪಿರಿವಲ್ಲಲ್ಲಿಕ್ಕೇದಗಿಯಿಂದ। ಮೆರೆವಪ್ರದುಕಮಲದೆಸಳಿನಿಂ।
ಕೆರೆತಪೆಯೋಳ್ಪೀವಿತೋಪ್ರದುದ್ಯಾನೆಸೆಗುಂ ॥೩॥

ಈ ಮೇಲೆ ಬರೆದ ಪದ್ಯಗಳನ್ನು ರಾ॰ ರಾ॰ ಕೃಷ್ಣಾಚ
ಬಾಳಾಜೀ ಕೆತೂರ, ಪೆಡ್ಡಿ ಮಾಸ್ತರ ನಂದಗಡ, ಇವರು ನ
ಪೆ ದಶಂಬರ ಸನ್ ೧೯೧೫ ಇಸವಿ ಮಥಪತಕೆಯಲ್ಲಿ ಪ್ರ
ಸಿದ್ಧ ಪಡಿಸಿದ್ದು, ಇದರಲ್ಲಿ ಕೆಲವ್ರ ಮಾತ್ರೆಗಳು ಕವಿತಾ
ದ್ಧತಿಗೆ ಅನುಸರಿಸದಿದ್ದ ಕಾರಣ ಈ ಶ್ಲೋಕಗಳು ತಪ್ಪಿರು
ವ್ರೋ? ಅಥವಾ ಕವಿತಾ ವದ್ಧತಿಯೇ ಅಶುದ್ಧವಿರುವದೋ
ಎಂದು ಕಡುಭ್ರಾಂತಿ ಉಂಟಾಗಿರುತ್ತದೆ. ಮತ್ತು ಸದರಿ
ತಾಲೂಕ್ಯೆಕಿ ಹಲಸಗೀ ಶಾಲೆಯ ಹೆಡ್ಡಮಾಸ್ತರರಾದ ರಾ
ರಾ॰ ರಂಗೋ ಬಾಳಾಜೀ ಕುಲಕರ್ಣಿ ಇವರು ಮಾಡಿದ ಕೆ

REGISTERED NO. 61
1876

FEB 11

ಜಾಹಿರಾತು.

ಬೇವ್ಹೂರ ಕ್ರತ ಹಿಂದುಸ್ಥಾನ ಇತಿಹಾಸ, ಕ್ರ. ೧೮ ಅಣೆ, ಟ. ಹಾ. ೨ ಅಣೆ, ಇಂಗ್ರಜೀ ೨ ನೇ ಬುಕ್ಕನ ಸಲೆಬಲ ಬಿಡಿಸಿದ ಳ್ಯಕ್ಸೆಂಟ ಸಹಿತ ಸ್ಪೆಲು, ಉಚ್ಚಾರ, ಅರ್ಥ ಸಹಿತ ಶಬ್ದ ಸಂಗ್ರಹ ಕ್ರ. ೪ ಅಣೆ ಟ. ಹಾ. ೫ ಕ್ಕೆ ೨ ಅಣೆ. ರಾ. ಹ. ಬೇವ್ಹೂರ ಇ. ಮ್ಹಾ. ಹಳ್ಯಾಳ ಇವರ ಹತ್ತರ ಶಿಗುತ್ತವೆ. ಹಣ ಕಳಿಸಿದರೆ ಬಹಪ್ರ ತೇವ್ರ ರವಾನೆ ಆಗುವಪ್ಪ.

ಕನ್ನಡ ಶಾಲಾಪತ್ರಿಕೆ

CANARESE

SCHOOL PAPER.

ಪುಸ್ತಕ ೧೨] [ಸಂಚಿಕೆ ೧೦

ತಾರೀಖು ೨೫ ಮಾಹೆ ಜಾನೇವಾರಿ ೧೮೭೨.

ಅನುಕ್ರಮಣಿಕೆಯು.

ವಿಷಯಗಳು..... ಪುಟ.

ವಿದ್ಯಾ ಸುಧಾರಣಾ ಸಂಬಂಧದ ವೃತ್ತಾಂತಗಳು..... ೫೦೫
ಪರಭಾಷೆಗಳನ್ನು ಕಲಿಯುವಪದ್ಧತಿಯು ೫೧೧
ಭಾಷಾಂತರಣ..... ೫೨೩
ಪದಾರ್ಥವಿಜ್ಞಾನ ಸಂಬಂಧದ ಪ್ರಶ್ನೋತ್ತರಗಳು..... ೫೨೬
ಬಾಡಾವಿ..... ೫೩೨
ಪತ್ರವ್ಯವಹಾರವು..... ೫೩೬

CONTENTS..... Page
Educational Intelligence..... 505
Correspondence 526



BELGAUM.

Printed at the "Belgaum Samachar" Press.

ಪ್ರತಿಗಳು
ಕನ್ನಡ ಗಂಡು ಮಕ್ಕಳ ಶಾಲೆ
ಬೆಳಗಾವಿ ಇಂದ ಮಾರಲ್ಪಟ್ಟವು.

ಶಾಲಾಪತ್ರಕವ್ಯ.

ಪುಸ್ತಕ ೩೭] [ಸಂಚಿಕೆ ೧೦

ತಾರೀಖು, ೩೫ನೇ ಮಾಹೆ ಜಾನೇವಾರಿ, ೧೮೭೩.

EDUCATIONAL INTELLIGENCE.

ವಿದ್ಯಾಸುಧಾರಣಾಸಂಬಂಧವಾದ ವೃತ್ತಾಂತಗಳು.

ಪುಣೆಯಲ್ಲಿರುವ "ಡೆಕ್ಕನ್ ಕಾಲೇಜ ಕ್ಲಬ" ಯೆಂಬ ಸಭೆಯವರು ಕಳಿದ ೧೪ ವರ್ಷಗಳಲ್ಲಿ ಪ್ರಸಿದ್ಧಿಸಲ್ಪಟ್ಟಂಥ ಯಾವತ್ತು ಕವಿತಾ ಗ್ರಂಥ ಗಳಲ್ಲಿಯೂ ನಾವೆಲ್ಸೆಂಬ ಕಾದಂಬರಿಗಳಲ್ಲಿಯೂ ಕಂಡು ಬರುವಂಥ ಗುಣದೋಷಗಳನ್ನು ಯಥಾರ್ಥವಾಗಿ ವಿಂಗಡಿಸುವಂಥ ಮೇಲಾವ ನಿಬಂಧ ಬರೆದವರಿಗೆ ೫ ರೂಪಾಯಿ ಇನಾಮು ಕೊಡುವೆವೆಂದು ಜಾಹೀರ ನಾಮೆಯನ್ನು ಪ್ರಕಟಿಸಿರುತ್ತಾರೆ. ಈ ನಿಬಂಧ ಕರ್ತರು ಮಾರ್ಚ ತಿಂಗಳಿನ ೩೧ನೇ ತಾರೀಖಿನ ವರೆಗೆ ತಮ್ಮ ತಮ್ಮ ನಿಬಂಧಗಳನ್ನು ಕಮಿಟಿಯ ಬಳಿಗೆ ಕಳುಹ ಬೇಕಾಗಿದೆ. ಇದಾ ಇಕ್ಕಟ್ಟಾದ ನಿಬಂಧಕ್ಕೆ ಕೊಡ ಮಾಡಿದ ಹಣವನ್ನು ಕೊಡುವ ಮಾಡಿದ ಅವಧಿಯೂ ಬಹಳ ಸ್ವಲ್ಪವೆಂದು ಎಜೂಕೇಶನಲ್ ರಿಕಾರ್ಡ ಕರ್ತರ ಅಭಿಪ್ರಾಯ ವಿದ್ವಂತನನ್ನಾದಾದರೂ ಅಭಿಪ್ರಾಯವದೆ.

ಈ ವರ್ಷ ಬೀ. ಏ. ಪದವಿಯ ಪರೀಕ್ಷೆಯಲ್ಲಿ ಎಲ್ಫಿನ
ಸ್ಟನ್ ಕಾಲೇಜಿನ ವಿದ್ಯಾರ್ಥಿಗಳು ೨೭ ಜನರು ಡೆಕ್ಕನ
(ಪೂಣೆಯ) ಕಾಲೇಜಿನವರು ೭ ಜನರು ಪಾಸಾದರು.

ಲಂಡನ್ ಪಟ್ಟಣದಲ್ಲಿ "ಸ್ಕೂಲ್ ಬೋರ್ಡ್" ಎಂಬ
ದೊಂದು ಸಭೆಯುಂಟು. ಅದರಲ್ಲಿ ಕೆಲವರು ಹೊಸ ಸಭಾಸದ
ರು ಕಳಿದ ತಿಂಗಳಲ್ಲಿ ನೇಮಿಸಲ್ಪಟ್ಟರು. ಅವರೊಳಗೆ ಮಿಸ್
ಹೀಲನ್ ಟೇಲರ್ ಎಂಬುವಳೊಬ್ಬಿ ಸ್ತ್ರೀಯಳು ಸಭಾಸದಳ
ಗಿರುತ್ತಾಳೆ. ಇವಳು ಅರ್ಥಶಾಸ್ತ್ರ ನ್ಯಾಯ ಶಾಸ್ತ್ರಗಳಲ್ಲಿ
ಹೆಸರು ಪಡೆದವನಾದ ಜಾನ್ ಸ್ಟ್ಯುವರ್ಟ ಮಿಲ್ಲನೆಂಬ ವಿದ್ವಾಂ
ಸನ ಸೋದರ ಸೋಸೆಯಂತೆ.

ವಿಲಾಯತಿಯಲ್ಲಿ ಮೆಲ್ಬೋರ್ನೆಂಬ ಪಟ್ಟಣದಲ್ಲಿ ಕಳಿದ
ಜುಲಾಯ್ ತಿಂಗಳಲ್ಲಿ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆ ಯಾ
ಯಿತು. ಆ ಪರೀಕ್ಷೆಗೆ ಹೋದ ೫೫ ಜನ ವಿದ್ಯಾರ್ಥಿಗಳಲ್ಲಿ
೩೩ ಮಂದಿ ಹೆಂಗಸರಿದ್ದರು. ಈ ಸ್ತ್ರೀಯರಲ್ಲಿ ೬ ಮಂದಿ ಪಾ
ಸಾದರು. ಉಳಿದ ೪೨ ಮಂದಿ ಗಂಡು ವಿದ್ಯಾರ್ಥಿಗಳಲ್ಲಿ ೭
ಜನ ಮಾತ್ರ ಪಾಸಾದರು. ಮತ್ತು ಈ ೫೫ ಜನರು ಸಿವಿಲ್
ಸರ್ವೀಸಿನ ಪರೀಕ್ಷೆಗೆ ಕೂಡ್ರಲಾಗಿ. ಅದರಲ್ಲಿ ೬ಮಂದಿ ಹೆಂ
ಗಸರೂ, ೧೨ ಮಂದಿ ಗಂಡಸರೂ ಪಾಸಾದರು.

ಇಂಗ್ಲಿಷ ವರ್ಣಮಾಲೆಯಲ್ಲಿ ಕೆಲವ್ವ ವರ್ಣಗಳಿಗೆ ಒಂದ
ಕ್ಕಿಂತ ಹೆಚ್ಚು ಉಚ್ಚಾರಗಳೂ, ಕೆಲವು ಉಚ್ಚಾರಗಳಿಗೆ
ಒಂದಕ್ಕಿಂತ ಹೆಚ್ಚು ವರ್ಣಗಳೂ ಇರುತ್ತವೆ. ಇದರಿಂದ ಶ
ಬ್ದಗಳನ್ನು ಬರೆಯುವದರಲ್ಲಿ ಬಹಳ ತೊಂದರೆ ಯುಂಟಾಗು

ದೆಂಬದು ಪ್ರಸಿದ್ಧವದೆ. ಈ ತೊಂದರೆಯನ್ನು ಪರಿಹರಿಸುವ
ಕ್ಕೋಸ್ಕರ, ಅಂದರೆ ೫ಂದೊಂದು ಪೈಸಕ್ಕೆ ಐದೊಂದೇ
ಸಚ್ಚಾರವನ್ನು ಗೊತ್ತು ಮಾಡುವದಕ್ಕೋಸ್ಕರ ವಿಲಾಯತಿ
ರುಲ್ಲಿ ವಿದ್ಯಾಸಂಬಂಧವಾದದ್ದೊಂದು ಸಮಾಜದ ಜನರು ದೀ
ರ್ಘ ಪ್ರಯತ್ನವನ್ನು ನಡಿಸಿದ್ದಾರೆ. ಆದರೆ ಲಂಡನ್ ಟೈಮ್ಸ
ಮೊದಲಾದ ಪ್ರಮುಖ ವರ್ತಮಾನಪತ್ರಕರ್ತರು ಈ ಪ್ರಯ
ತ್ನವನ್ನು ಜರೆಯುತ್ತಾರೆ.

ಕಳಿದ ನಾಲ್ಕು ವರ್ಷಗಳಲ್ಲಿ ಕೊಲ್ಲಾಪುರ, ಬೆಳಗಾವಿ ಧಾ
ವಾಡ, ಈ ಮೂರು ಹಾಯ್‌ಸ್ಕೂಲುಗಳ ವಿದ್ಯಾರ್ಥಿಗಳು
ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪಾಸ ಆದ ವಿವರು:-

	೧೮೭೩	೧೮೭೪	೧೮೭೫	೧೮೭೬
ಕೊಲ್ಲಾಪುರ-	೧೩	೧೨	೨೦	೫
ಬೆಳಗಾವಿ-	೭	೮	೭	೨
ಧಾರವಾಡ-	೧೩	೫	೧೫	೮

ಮದ್ರಾಸ ಇಲಾಖೆಯ ಸ್ಕೈಡಾವೆಟಂಬಲ್ಲಿ ಒಳಗಡೆಯಲ್ಲಿ
ಸ್ಥಾಪಿಸಲ್ಪಟ್ಟ, ಒಕ್ಕಲತನದ ವಿದ್ಯವನ್ನು ಕಲಿಸುವ ವಿದ್ಯಾ
ಲಯದಲ್ಲಿ ಯಾವತ್ತು ಇಲಾಖೆಗಳಿಂದ ಹೋದ ವಿದ್ಯಾರ್ಥಿಗಳ
ಸಂಖ್ಯೆಯು ಮಿತಿ ಮೀರಿ ಬೆಳೆದದರಿಂದ. ಅವರೆಲ್ಲರ ಸಮಾವೇ
ಶವಾಗುವಂತೆ ದೊಡ್ಡ ಬೊಂಬು ಶಾಲಾಗೃಹವನ್ನು ಕಟ್ಟಿಸುವ
ವಿಲೋಚನೆಯು ಆ ಇಲಾಖೆಯ ಸರಕಾರದವರಲ್ಲಿ ನಡೆದದೆ.

ಹಿಂದುಸ್ಥಾನ ಸರಕಾರದವರ ತರಾವು ನಂಬರು ೧೬೪೯,
ಈ ೧೯ ನೇ ಅಗಟಂಬರು ೧೮೭೬:-

ಈ ಠರಾವಿನಲ್ಲಿ ಬಹು ಜನರು ಸರಕಾರೀ ನೌಕರರ ವ್ಯೆಟ್ಟುಗೂಡಿ ವರಿಷ್ಠಾಧಿಕಾರಿಗಳಿಗೆ ಆರ್ಜಿಗಳನ್ನು ಕಳುಹ ಲಾಗದೆಂಬಬಗ್ಗೆ ಸದರೀ ಸರಕಾರದವರು ವಿಧಿಸಿದ ನಿಯಮ ಗಳು ಹ್ಯಾಗಂದರೆ.—

೧ ಸರಕಾರಕ್ಕೆ ಆರ್ಜಿಯನ್ನು ಕಳುಹಲಿಚ್ಛಿಸುವ ಆಫೀಸ ರರು ತಮ್ಮ ಆರ್ಜಿಗಳನ್ನು ಬೇರೆ ಬೇರೆ ಯಾಗಿ ಕಳುಹಿಸ ಕ್ಕದ್ದು. ಬಹು ಜನರು ಕೂಡಿ ಒಂದೇ ಆರ್ಜಿಯನ್ನು ಕಳು ಹಿಸ ಕೂಡದು.

೨ ಯಾವನೊಬ್ಬ ಆಫೀಸರನು, ತನ್ನ ಆಫೀಸಿನ ವದಕ್ಕೆ ಸಂಬಂಧಿಸಿದಾಗ್ಯೂ ಸ್ವತಃ ತನಗೆ ಸಂಬಂಧಿಸದಂಥ ಪ್ರಸಂ ಕ್ತಿಯಲ್ಲಿ. ತಮ್ಮ ಕೆಲಸದಲ್ಲಿ ತಾವೇ ಆರ್ಜಿಯನ್ನು ಮಾಡಿ ಕೊಳ್ಳಲಿಕ್ಕೆ ಅಸಮರ್ಥರಾಗಿದ್ದಂಥ ಬೇರೆ ಜನರ ವೊಖತ್ಯಾ ರನಾಗಿ, ಸರಕಾರಕ್ಕೆ ಆರ್ಜಿಯನ್ನು ಕಳುಹಲಾಗದು.

೩ ಛಾಪಿಸಿದ ಆರ್ಜಿಯನ್ನು ಸರಕಾರೀ ನೌಕರರು ಯಾ ರೂ ಕಳುಹಲಾಗದು.

೪ ಬಹು ಜನರು ಕೂಡಿ ಬರೆಯ ತಕ್ಕಂಥ ವಿಳಾಸ ಪ ದ್ಧತಿಗಳಿಂದ ಆರ್ಜಿಯನ್ನು ಯಾರೂ ಸರಕಾರೀ ನೌಕರರು ಬರೆಯಲಾಗದು. ಅರ್ಜಿದಾರನು ತನ್ನ ಸ್ವಂತ ಕಬ್ದಗಳಿಂದ ಸನ್ಮಾನಪೂರ್ವಕವಾಗಿ ತಕ್ಕ ಮರ್ಯಾದೆಯಿಂದ ಆರ್ಜಿಯ ನ್ನು ಬರೆಯಬೇಕು.

೫ ಈ ನಿಯಮಗಳಿಗೆ ವಿರುದ್ಧವಾಗಿ ಕಳುಹಲ್ಪಟ್ಟ ಆ ರ್ಜಿಗಳನ್ನು ವರಿಷ್ಠಾಧಿಕಾರಿಗಳು ಲಕ್ಷಿಸಲಿಕ್ಕಿಲ್ಲ; ಮತ್ತು ಅಂ ಥಾ ಆರ್ಜಿಗಳನ್ನು ಕಳುಹ್ಸುವ ಆಫೀಸರರು ಸರಕಾರದವರ ಭಾರೀ ಎತರಾಜಿಗೆ ಮಾತ್ರ ಗುರಿಯಾಗುವರು.

ಪರ ಭಾಷೆಗಳನ್ನು ಕಲಿಯುವ ಪದ್ಧತಿಯು.

೪೨೨.

ಯಾವದೊಂದು ಭಾಷೆಯನ್ನು ಕಲಿಯುವದರಲ್ಲಿ. ಅದನ್ನು ಪ್ರಯೋಗಿಸುವದೂ, ಅವನ್ನು ತಿಳಿದುಕೊಳ್ಳುವದೂ ಇವೆರಡು ಮುಖ್ಯ ವಿಷಯಗಳುಂಟು. ಪ್ರಯೋಗಿಸುವದೆಂದರೆ ಆ ಭಾಷೆಯಲ್ಲಿ ಮಾತನಾಡುವದೂ ಬರೆಯೂಪದೂ; ಅದನ್ನು ತಿಳಿದುಕೊಳ್ಳಲಿಕ್ಕೆ ಓದುವದೂ ಕೇಳುವವೂ ಇವೆರಡು ಮಾರ್ಗಗಳುಂಟು.

ಭಾಷೆಗಳನ್ನು ಕಲಿಯಲಿಕ್ಕೆ ಸ್ವಾಭಾವಿಕ ಕ್ರಮವುಳ್ಳ ಸುಲಭ ಮಾರ್ಗವೊಂದು ಇರಲಿಕ್ಕೆ ಬೇಕು. ಯಾಕಂದರೆ ಚಿಕ್ಕವರಿದ್ದಾಗ ನಾವೆಲ್ಲರೂ ನಮ್ಮ ನಮ್ಮ ಜನ್ಮಭಾಷೆಗಳನ್ನು ಏನೇನು ಶ್ರಮವಿಲ್ಲದೆ ಬಹು ಸ್ವಲ್ಪ ಕಾಲದೊಳಗೆ ಕಲಿತೆವು. ಹತ್ತು, ಹನ್ನೆರಡು ವರ್ಷದ ಹುಡುಗರನ್ನು ಪರ ದೇಶಕ್ಕೆ ಕರೆಕೊಂಡು ಹೋದರೆ ಆ ಹುಡುಗರು ಅಲ್ಲಿಯ ಭಾಷೆಯನ್ನು ಇದಕ್ಕೂ ಸ್ವಲ್ಪ ಕಾಲದೊಳಗೆ ಕಲಿಯುತ್ತಾರೆ.

ಈ ಪ್ರಸಕ್ತಿಯಲ್ಲಿ ಕೆಲಜನರ ಅಭಿಪ್ರಾಯವೇನಂದರೆ ದೊಡ್ಡವರಂತೆ ಹುಡುಗರಮನಸ್ಸಿನಲ್ಲಿ ಬಗೆಬಗೆಯ ಭಾವನೆಗಳು ತುಂಬಿರುವದಿಲ್ಲ; ಅದರಿಂದ ಅವರ ಮನಸ್ಸಿನಲ್ಲಿ ಶಬ್ದಗಳನ್ನು ಸಂಗಹಿಸುವ ಸಾಮರ್ಥ್ಯವು ದೊಡ್ಡವರಿಗಿಂತ ಹೆಚ್ಚಿರುವಕಾರಣ ಅವರು ಹೊಸ ಭಾಷೆಯನ್ನು ಬೇಗ ಕಲಿಯುವದು ಸ್ವಾಭಾವಿಕವು. ಆದರೆ ಬಾಲಕರ ಜ್ಞಾನೇಂದ್ರಿಯಗಳು ಪಕ್ವವಾಗಿರುವದಿಲ್ಲ; ತಮ್ಮ ಸುತ್ತುಮುತಲಿನ ಪದಾರ್ಥಗಳ ಅನುಭವವು ಅವರಿಗಿರುವದಿಲ್ಲ; ಅದರಿಂದ ಸಾವಿರಾರು ಹೊಸ ಸಂಗತಿಗಳ

ನ್ನು ಕಲಿತುಕೊಳ್ಳಲಿಕ್ಕೆ ಅವರು ಹಣಗಿಸುತ್ತಿರುತ್ತಾರೆ. ಹೀ
ರಲು ಅವರು ಭಾಷೆಯನ್ನಾಗಲಿ ಬೇರೊಂದು ಸಂಗತಿಯನ್ನಾ
ಗಲಿ ವ್ಯಾಯಸ್ಥರಿಗಿಂತ ಹೆಚ್ಚು ಬೇಗ ಹ್ಯಾಗೆ ಕಲಿಯುವರು
ಆದಾಗ್ಯೂ ಚಿಕ್ಕವರು ಭಾಷೆಗಳನ್ನು ಬೇಗ ಕಲಿಯುವದ
ನಿರ್ವಿವಾದವು. ಇದರಿಂದ, ಸ್ವಾಭಾವಿಕ ಕ್ರಮವಂನು ಅನು
ರಿಸಲಾಗಿ ಭಾಷೆಗಳಂನು ಬಹ್ಯ ಬೇಗ ಕಲಿಯಬಹ್ಯದೆಂದ
ನಾವ್ರ ತರ್ಕಿಸುತ್ತೇವೆ. ಸ್ವಲ್ಪ ಹೆಚ್ಚಿಗೆ ಬೆಳೆದ ಹ್ರುಡುಗರ
ಪರ ಭಾಷೆಯನ್ನು ತಮ್ಮ್ರ ಜನ್ಮ್ರ ಭಾಷೆಗಿಂತಲೂ ಹೆಚ್ಚು ಬೇಗ
ಕಲಿಯುತ್ತಾರೆಂದು ಮೇಲೆ ಹೇಳಿದೆವಷ್ಟೇ; ಇದರಿಂದ ಹ್ರುಡು
ಗರು ತಮ್ಮ್ರ ಸ್ವಂತ ಪದ್ಧತಿಯಿಂದ ಕಲಿಯುವದರ ಫಲವ
ವ್ಯಕ್ತ ವಾಗುತ್ತದೆ. ಅದೇ ಪದ್ಧತಿಯನ್ನು ನಾವ್ರ ಅನುಸರಿ
ಸಿದರೆ, ಅವರಿಗಿಂತಲೂ ಹೆಚ್ಚಿನ ಫಲವಂನು ಪಡೆಯುವೆವ್ರ
ಯಾಕಂದರೆ ನಮಗಾದ ಬಗೆ ಬಗೆಯ ಅನುಭವಗಳಿಂದ ನ
ಮ್ಮ್ರ ಮನಸ್ಸು ಹೆಚ್ಚಿಗೆ ವಿಶದ ವಾಗಿರುತ್ತದೆ.

ಈ ತರ್ಕವನ್ನು ದೃಢ ಪಡಿಸುವಕಾರಣ ವಿನ್ಸ್ಲೊಂದೇ
ನಂದರೆ, ಕೆಲಜನರು ವ್ಯಾಯ ಮೀರಿದ ವಯಸ್ಸಿನಲ್ಲಿ ಸಹ
ಹಲವ್ರೆ ಭಾಷೆಗಳನ್ನು ಬಹ್ಯ ಹಗುರಾಗಿ ಕಲಿಯುತ್ತಾರೆ. ಕ
ರ್ಡಿನಲ್ ಮೆಝಿ ಫಾಂತಿ ಯೆಂಬವನು ವೃದ್ಧ ವಯಸ್ಸಿನಲ್ಲಿ
೩೦ ಭಾಷೆಗಳನ್ನು ಸಮರ್ಪಕವಾಗಿ ಕಲಿತನು. ಓಗಿಲ್ಬಿ ಎಂ
ಬವನು ೪೦ ವರ್ಷ ಮೀರಿದ ಬಳಿಕ ಲಾಟಿನ್ ಗ್ರೀಕ ಭಾಷೆ
ಗಳನ್ನು ಕಲಿತು ಆ ಭಾಷೆಗಳಿಂದ ಮೇಲಾದ ಕಾವ್ಯಗಳಂನ
ಭಾಷಾಂತರಿಸಿದನು. ನಮ್ಮ್ರ ಕರ್ನಾಟಕ ಶೀಮೆಯಲ್ಲಿ ನಹ
ಲಗುಂದದ ಜಾಯಪ್ಪ ದಿಸಾಯಿಯು ೧೮ ಭಾಷೆಗಳಂನು ತ
ನ್ನ್ರ ಭಾಷೆಯಂತೆ ಆಡುತ್ತಿದ್ದನೆಂದು ಕೇಳುತ್ತೇವೆ. ಹ್ರೊ
ಭಾಷೆಯನ್ನು ಕಲಿಯುವ ಆರಂಭದಲ್ಲಿ ಅನಕ್ಷರಸ್ಥನಾದ ಪು

ಗಳು ದೊಡ್ಡದೊಂದು ಅಡವಿಯ ಹಾಗೆ ನಮ್ಮ ಕಣ್ಣೆದುರಿಗೆ ಕಾಣುತವೆ. ಆದರೆ ಒಳಿತಾಗಿ ಹೃದುಕಿ ಆ ಅಡವಿಯಲ್ಲೊಂದು ದಾರಿಯನ್ನು ತೆಗಿದು ಸ್ವಲ್ಪ ಮುಂದಕ್ಕೆ ಸಾಗಿದ ಬಳಿಕ, ಅದನ್ನು ದಾಟಿ ಹ್ರೋಗಲಿಕ್ಕೆ ಮೊದಲಿನಷ್ಟು ಕಷ್ಟ ತೋರುವದಿಲ್ಲ.

ಶಿಷ್ಟಕನಿಲ್ಲದೆ ಪರ ಭಾಷೆಯನ್ನು ಕಲಿಯ ಕೂಡದೆಂದು ಕೆಲವರ ಗ್ರಹಿಕೆಯುಂಟು. ಶುದ್ಧೋಚ್ಚಾರಗಳನ್ನು ನಮಗೆ ತಿಳಿಸಿ ಹೇಳಲಿಕ್ಕೆ ಕೆಲವ್ರೊಬ್ಬ ಸಹಾಯಕನು ಆರಂಭದಲ್ಲಿ ಬೇಕೆಂಬದಕ್ಕೆ ಸಂದೇಹವಿಲ್ಲ. ಆದರೆ ಯಾವದೊಂದು ಭಾಷೆಯಲ್ಲಿ ಓದಲಿಕ್ಕೂ ಬರೆಯಲಿಕ್ಕೂ ಪರರ ಸಹಾಯವೆಷ್ಟು ಮಾತ್ರವ್ರೂ ಬೇಡ; ಕೈಯಲ್ಲೊಂದು ಪುಸ್ತಕವಿದ್ದರೆ ಸಾಕು. ಮೇಲಾದ ಶಿಷ್ಟಕರಿಂದ ಕಲಿಸಲ್ಪಟ್ಟ ವಿದ್ಯವ್ರ ಸರ್ವಕಾಲವ್ರೂ ಸರಿಯಾಗಿ ಫಲಿಸುವದಿಲ್ಲ. ಯಾಕಂದರೆ ವಿದ್ಯಾಭ್ಯಾಸದ ಕೆಲಸದಲ್ಲಿ ಕಲಿಯುವವನ ಪ್ರಯತ್ನದಷ್ಟು ಕಲಿಸುವವನ ಪ್ರಯತ್ನವ್ರು ಆವಶ್ಯಕವಲ್ಲ.

ಶಾಲೆಯಲ್ಲಿ ಮೊದಲನೇ ಸ್ಥಲ ಪಡೆದವನು ಪ್ರಥಮಾದಬಳಿಕ ವಾಡಿಕೆಯಾಗಿ ಮಂದಮತಿಯೆನಿಸಿ ಕೊಳ್ಳುತಾನೆ. ಎಷ್ಟೋ ಶಾಲೆಗಳಲ್ಲಿ ಈಗ ವಿಪರೀತ ಕ್ರಮವಾಗಿ ನಡೆಯುವ ವಿದ್ಯಾಭ್ಯಾಸದ ಮೇಲಾದ ವಿದ್ಯಾರ್ಥಿಯೆಂದು ಹೆಸರು ಪಡೆದವನು ಮೇಲಾದ ಮನುಷ್ಯನೆಂದೆಂದೂ ಅನಿಸಿ ಕೊಳ್ಳದೆ ಕಡೆತನಕ ಮೇಲಾದ ವಿದ್ಯಾರ್ಥಿಯೇ ಆಗಿ ಬದುಕ ಬಹುದು. ಆದರೆ ಶಾಲೆಯಲ್ಲಿ ಕೆಲ ಬಾಲಕರು ಎಡರೆಂದು ಹೇಳಲ್ಪಡುತ್ತಾರೆ. ಅವರು ತಮ್ಮ ಸ್ವಂತ ಮನಸಿಗೆ ತಿಳಿದ ಮಾರ್ಗದಿಂದ ಅಭ್ಯಾಸ ಮಾಡಲಾಗಿ, ಆ ಮಾರ್ಗವ್ರು ಶಿಷ್ಟಕರಿಗೆ ಚನ್ನಾಗಿ ತಿಳಿಯದ ಕಾರಣ, ಅವರು ಅದಂಸು ಮೇರೆ ಮುಖವಿಲ್ಲದ

ಅಡ್ಡ ದಾರಿಯಿಂದು ಜರೆಯುತ್ತಾರೆ. ಇಂಥಾ ಹುಡುಗರು ತಮ್ಮಲ್ಲಿ ಹುದುಗಿರುವ ಬುದ್ಧಿ ಕೌಶಲ್ಯವನ್ನು ವ್ಯಾಯದಲ್ಲಿ ಪ್ರಕಟಿಸಿ, ತಮ್ಮ ಸಂಗಡಿಗರಲ್ಲಿ ಶ್ರೇಷ್ಠರಾಗುವರು. ಸ್ವಂತ ಬುದ್ಧಿಯಿಂದ ವಿದ್ಯಾವನ್ನು ಕಲಿತು ಕೊಂಡಂಥ ಮನುಷ್ಯನು ವ್ಯವಹಾರದಕ್ಷನಾಗುತ್ತಾನೆ. ಸ್ವಂತ ಬುದ್ಧಿಯಿಂದ ಉದ್ಯೋಗ ಮಾಡುವವರೇ ದೊಡ್ಡ ಮನುಷ್ಯರಾಗುತ್ತಾರೆ; ಸ್ವಂತ ಬುದ್ಧಿಯಿಂದ ವಿದ್ಯಾಭ್ಯಾಸ ಮಾಡುವವರೇ ಘನವಿದ್ವಾಂಸರಾಗುತ್ತಾರೆ.

ಆದರೆ ಶಿಕ್ಷಕನನ್ನು ಬಯಸದೆ ವಿದ್ಯವನ್ನು ಕಲಿತು ಕೊಳ್ಳುವದು ಲೇಸೆಂದು ನಾವು ಮಾಡಿಸುವದಿಲ್ಲ. ಇಕ್ಕಟ್ಟಿನ ಸ್ಥಳಗಳಲ್ಲಿ ಶಿಕ್ಷಕನ ಸಹಾಯ ಪಡಿದರೆ ಸ್ವಲ್ಪ ಕಮದಿಂದ ಅಲ್ಪ ಕಾಲದೊಳಗೆ ಬಹು ವಿಷಯಗಳನ್ನು ಕಲಿಯ ಬಹುದು. ಆದರೆ ಶಿಕ್ಷಕನು ಸಹಾಯ ಮಾತ್ರ ಮಾಡ ತಕ್ಕವನನ್ನೇ ಹೊತ್ತು ಇಂಥಿಂಥ ಬಗೆಯಿಂದ ಕಲಿಯೆಂದು ಆಜ್ಞಾಪಿಸ ತಕ್ಕವನಲ್ಲ. ಕೆಲಸಕ್ಕೆ ಬಾರದೆ ಬೇಸರ ಪಡಿಸುವಂಥ ಸಂಗತಿಗಳನ್ನು ಕಲಿಯು ಹೇಳಿ ಶಿಕ್ಷಕನು ಕಲಿಯುವವನನ್ನು ಯೆಷ್ಟು ಮಾತ್ರವೂ ತೊಂದರೆ ಪಡಿಸಬಾಗದು. ಯಾವದೊಂದು ನಡೆಯುವ ಪದ್ಧತಿಗನುಸಾರವಾಗಿ ವಿದ್ಯಾರ್ಥಿಗಳ ಬುದ್ಧಿಯನ್ನು ತಿದ್ದಲ ಪೇಕ್ಷಿಸುವ ಶಿಕ್ಷಕನು ತಕ್ಕ ಶಿಕ್ಷಕನಲ್ಲ. ನಾವು ನಮ್ಮ ಸ್ವಂತ ಪ್ರಯತ್ನದಿಂದ ಸಂಪಾದಿಸಿವ ಜ್ಞಾನವೇ ಸ್ಥಿರವಾಗಿ ನಿಲ್ಲುತ್ತದೆ. ಆ ನಮ್ಮ ಪ್ರಯತ್ನಕ್ಕೆ ಶಿಕ್ಷಕನ ಸಹಾಯವಿದ್ದರೆ ಲೇಸು. ಆದರೆ ಶಿಕ್ಷಕನು ಎಂಥಾ ಸಮರ್ಥನಿದ್ದಾಗ್ಯೂ ಬೊಡ್ಡಿಯಿಂದ ಕೊನೆವರಗೆ ಅವನಂನು ಹಿಂಬಾಲಿಸಿದರೆ, ವ್ಯರ್ಥ ಕಾಲಹರಣ ಮಾತ್ರ ವಾಗುತ್ತದೆ ಅವನು ನಮಗೆ ಕಲಿಯುವ ಮಾರ್ಗವನ್ನು ತೋರಿಸಬಹುದು; ಆದರೆ ನಮ್ಮ ಸಲುವಾಗಿ ತಾನೇ ಕಲಿ

ಯ ಲಾರನು. (ಮುಂದಕ್ಕೆ ಸಾಗುವದು)

ಭಾಷಾದರ್ಪಣ.

———೦೦೦———

೪ ಸ್ವರವಿವರಣ— ಸ್ವ+ರ (ರಂಜ್=ಸಂತೋಷಿಸು) ಭಾಷೆಯಲ್ಲಿ ಸ್ವತಃ ಸಂತೋಷ ಕೊಡುವವು ಅಥವಾ ಕೋಭಿಸುವವು.

(೧) ಹ್ರಸ್ವಸ್ವರ (ಸಂಸ್ಕೃತದಲ್ಲಿ)-'ಅಇ, ಇ, ಈ, ಉಊ, ಋಋೂ ೠೠ' ಇವು ಹತ್ತು ವರ್ಣಗಳು ಎರಡೆರಡು ಸವರ್ಣಗಳಿದ್ದದರಿಂದ ಇವುಗಳಿಗೆ ಸಮಾನಸ್ವರವೆಂತಲೂ ಹೆಸರು. (ಶ. ೬ನೇ ಸೂ.)

(೨) ಸಂಧಿಸ್ವರ (ಸಂಸ್ಕೃತದಲ್ಲಿ)-ಏ (ಅ+ಇ), ಓ (ಅ+ಉ), ಈ ಮೇರೆಗೆ 'ಅ' ಕಾರದ ಮೇಲೆ ಅಸಮಾನ ಸ್ವರಗಳು ಕೂಡಿ ಆದದರಿಂದ ಇವುಗಳಿಗೆ ಸಂಧಿಸ್ವರವೆಂಬ ಹೆಸರು.

(೩) ಮಿಶ್ರಸ್ವರ (ಸಂಸ್ಕೃತದಲ್ಲಿ)-'ಐ (ಅ+ಏ), ಔ (ಅ+ಓ) ಈ ಮೇರೆಗೆ 'ಅ' ಕಾರದ ಮೇಲೆ ಸಂಧಿಸ್ವರಗಳು ಕೂಡಿ ಆದದರಿಂದ ಇವುಗಳಿಗೆ ಮಿಶ್ರಸ್ವರವೆಂಬ ಹೆಸರು.

(೪) *ನಾಮಿ-'ಇಈ ಉಊ ಋಋೂ ೠೠ ಏ ಐ, ಓ ಔ ಇವು ಹನ್ನೆರಡು ಬಾಗಿರುವ ಕಾರಣ ಇವುಗಳಿಗೆ ನಾಮಿ ಎಂಬ ಹೆಸರು (ಶ. ೯ನೆ ಸೂ.)

---

*ನಮು'=ಬಾಗು.

(೫) ಹ್ರಸ್ವ-' ಅ, ಇ, ಉ, ಋ, ಌ, ಎ, ಒ' ಇವೇ ಳು ಒಂದೊಂದು ಮಾತ್ರೆ.†

(೬) ದೀರ್ಘ-' ಆ, ಈ, ಊ, ೠ, ೡ, ಏ, ಐ, ಓ, ಔ' ಇವು ಒಂಬತ್ತು ಎರಡೆರಡು ಮಾತ್ರೆ. ಮೂರು ಮಾತ್ರೆಗೆ ಪ್ಲುತ ವೆಂಬ ಹೆಸರು. ಉದಾ. "ಕು ಕೂ ಕೋ" ಎಂದು ಕೋಳಿ ಕೂಗಿದವಾಗಳ್ (ಕ. ೩೦ ನೇ ಸೂ.)

೯ ಕನ್ನಡದಲ್ಲಿ-' ಅಆ, ಇಈ, ಉಊ, ಎಏಐ, ಒ ಓಔ' ಇವು ಹನ್ನೆರಡೂ ಕುದ್ಧ ಸ್ವರಗಳು. ಕಾರಣ ವೇನಂದರೆ. ಇವು ಹನ್ನೆರಡೂ 'ಅ, ಇ, ಉ' ಸ್ವರಗಳಂತೆ ಸ್ವಭಾವ ಸಿದ್ಧವಾದವುಗಳಾದದರಿಂದ ಇವು ಸ್ವರಗಳ ಮೇಲೆ ಪರವಾದಾಗ ಮುಂಹೆನ ಸ್ವರಗಳು ಲೋಪವಾಗಿ ಇವೇ ನಿಲ್ಲುವವು (ಕ. ೪ನೇ ಸೂ.)

೧೦ ವ್ಯಂಜನವಿವರಣ-ವಿ+ಅಂಜನ (ಅಜ್=ಮಾತಾಡು. ಅಥವಾ ಅಂಜ್=ಸ್ಪಷ್ಟವಾಗಿ ಮಾತಾಡು. ೨ ಎಣ್ಣೆ ಹಬ್ಬು) ಭಾಷೆಯಲ್ಲಿ ವಿಶೇಷವಾಗಿ ಸ್ಪಷ್ಟೀಕರಣ ಮಾಡುವವು

(೧) ವ್ಯಂಜನಗಳಲ್ಲಿ 'ಕ' ಕಾರ ಮೊದಲೊಂಡು 'ಮ' ಕಾರದ ವರೆಗೆ ಇಪ್ಪತ್ತೈದು ವರ್ಗೀಯಗಳು; ಇವುಗಳಲ್ಲಿ 'ಕ, ಚ, ಟ, ತ, ಪ' ಎಂಬವೈದು ವರ್ಗಗಳು. ಒಂದೊಂದು ವರ್ಗದೊಳಗಿನ ಐದೈದು ವರ್ಣಗಳು ಬಾಯೊಳಗೆ ಒಂದೇ ಸ್ಥಾನದಲ್ಲಿ ಹುಟ್ಟುವ ಕಾರಣ ಒಂದೇ ವರ್ಗದವು (ಸವರ್ಣ) ಆದವು. 'ಯ' ಕಾರ ಮೊದಲೊಂಡು 'ಳ' ಕಾರದ ವರೆಗೆ ಒಂಬತ್ತು ವರ್ಣಗಳು ಬೇರೆ ಬೇರೆ ಸ್ಥಾನಗಳಲ್ಲಿ ಹುಟ್ಟುವ ಕಾರಣ ಅವರ್ಗೀಯಗಳೆನಿಸುವವು (ಕ.

† ಮಾತ್ರೆ ಅಂದರೆ ಅಕ್ಷರವನ್ನು ಉಚ್ಚರಿಸುವದಕ್ಕೆ ಹತ್ತುವ ಕಾಲ ಪ್ರಮಾಣ.

೨೩ ನೆ ಸೂ.)

(೨) ವರ್ಗಗಳ ೧ನೇ ೩ನೇ ವರ್ಣಗಳೂ 'ಯ, ರ ಲ, ವ, ಳ' ಕಾರಗಳೂ ಅಲ್ಪಶ್ರುತಿಯಿಂದ ಉಚ್ಚಾರವಾಗುವ ಕಾರಣ ಇವುಗಳಿಗೆ ಅಲ್ಪಪ್ರಾಣ* ವೆಂತಲು; ವರ್ಗಗಳ ೨ನೆ. ೪ನೆ ವರ್ಣಗಳೂ 'ಶ. ಷ, ಸ ಹ' ಕಾರಗಳೂ ವಿಶೇಷ ಶ್ರುತಿಯಿಂದ ಉಚ್ಚಾರವಾಗುವ ಕಾರಣ ಇವುಗಳಿಗೆ ಮಹಾಪ್ರಾಣ† ವೆಂತಲು ಹೆಸರು. ಮಹಾಪ್ರಾಣದ ಉಚ್ಚಾರದಲ್ಲಿ 'ಹ' ಕಾರದ ಅಂಶವುಂಟು. ಕನ್ನಡದಲ್ಲಿ ಮಹಾಪ್ರಾಣಗಳಿಲ್ಲೆಂದು ಕೆಲವರು ಅನ್ನುತ್ತಾರೆ; ಆದರೆ ಕನ್ನಡದಲ್ಲಿ ಮಹಾಪ್ರಾಣಗಳುಂಟೆಂದು ಶ ೨೫ನೆ ಸೂತ್ರದಲ್ಲಿ ಬರೆದದೆ. ಉದಾ. ತಾವ್ರ ಘಟ್ಟ, ಢೋಕಣ. ಧೂಳಿ; ಭಂಗಾರ. ಝಲ್ಲಿ, ಝಳಂ; ಝಳಕಂ; *ಘೂಸೆ ಇತ್ಯಾದಿ.

(೩) ವರ್ಗಗಳ ೫ನೆ ವರ್ಣಗಳಾದ 'ಙ, ಞ, ಣ, ನ, ಮ' ಕಾರಗಳು ನಾಸಿಕೆಯ ಸಹಾಯದಿಂದ ಉಚ್ಚಾರವಾಗುವ ಕಾರಣ ಅನುನಾಸಿಕವೆನಿಸುವವ್ರ.

(೪) ಶ ಷ ಸ ಹ, ಕಾರಗಳ ಉಚ್ಚಾರವು ಉಷ್ಮಶ್ರುತಿಯಿಂದಾಗುವ ಕಾರಣ ಇವ್ರುಗಳಿಗೆಉಷ್ಮವರ್ಣಗಳೆಂಬ ಹೆಸರು. : ಯ, ರ ಲ ವ, ಇವ್ರು ೪ ಕಮುದಿಂದ ೩ ಇ ಋ ಌ ಉ, ಇವ್ರುಗಳ ಅಂತಸ್ಥಗಳೆನಿಸುವವ್ರ. ಇವ್ರುಗಳಬಗ್ಗೆ ಮುಂ ಯಣ್ ಸಂಧಿಯಲ್ಲಿ ನೋಡಬೇಕು, ಅಂದರೆ ಮನವರಿಕೆ

---

*ಪ್ರಾಣ=ಕರೀರದೊಳಗಿನ ವಾಯು. ೨ ಪರಾಕ್ರಮ.

†ಇಂಗ್ಲೀಷಿನ ಮಹಾಪ್ರಾಣಗಳಲ್ಲಿ 'ಹ' ಕಾರದ ಅಂಶವುಂಟು. ಉದಾ. Dh=ಧ, Bh=ಭ, Ph=ಫ ಇತ್ಯಾದಿ.

*"ಘೂಸೆ ಯಾಗಿನು ಭವದೊಳು ತತ್ವದಾಕೆಯನು ತಿಳಿದು ಶಾಂತಾ ಯತಿಯು"

ಸರ್ವ ಭೂಷಣ ಕವಿ.

ಬೆಸಗುವದು.

(೫) ಕ, ಖ, ಚ, ಛ, ಟ, ಠ, ತ, ಥ, ಪ, ಫ, ಶ, ಷ, ಸ, ಇವು ೧೫ ಅಘೋಷವರ್ಣಗಳು (ಕಠಿನವರ್ಣಗಳು); ಗ, ಘ, ಙ, ಜ, ಝ, ಞ, ಡ, ಢ, ಣ, ದ, ಧ, ನ, ಬ, ಭ, ಮ, ಯ, ರ, ಲ, ವ, ಹ, ಇವು ೨೦ ಘೋಷವರ್ಣಗಳು (ಮೃದು ವರ್ಣಗಳು).

೧೧ ಯೋಗವಾಹವಿವರಣ—ಯೋಗವಾಹ (ಕೂಡಿಕೆಯನ್ನು ವಹಿಸಿರುವವು.) (೦, (ಃ) ಈ ಅನುಸ್ವಾರವಿಸರ್ಗಗಳು ಸ್ವರದಮೇಲೆ ಬರುವದರಿಂದಲೇ ಉಚ್ಚಾರವಾಗುತ್ತವಲ್ಲದೆ ಇವುಗಳಿಗೆ ಸ್ವತಂತ್ರೋಚ್ಚಾರವಿಲ್ಲ; ಆ ಕಾರಣ ಕೆಲವು ವ್ಯಾಕರಣಕಾರರು ಇವುಗಳನ್ನು ಸ್ವರಾಂಗದೊಳಗೆ ಎಣಿಸುತ್ತಾರೆ. "ಮೋನುಸ್ವಾರಃ" "ಸ್ರೋವಿಸರ್ಗಃ" ಎಂಬ ಸೂತ್ರಗಳಿಂದ ಮ್=ಂ, ಸ್ ಅಥವಾ ರ್=ಃ ಇದ್ದ ಕಾರಣ ಕೆಲವು ವ್ಯಾಕರಣಕಾರರು ಇವುಗಳನು ವ್ಯಂಜನಾಂಗದೊಳಗೆ ಎಣಿಸುತ್ತಾರೆ (೫. ೧೨ ನೆ ಸೂ.) ಇದೇ ಅರ್ಥದಿಂದ ಶಾಲಾಪಾಣಿನಿ ವ್ಯಾಕರಣಕಾರನು ತನ್ನ ೧೪ ನೆ ಪ್ರತ್ಯಾಹಾರದಲ್ಲಿ "ಸ್ವರಗಳಿಗೂ ವ್ಯಂಜನಗಳಿಗೂ ನಡುವಿನಲ್ಲಿ ಇರುವ ಅಕ್ಷರಗಳು ಯಾವವು?" ಎಂಬುದಾಗಿ ಬರೆದಿದ್ದಾನೆ. ಈ ಪ್ರಕಾರ ಅನುಸ್ವಾರ ವಿಸರ್ಗಗಳು ಸ್ವರ ವ್ಯಂಜನಗಳ ಯೋಗವನ್ನು ವಹಿಸಿರುವದರಿಂದಲೇ ಇವುಗಳಿಗೆ ಯೋಗವಾಹಗಳೆಂಬ ಹೆಸರು.

(೧) ಅನುಸ್ವಾರವು (ಂ) ಯಾವವರ್ಗೀಯಾಕ್ಷರದ ಹಿಂದೆ ಬರುತ್ತದೋ ಆ ವರ್ಗದ ಅನುನಾಸಿಕದಂತೆ ಉಚ್ಚಾರವಾಗುತ್ತದೆ. ಆ ಕಾರಣ ಅನುಸ್ವಾರಕ್ಕೆ ಬದಲಾಗಿ ಆ ಆ ವರ್ಗದ ಅನುನಾಸಿಕಕ್ಕೆ ಆ ಆ ವರ್ಗದ ಅಕ್ಷರವನ್ನು ಒತ್ತು ಬರೆದರೂ ಸಾಗುವದು. ಉದಾಃ ಕೊಂಕು = ಕೊಙ್ಕು. ಅಂಕ=ಅಙ್ಕ

ಿದು=ಅಚ್ಚಾಯ್ತು, ಚಂಚಲ=ಚಞ್ಚಲ ಗಂಡು=ಗಣ್ಡು. ಕಂಠ=
ಣ್ಠ, ಅಂತೂ=ಅನ್ತೂ, ಸಂತಾನ= ಸನ್ತಾನ ಕೆಂಮು=ಕೆಮ್ಮು ಇತ್ಯಾದಿ.

(೨) ಅವಗ್ರಹಯಗಳ ಹಿಂದಿನ ಅನುಸ್ವಾರದ ಉಚ್ಚಾರ
ಳಗೆ .ವ್. ಕಾರದ ಉಚ್ಚಾರವಾಗುವದು. ಯ, ಕಾರದ
ದಿನ ಅನುಸ್ವಾರದಲ್ಲಿ ಮಾತ್ರ ಶುದ್ಧ ಅನುಸ್ವಾರದ ಉ
ರವಾಗುತ್ತದೆ. ಉದಾಃ ಸಂಯೋಗ ಸಂರಕ್ಷಿಸು, ಸಂಲಕ್ಷ
ಸಂವತ್ಸರ, ಅಂಶ, ಹಂಸ ಸಂಹಾರ, ಸಿಂಹ ಇತ್ಯಾದಿ.

(೩) ಕನ್ನಡ ಶಬ್ದಗಳೊಳಗಿನ ಅವಗ್ರಹಯಗಳ ಹಿಂದೆ
ುಸ್ವಾರವು* ಬರುವದಿಲ್ಲ.

(೪) ವಿಸರ್ಗದ (ಃ) ಉಚ್ಚಾರಣೆಯು 'ಹ್' ಕಾರ
ಸರಿಯದೆ. ಉದಾ. ಪ್ರಾತಃಕಾಲ, ಅಂತಃಕರಣ, ಮನಃ
ವರ್ಕ ಇತ್ಯಾದಿ. (ಮುಂದೆ ಸಾಗುವದು)

ಗಂಗಾಧರ ಮಡಿವಾಳೇಶ್ವರ ತೂರಮರಿ
ಅ. ಶಾಸನಸ್ಲೇಟರ್

ಪದಾರ್ಥವಿಜ್ಞಾನ ಸಂಬಂಧವ
ಪ್ರಶ್ನೋತ್ತರಗಳು.

——— ೦೦೦ ———

ಪ್ರಶ್ನ-ಉಷ್ಣತ್ವ ಎಂದರೇನು?

ಉತ್ತರ-ನಮಗೆ ಉಬ್ಬಿಯ ಅನುಭವವನ್ನುಂಟು ಮಾಡು
ವ ಒಡವೆಯು.

---

*"ಸಂಪಟು, ಆಂಪಟು, ತಂಪಟು" ಎಂದು ಹಲಕೆಲವರು ಗ್ರಾ
ಮ್ಯೋಚ್ಚಾರದಿಂದ ನುಡಿದಾಗ್ಯೂ, ಇವುಗಳ ಸರಿಯಾದ ಉಚ್ಚಾರವು
"ಸೌಟು, ಅವಟು, ತೌಟು" ಎಂದಾಗುವದು.

ಪ್ರ.–ಈ ಅನುಭವವು ಹ್ಯಾಗೆ ಉಂಟಾಗುತ್ತದೆ?

ಉ.–ಕಣ್ಣಿಗೆ ಕಾಣಿಸದೆ ಎಲ್ಲಿ ಕಡೆಯಲ್ಲಿ ಹಬ್ಬು ಗೊಳ್ಳುವಂಥಾದ್ದೊಂದು ಪ್ರವಾಹದಿಂದುಂಟಾಗುತ್ತದೆ. ಈ ಪ್ರವಾಹವು ಪಚ್ಚೆಗೆ ಬಿಸಿಯಾಗಿದ್ದ ಪದಾರ್ಥದಿಂದ ಹೊರಟು ನಮಗೆ ತಗಲಿದರೆ, ನಮಗೆ ಕಷ್ಟವಾಗುತ್ತದೆ.

ಪ್ರ.–ಉಷ್ಣತ್ವವು ಎಲ್ಲೆಲ್ಲಿ ಹುಟ್ಟುತ್ತದೆ?

ಉ.–ಸೂರ್ಯ, ವಿದ್ಯುತ್ತು, ರಸಾಯನ ವ್ಯಾಪಾರ, ಯಂತ್ರ ವ್ಯಾಪಾರ, ಇವುಗಳಲ್ಲಿ ಹುಟ್ಟುತ್ತದೆ.

ಪ್ರ.–ಉಷ್ಣತ್ವದ ಮುಖ್ಯ ಪರಿಣಾಮಗಳು ಯಾವವು?

ಉ.–ಅದರಿಂದ ಪದಾರ್ಥಗಳ ಆಕಾರವು ಬೆಳೆಯುತ್ತದೆ; ಪದಾರ್ಥಗಳು ರಸರೂಪವಾಗುತ್ತವೆ, ಹೊಗೆಯ ರೂಪವನ್ನು ಹೊಂದುತ್ತವೆ. ಸುಡಲ್ಪಡುತವೆ. ಇತ್ಯಾದಿ.

ಪ್ರ.–ಸೃಷ್ಟಿಯಲ್ಲಿ ಉಷ್ಣತ್ವಕ್ಕೆ ಮುಖ್ಯವಾದ ಉಗಮ ಸ್ಥಾನ ಯಾವದು?

ಉ.–ಸೂರ್ಯನು.

ಪ್ರ.–ಸುಡುವ ಕಾಜಿನ ಮುಂದೆ ಹಿಡಿದ ಪದಾರ್ಥವು ಯಾಕೆ ಸುಡುತ್ತದೆ?

ಉ.–ಆ ಕಾಜು ಬಟ್ಟಲಿನಾಕಾರ ಸಂಸ್ಕೃತಿಯಾಗಿರುತ್ತದೆ. ಅದರ ಹೊರಮೈಯಲ್ಲಿ ಸೂರ್ಯಕಿರಣಗಳು ಬೀಳಲಾಗಿ, ಅದ್ದು ಒಳಮೈಯಲ್ಲಿ ವಕ್ರವಾಗಿ ಹೊರಬಿದ್ದು ಅದರ ನಡುಗಭ್ರದೆದುರಿಗೊಂದು ಬಿಂದುವಿನಲ್ಲಿ ಒಟ್ಟುಗೂಡುತ್ತವೆ. ಆ ಕಾರಣ ಆ ಕಾಜಿನ ಮೇಲೆ ಬಿದ್ದ ಕಿರಣಗಳ ಉಷ್ಣತ್ವ

ವ್ಯೂ ಪ್ರಕಾಶವು ಎಲ್ಲಿ ಆ ಬಿಂದುವಿನಲ್ಲಿ ಒಟ್ಟುಗೂಡಿರುತ್ತದೆ. ಅದರಿಂದ ಆ ಬಿಂದುವಿನಲ್ಲಿ ಹಿಡಿಸಿದ ಪದಾರ್ಥಗಳು ಸುಡುತ್ತವೆ. ಆ ಬಿಂದುವಿಗೆ ಕೇಂದ್ರ ಬೆಂಗುವದು.

ಪ್ರ.–ಸುಡುವ ಕಾಜೆಲ್ಲದೆ ಹಾಗೇ ಸೂರ್ಯ ಕಿರಣಗಳಿಂದ ಪದಾರ್ಥಗಳು ಸುಡುವವ್ಹೋ?

ಉ.–ಇಲ್ಲ; ಅತ್ಯುಷ್ಣ ಪ್ರದೇಶಗಳಲ್ಲಿ ಸಹ ಸೂರ್ಯ ಕಿರಣಗಳನ್ನು ಸುಡುವ ಕಾಜಿನಿಂದ ಒಟ್ಟುಗೂಡಿಸಿದ ಹೊರ್ತು ಅವುಗಳಿಂದ ಪದಾರ್ಥಗಳಿಗೆ ಬೆಂಕಿ ಹತ್ತುವದಿಲ್ಲ.

೨ ನೇ ಪ್ರಕರಣ.

ಪ್ರ.–ಸೂರ್ಯನ ತರುವಾಯ ಉಷ್ಣತ್ವದ ಮುಖ್ಯ ಸ್ಥಾನ ಯಾವದು?

ಉ.–ವಿದ್ಯುತ್ತು.

ಪ.–ಸೃಷ್ಟಿಯಲ್ಲಿ ವಿದ್ಯುತ್ತು ಯಾವ ರೂಪದಿಂದ ವ್ಯಕ್ತ ವಾಗುತ್ತದೆ?

ಉ.–ಮಿಂಚೆಂಬ ರೂಪದಿಂದ ವ್ಯಕ್ತ ವಾಗುತ್ತದೆ.

ಪ.–ಮಿಂಚೆಂದರೇನು?

ಉ.–ಮೋಡಗಳಲ್ಲಿ ಮಿತಿ ಮೀರಿ ಕೂಡಿ ಕೊಂಡಂಥ ವಿದ್ಯುತ್ತು ಅವುಗಳಿಂದ ಮಿಂಚುತ್ತ ಹೊರಬಿತ್ತಂ

ದರೆ ಅದಕ್ಕೆ ನಾವ್ರು ಮಿಂಚೆನ್ನುತ್ತೇವೆ.

ಪ್ರ.-ವಿದ್ಯುತ್ತು ಎಷ್ಟು ವಿಧವ್ರ?

ಉ.-ಧನವೆಂತಲೂ ಋಣವೆಂತಲೂ ಎರಡು ವಿಧವ್ರ.

ಪ.-ಈ ಎರಡು ಜಾತಿಯವಿದ್ಯುತ್ತು ಪದಾರ್ಥಗಳಲ್ಲಿ ಇರುವ ಕ್ರಮ ಹ್ಯಾಗೆ?

ಉ.-ಎಲ್ಲ ಪದಾರ್ಥಗಳಲ್ಲಿ ವಿದ್ಯುತ್ತುಂಟು. ವಾಡಿಕೆಯಗಿ ಎರಡೂ ಜಾತಿಯ ವಿದ್ಯುತ್ತು ಒತ್ತಟ್ಟಿಗೆ ಕೂಡಿಕೊಂಡಿರುತ್ತದೆ. ಹಾಗಿರುವಾಗ ಅದು ಇರುತ್ತದೆಂಬದರ ಕುರುಹೇನು ಕಾಣಿಸುವದಿಲ್ಲ. ಆದರೆ ಹಲಕೆಲವ್ರ ಕಾರಣಗಳಿಂದ ಈ ಎರಡು ಜಾತಿಗಳು ಒಂದನ್ನೊಂದು ಅಗಲಿದರೆ, ಅವ್ರು ಪುನಃ ಕೂಡಿಕೊಳ್ಳಲಿಕ್ಕೆ ಹವಣಿಸುತ್ತಿರುತ್ತವೆ. ಹೀಗೆ ಅಗಲಿರುವಾಗ ಪದಾರ್ಥಗಳಲ್ಲಿ ವಿದ್ಯುತ್ತು ಉಂಟೆಬದರ ಲಕ್ಷಣಗಳು ಬಗೆ ಬಗೆಯ ರೂಪದಿಂದ ಪ್ರಕಟ ವಾಗುತ್ತವೆ.

ಪ್ರ.-ಮೋಡಗಳಿಂದ ವಿದ್ಯುತ್ತು ಮಿಂಚಿನ ರೂಪದಿಂದ ಹೊರಬೀಳುವ ಕಾರಣ ಏನು?

ಉ.-ಕೆಲವ್ರ ಮೋಡಗಳಲ್ಲಿ ಧನ ವಿದ್ಯುತ್ತು ಕೆಲವ್ರಗಳಲ್ಲಿ ಋಣ ವಿದ್ಯುತ್ತು ಕೂಡಿರುತ್ತದೆ. ಹೀಗೆ ವಿರುದ್ಧ ಜಾತಿಯ ವಿದ್ಯುತ್ತುಳ್ಳ ಮೋಡಗಳೆರಡು ಒಂದನ್ನೊಂದು ಸಮೀಪಿಸಿದರೆ ಒಂದರೊಳಗಿನ ವಿದ್ಯುತ್ತು ಮಿಂಚುತ್ತ ಹೊರಬಿದ್ದು ಮತ್ತೊಂದರೊಳಗೆ ಕೇರಿ, ಎರಡೂ ಮೋಡಗಳಲ್ಲಿ ಎರಡೂ ಜಾತಿಯ ವಿದ್ಯುತ್ತು ಸಮಾನವಾಗುತ್ತದೆ. ಈ ಮಿಂಚಲ್ಲಿ ಕೇರಿಕೊ

ಳ್ಳುವದಕ್ಕೂ ಮೋಡಗಳಿಂದ ವಿದ್ಯುತ್ತು ಹೊರ
ಬೀಳುತ್ತದೆ.

ಪ್ರ.–ಎರಡೂ ಜಾತಿಯ ವಿದ್ಯುತ್ತು ಒತ್ತಟ್ಟಿಗೆ ಕೂಡಿ
ಕೊಂಡಬಳಿಕ ಏನಾಗುತ್ತದೆ?

ಉ.–ಅದು ಅಗೋಚರವಾಗುತ್ತದೆ.

ಪ್ರ.–ಗುಡುಗಂದರೇನು?

ಉ.–ಮೋಡಗಳಿಂದ ವಿದ್ಯುತ್ತಿನ ಪ್ರವಾಹಗಳು ಒಂದರ
ಹಿಂದೊಂದು ಎಡೆ ಬಿಡದೆ ಅತಿ ವೇಗದಿಂದ
ಹೊರಟು ಹವೆಗೆ ತಗಲಲಾಗಿ ಹುಟ್ಟುವ ಸಪ್ಪಳ
ವೇ ಗುಡುಗೆಂದು ಹೇಳಲ್ಪಡುತ್ತದೆ.

ಪ್ರ.–ವಿದ್ಯುತ್ತು ಮೋಡಗಳಲ್ಲಿ ಎಲ್ಲೆಲ್ಲಿಂದ ಕೇರುತ್ತದೆ?

ಉ.–ನೀರು ಉಗಿಯಾಗಿ ಮೇಲಕ್ಕೇರುವಾಗ ಅದರ ಸಂ
ಗಡ ಹೋಗುತ್ತದೆ ಭೂಮಿಯಮೇಲೆಯೂ ಹವೆ
ಯಲ್ಲಿಯೂ ಆಗಾಗ್ಗೆ ನಡೆಯುವ ರಸಾಯನ ವ್ಯಾ
ಪಾರಗಳಿಂದ ಹುಟ್ಟಿ ಮೋಡಗಳಲ್ಲಿ ಕೇರುತ್ತದೆ ಇ.

ಪ್ರ– ಮಿಂಚಿನ ಮೋಡಗಳು ಭೂಮಿಯಿಂದ ಎಷ್ಟು
ದೂರವಿರುತ್ತವೆ?

ಉ.–ಅವು ಒಮ್ಮೊಮ್ಮೆ ನಾಲ್ಕೈದು ಮೈಲುಗಳ ಆಚೆ
ಯಲ್ಲಿರುತ್ತವೆ; ಒಮ್ಮೊಮ್ಮೆ ನೆಲಕ್ಕೆ ಹತ್ತಿರುತ್ತವೆ.
ಆದರೆ ೫೦೦ ನೂರು ಘೂಟುಗಳೀಚೆಯಲ್ಲಿ ಅ
ವುಗಳಿಂದ ಬಹು ತರ ಗುಡುಗು ಹುಟ್ಟುವದಿಲ್ಲ.

ಪ್ರ.–ಗುಡ್ಡಗಳೂ, ಮರಗಳೂ, ಪಕ್ಷುಗಳೂ ಮಿಂಚು ಹೊ
ರಡಲಿಕ್ಕೆ ಕಾರಣವಾಗುತ್ತವೆಯೋ?

ಉ.–ಆಗುತ್ತವೆ ಯಾಕಂದರೆ ಭೂಮಿಗೂ ಮೋಡಗಳ
ಗೂ ಇರುವ ಅಂತರವನ್ನು ಇವುಗಳಿಂದ ಕಡಿಮೆ

ಯಾಗುತ್ತದೆ.

ಪ್ರ.–ಮಿಂಚು ಟಸಿಲೊಡೆಯುವ ಕಾರಣ ವೇನು?

ಉ.–ಒಂದು ಮೋಡದಿಂದ ಮೊವಲು ಒಂದೇ ಪ್ರವಾಹವಾಗಿ ಹೊರಟಂಥ ವಿದ್ಯುತ್ತು ಮಾರ್ಗದಲ್ಲಿ ಒಂದಕ್ಕಿಂತ ಹೆಚ್ಚು ಪದಾರ್ಥಗಳಿಂದ ಎಳೆಯಲ್ಪಟ್ಟರೆ, ಆ ಪ್ರವಾಹದಲ್ಲಿ ಎರಡು ಮೂರು ಟಸಿಲುಗಳಾಗುತ್ತವೆ.

ಪ್ರ–ಮಿಂಚು ಹಾವಿನ ಹಾಗೆ ಮಣಿಯುವ ಕಾರಣ ವೇನು?

ಉ.–ವಿದ್ಯುತ್ತು ಪ್ರೊರಡುವಾಗ ಅದರ ಪೆಟ್ಟಿನಿಂದ ಅದರ ಮಾರ್ಗದಲ್ಲಿರುವ ಹವೆಯು ಘನವಾಗುತ್ತದೆ. ಆ ಘನವಾದ ಹವೆಯು ಅಡ್ಡಿಯನ್ನು ತಪ್ಪಿಸುವದಕ್ಕೋಸ್ಕರ ಮಿಂಚು ಡೊಂಕಾಗುತ್ತದೆ.

ಪ್ರ.–ಮಿಂಚು ಯಾವಾಗ ಸರಲ ವಿರುತ್ತದೆ?

ಉ.–ಮಿಂಚು ಕ್ರಮಿಸ ಬೇಕಾಗಿರುವ ಅಂತರವು ಅಲ್ಪವಿದ್ದರೆ, ಆ ಮಾರ್ಗದೊಳಗಿನ ಹವೆಯು ಹೆಚ್ಚಿಗೆ ಘನವಾಗದ ಕಾರಣ ಮಿಂಚು ಸರಲವಾಗಿ ಗಮಿಸುತ್ತದೆ?

ಬಾದಾಮಿ.

———ooo———

ಕೋಟೆಗಳು–ತಾ ಗ್ರಾಮವು ಒಂದು ವಿಸ್ತಾರವಾದ ಬೈಲಲ್ಲಿ ಇರುತ್ತದೆ. ಊರ ನಡುವೆ ಬೆಕ್ಕಬೊಂದು ಬಾಲೇ ಕೆಲ್ಲೆಯುಂಟು. ಅದಲ್ಲದೆ ಊರ ದಕ್ಷಿಣಕ್ಕೂ ಉತ್ತರಕ್ಕೂ ಒಂದೊಂದು ಬಹು ವಿಸ್ತಾರವಾದ ಗಿರಿಮಗ್ಗಗಳುಂಟು. ಊರ ಸಿಂಬಡಿಯ ಕೋಟೆಯು ತಕ್ಕ ಮಟ್ಟಿಗೆ ಚದವಾಗಿರುತ್ತದೆ.

ಊರ ಎದುರಿಗಿರುವ ಎರಡನೇ ಕೋಟೆಯು ಚತುರ್ಭುಜವಾ
ದದ್ದುಂಟು. ಇದರ ಸುತ್ತು ಮುತ್ತು ಗುಡ್ಡವನ್ನು ಗೋದೆಯ
ಹಾಗೆ ನೆಟ್ಟಗೆ ಕಡಿದಿದ್ದಾರೆ. ಎತ್ತರ ಸುಮಾರು ೩೦ ಮೂಳು.
ಯಾವ ಕಡೆಯಲ್ಲಿಯೂ ಏನು ಸಂಬಂಧವಿಲ್ಲದೆ ಅಪ್ರಮಾ
ಣವಾದ ಕೊತ್ತಳದಂತೆ ಕಾಣಿಸುವ ಈ ಗುಡ್ಡವನು ಅಲ್ಲಲ್ಲಿ
ಗೆ ಕೀಳಿರುತ್ತಾರೆ. ಈ ಬಿರುಕುಗಳು ನಾಲ್ಕಾರು ಮೂಳು ಮಾ
ತ್ರ ಅಗಲುಂಟು; ಆದರೆ ೨೦೦ ರಿಂದ ೩೦೦ ಮೂಳುಗಳವರೆ
ಗೆ ಆಳವಾಗಿರುತ್ತವೆ. ಇಂಥಾ ಬಿರುಕುಗಳೊಳಗಿಂದಲೇ ಈ
ಕೋಟೆಯ ಮೇಲೆ ಹ್ರೋಗುವ ದಾರಿಯುಂಟು. ಈ ಕೋಟೆ
ಯಲ್ಲಿ ಈಗ ಯಾರು ಇರುವದಿಲ್ಲ.

ಬಸ್ತಿಗಳು–ಊರ ಹಿಂದಿನ ಗುಡ್ಡದೊಳಗೆ ಜೈನರಿಂದ
ಕೊರೆಯಲ್ಪಟ್ಟ ಜೈತ್ಯಾಲಯಗಳು ಬಹಳ ವುಂಟು. ಇವ್ರಗಳ
ಲ್ಲಿ ೪ ನೋಡ ತಕ್ಕಂಥ ವಿರುತ್ತವೆ. ಅವ್ರಗಳಿಗೆ ಮೇಣಿ ಬಸ್ತಿ
ಗಳೆನ್ನುವರು. ಇವ್ರಗಳಿಗೆಲ್ಲ ಸವ ಮಾಳಿಗೆಯುಂಟು. ಆ
ಮಾಳಿಗೆಯ ಒಳನೆಲ್ಯೆಯಲ್ಲಿಯೂ ಕಂಬುಗಳ ಮೇಲೆಯೂ
ರಮಣೀಯವಾದ ಚಿತ್ರಗಳು ಕೊರೆಯಲ್ಪಟ್ಟವೆ. ಈ ಬಸ್ತಿ ಗ
ಳಲ್ಲಿ ವಿಕ್ರಾಳ ಸ್ವರೂಪವುಳ್ಳ ಮೂರ್ತಿಗಳುಂಟು.

ನೀರಿನ ಹೊಂಡವ್ರ–ಇದು ಬಹ್ರ ದೊಡ್ಡದದೆ. ಮೂರು ದಿ
ಕ್ಕುಗಳಲ್ಲಿ ಗುಡ್ಡಗಳವೆ. ನಾಲ್ಕನೇ ಬದಿಗೆ ದೊಡ್ಡದೊಂದು
ಒಡ್ಡು ಹಾಕಿರುತ್ತಾರೆ. ಇದರೊಳಗಿನ ನೀರು ಎಂದೂ ತ
ಟ್ಟುವದಿಲ್ಲ. ಕೋಪ್ಪರಾಯನೆಂಬ ಅರಸು ಸುಮಾರು ೬೦೦
ವರ್ಷಗಳಹಿಂದೆ ಈ ಗ್ರಾಮವನು ಕಟ್ಟುವಾಗ ಈ ಹೊಂಡವ
ನ್ನು ಕಟ್ಟಿಸಿದನೆಂದು ಜನವಾತೆಯುಂಟು. ಹೊಂಡದಮೇಲೆ
ಒಕ್ಕದೊಂದು ಗುಡಿಯಂನು ಕಟ್ಟಿ ಆ ರಾಯನ ಮೂರ್ತಿಯ
ನ್ನು ಕೂಡ್ರಿಸಿರುತ್ತಾರೆ.

ಬನಶಂಕರಿಯು-ಈ ಊರಿನಿಂದ ಸುಮಾರು ೨ಮೈಲು ದೂರವಾಗಿ ಚೊಳಚಗುಡ್ಡವೆಂಬ ಹಳ್ಳಿಯ ಹತ್ತರ ಬನಶಂಕರಿಯ ಗುಡಿಯುಂಟು. ಇದು ಹಿಂದಿನ ಯುಗದಲ್ಲಿ ಆದದ್ದೆಂದು ಜನರು ಹೇಳುತ್ತಾರೆ. ಈ ಗುಡಿಯಲ್ಲಿ ಪದ್ಮತೀರ್ಥ, ಹರಿದ್ರಾತೀರ್ಥ, ತೈಲತೀರ್ಥ, ಯಮುನಾ ಸರಸ್ವತೀ ತ್ರಿವೇಣೀ ಸಂಗಮ ಎಂಬ ಸರೋವರಗಳಯಟು. ಹರಿದ್ರಾ ತೀರ್ಥದ ನೀರು ಎಂದೂ ಹೆಚ್ಚು ಕಡಿಮೆ ಯಾಗುವದಿಲ್ಲ. ತೈಲ ತೀರ್ಥದ ನೀರು ಎಣ್ಣೆಯಹಾಗಿರುತ್ತದೆ. ಸುಮಾರು ೩೦೦ ವರ್ಷಗಳ ಪೂರ್ವದಲಿ ಕುಕರಕೆಟ್ಟ, ಜೋಳಕೆಟ್ಟ, ಎಂಬ ಕೆಟ್ಟಗಳು ಈ ಗುಡಿಯನ್ನು ದುರಸ್ತು ಮಾಡಿಶಿದರೆಂದು ಜನರು ಹೇಳುತ್ತಾರೆ. ಈ ದೇವಾಲಯಕ್ಕೆ ಆನೀಗುಂದಿಯ ಅರಸರು ೩೨ ಗ್ರಾಮಗಳನ್ನು ಇನಾಮುಕೊಟ್ಟರು. ತರುವಾಯ ವಿಜಾಪುರದ ಬಾದಶಹನಿಂದ ಕೆಲವ್ರ ವರ್ಷಾಶನವ್ರ ಗೊತ್ತಾಯಿತು. ರುಸ್ತುಮ ಅಲ್ಲೀಖಾನನೆಂಬ ಮಾಮಲೇದಾರನ ಕಾಲಕೀರ್ತಿಯಲ್ಲಿ ಪರುಶರಾಮ ನಾಯಿಕ ಅನಗೋಳಕರ ನೆಂಬವನೊಬ್ಬ ವಗ್ಗಹಸ್ಥನು ಬಹಳ ಹಣವೆಚ್ಚ ಮಾಡಿಗುಡಿಯನ್ನು ನಟ್ಟಗೆಮಾಡಿಸಿ ದೇವಿಯ ಪ್ರೊಸಮೂರ್ತಿಯನ್ನು ಸ್ಥಾಪಿಸಿದನೆಂದು ಹೇಳುತ್ತೇವೆ. ಪೇಶವೆಯವರ ಆಳಿಕೆಯಲ್ಲಿ ರಾಸ್ತೆ ಎಂಬ ಸರದಾರನು ರಥೋತ್ಸವವನ್ನು ಪ್ರಾರಂಭ ಮಾಡಿದನು. ಈ ಉತ್ಸವವ್ರ ಈಗ ಪೌಷಶುದ್ಧ ಪೂರ್ಣಿಮೆಯಲ್ಲಿ ಆಗುತ್ತದೆ ಹತ್ತೆಂಟು ಸಾವಿರ ಜನರು ಕೂಡುತ್ತಾರೆ.

ಮಹಾ ಕೋಟೇಶ್ವರ-ಬಾದಾವಿಯ ಹತ್ತರ ನಂದಿಕೇಶ್ವರವೆಂಬಲ್ಲಿ ಈ ದೇವಾಲಯವ್ರ ಗುಡ್ಡದಲ್ಲಿ ಅದೆ. ಇದರ ಸುತ್ತುಮುತ್ತಲಿರುವ ನಿಬಿಡವಾದ ವೃಕ್ಷಗಳಿಂದಲೂ, ಮುಂಭಾಗದಲ್ಲಿ ಹೊಳೆಯುವ ಎರಡು ಅಚ್ಚೊನೀದಕ ಸರೋವರಗಳಿಂದ

ಲೂ ಈ ದೇವಾಲಯವು ಅತಿ ರಮಣೀಯವಾಗಿ ತೋರುತ್ತದೆ. ಇದನು ಕಟ್ಟಿ ಸುವಿರಾರುವರ್ಷಗಳಾಗಿರಬಹುದು. ಸುತ್ತು ಮುತ್ತು ಗುಡ್ಡದೊಳಗೆಲ್ಲ ಚಿಕ್ಕ ದೊಡ್ಡ ಶಿವಾಲಯಗಳು ಅ ನಂಖ್ಯ ಉಂಟು. ಅವೆಲ್ಲ ಜೀರ್ಣವಾಗಿರುತ್ತವೆ.

ಶಿಲಾ ಲಿಖಿಗಳು-ಬನಶಂಕರಿಯ ಹತ್ತರ ಚೊಳಚಗುಡ್ಡದ ಮೇಮೆಯಲ್ಲಿ ಇ, ಬಾದಾವಿಯಲ್ಲಿ ದತ್ತಾತ್ರಯನ ಗುಡಿಯ ಎದು ರಿಗೆ ಇ. ಯಲ್ಲಮ್ಮನ ಗುಡಿಯ ಎದುರಿಗೆ ಇ. ಮಹಾಕೋಟೇ ಶ್ವರನ ಗುಡಿಯ ಹತ್ತರ ಇ, ಬಾದಾವಿಯಲ್ಲಿ ಶಿವಾಲಯ ದೆ ದುರಿಗೆ ೨, ಗುಡ್ಡದೊಳಗೆ ಸೂರ್ಯ ತೀರ್ಥ ಅರಳೀ ತೀ ರ್ಥಗಳ ಹತ್ತರ ೨, ಮೇಣ ಬಸ್ತಿಯಲ್ಲಿ ೪, ಕೋಟೆಯಲ್ಲಿ ೩, ಮೂರು ಮಸೀದಿಗಳ ಮೇಲೆ ಕೂಡಿ ೧೩, ಈ ಪ್ರಕಾರ ಶಿಲಾಲೇಖಗಳಿರುತ್ತವೆ. ಇಷ್ಟು ಲಿಖಿಗಳಿರುವದರಿಂದಲೇ ಈ ಸ್ಥಳವು ಬಹು ಪ್ರಾಚೀನ ಕಾಲದಿಂದ ಹೆಸರಾದದ್ದೆಂದು ತೋ ರುತ್ತದೆ. ಇವಲ್ಲದೆ ಗುಡ್ಡದಲ್ಲಿ ಸಣ್ಣ ಸಣ್ಣ ಲೇಖಗಳು ಬ ಹಳ ವುಂಟು.

ಖನಿಜಗಳು-ಬಾದಾವಿಯ ನೆರೆ ಗುಡ್ಡದಲ್ಲಿ ಬೀಸೂಕಲ್ಲು ಗಳೂ ಸಾಣೇಕಲ್ಲುಗಳೂ ಬಹಳ ದೊರೆಯುತ್ತವೆ. ಈ ಪ್ರಾಂ ತದಲ್ಲಿ ಮಾರಾಟಕ್ಕೆ ಬರುವ ಬೀಸೂಕಲ್ಲುಗಳೂ ಸಾಣೇಕಲ್ಲು ಗಳೂ ಎಲ್ಲ ಅಲ್ಲಿಂದಲೇ ಬರುತ್ತವೆ.

ಇತಿಹಾಸವು-ಎಲ್ಲಕ್ಕೂ ಮೊದಲನೇ ಅರಸು ಕೋಪ್ಪರಾ ಯನಂತೆ. ಅವನೇ ಈ ಊರು ಕಟ್ಟಿಸಿದನೆಂದು ಹೇಳುತ್ತಾರೆ. ಇವನ ತರುವಾಯ ಆನೀಗುಂದಿಯ ನರವತಿಗಳೆಂಬ ಅರಸರ ಆಳಿಕೆಗೆ ಈ ಗ್ರಾಮ ಬೇರಿತು. ಅವರ ನಂತರ ವಿಜಾಪುರದವ ರು ನಬಾಬು *ಬಹಾದೂರನು, ಪೇಶವೆಗಳು ಇವರು ನಬಾಬು

*ನಬಾಬು ಬಹಾದೂರನೆಂದರೆ ಹೈದರಅಲ್ಲಿ ಯೆಂದು ತೋರುತ್ತದೆ.

ಬಹಾದೂರನು. ಕ್ರಮವಾಗಿ ಆಳಿದ ಬಳಿಕ ಬಾದಾವಿಯು
ನ್ನ ೧೯೯೬ ನೇ ಫಸಲಿಯಲ್ಲಿ ಮತ್ತೂ ಪೇಶವೆಯವರ
ಜ್ಯಕ್ಕೆ ಶೇರಿತು. ತರುವಾಯ ಸನ್ನ ೧೮೧೮ ನೇ ಇಸವಿಂ
ಲ್ಲಿ ಇಂಗ್ಲಿಷ ಸರಕಾರದ ಅಮಲು ನೆಲೆಗೊಂಡಬಳಿಕ, ಸನ್
೧೮೪೯ ನೇ ಇಸವಿಯಲ್ಲಿ ಅರಬರು ಈ ಕೋಟೆಯಲ
ದಾಳಿಯು ಮಾಡಿದರು. ಅವರನ್ನು ಗೆದ್ದು ಇಂಗ್ಲಿಷ ಸರಕಾ
ದವರು ತಿರುಗಿ ಈ ಕೋಟೆಯನ್ನು ತಕ್ಕೊಂಡಂದಿನಿಂದ ಆವ
ಆಳಕೆಗೇ ಶೇರಿರುತ್ತದ.

CORRESPONDENCE.
ಪತ್ರವ್ಯವಹಾರವು

ಬೇಡಕೀಹಾಳ ಶಾಲೆಯ ಶಿಷ್ಯಕರು ಕಳುಹಿದ ಲೆಖ್ಯ
(ಕಳಿದ ನಂವಂಬರಿನ ಶಾ. ಪ. ಪ್ರ. ೪೮೦ ನೋಡು).

ಒಂದು ಗ್ರಾಮದಲ್ಲಿ ಏಳು ಕೋಟೆಗಳಿದ್ದವು ಆ ಕೋಟೆ
ಗಳ ರಕ್ಷಣೆಕ್ಕೆ ಏಸಿಕೆ ಜನರು ದರಬಂದು ಕೋಟೆಗಳಲ್ಲಿ
ದ್ದರು. ಆದರೆ ಮೊದಲನೇ ಕೋಟೆಗೆ ಪರರಾಯರ ಸೈನ್ಯ
ಬಂದು ಮುತ್ತಿಗೆ ಹಾಕಲು, ಆ ಕೋಟೆಯ ಅಧಿಕಾರಸ್ಥನ
ಉಳಿದ ಆರು ಕೋಟೆಗಳ ಮುಖ್ಯಸ್ಥರಿಗೆ ಬೇಡಿಕೊಂಡದ್ದೇ
ನಂದರೆ, ನನ್ನಲ್ಲಿ ಇದ್ದಪ್ಪ ದಂಡನ್ನು ನೀವೆಲ್ಲರು ಪ್ರಥ
ಕ್ ಪ್ರಥಕ್ ಕೊಟ್ಟರೆ, ಅವರನ್ನು ಓಡಿಸುತ್ತೇನೆ. ಅವರು ಆ
ವನ ಕೋರಿಕೇಮೇರಿಗೆ ದಂಡು ಕೊಡಲಾಗಿ ಎದುರಾಳಿಗಳ
ನ್ನು ಹಿಂಪೆಟ್ಟಿಸಿದನು. ಆನಂತರ ಎರಡನೇ ಕೋಟೆಗೆ ಶ
ತ್ರುಗಳು ಮುತ್ತಿಗೆ ಹಾಕಲು, ಆತನು ತನ್ನಲ್ಲಿ ಇದ್ದಪ್ಪ ದಂ
ಡನ್ನು ನೀವೆಲ್ಲರು ಪ್ರತ್ಯೇಕ ಪ್ರತ್ಯೇಕವಾಗಿ ಕೊಡಬೇಕೆಂ

ನು ಬೇಡಿಕೊಂಡನು, ಇದೇ ಪ್ರಕಾರವಾಗಿ ಏಳು ಕೋಟೆಗಳಿಗೆ ಮುತ್ತಿಗೆ ಹಾಕಿ, ಶತ್ರುಗಳು ಅಪಜಯವಾಗಿ ಪಲಾಯನವಾದರು. ಕಡೆಯಲ್ಲಿ ಎಲ್ಲಾ ಕೋಟೆಗಳಲ್ಲಿ ಸಮವಾಗಿ ಜನರಿದ್ದರು. ಆದರೆ ಮೊದಲಿಗೆ ದರಬಂದು ಕೋಟೆಯಲ್ಲಿ ಎಷ್ಟು ಜನರು ಇದ್ದರು.

ರೀತಿ

ಕೋಟೆಗಳ ಸಂಖ್ಯಕ್ಕೆ ಅದರಷ್ಟೇ ಘಾತ ಮಾಡಬೇಕು. ಬಂದ ಘಾತಕ್ಕೆ ಕೋಟೆಗಳ ಸಂಖ್ಯದಿಂದ ಭಾಗಿಸಬೇಕು. ಬಂದ ಭಾಗಾಕಾರವನ್ನು ಘಾತದಲ್ಲಿ ಮಿಶ್ರಿತ ಮಾಡಬೇಕು ಈ ಪ್ರಕಾರವಾಗಿ ಎಷ್ಟು ಕೋಟೆಗಳು ಇರುವವೋ ಅಷ್ಟರತನಕಾ ಭಾಗಿಸಬೇಕು ಬಂದ ಭಾಗವನ್ನು ಹ್ರಾಸಹ್ರಾಸ ಮಿಶ್ರಘಾತಗಳಲ್ಲಿ ಮಿಶ್ರವಾಗದುತ್ತಾ ಭಾಗಿಸುತ್ತಾ ಹ್ರೋದರೆ ಅಷ್ಟೈರಕ್ಕೆ ಬಂದ ಭಾಗವೇ ಮೊದಲನೇ ಕೋಟೆಯ ಜನರ ಎಣಿಕೆ ಆಗುವದು.

೭ × ೭ = ೪೯ × ೭ = ೩೪೩ × ೭ = ೨೪೦೧ × ೭ =
೧೬೮೦೭ × ೭ = ೧೧೭೬೪೯ × ೭ = ೮೨೩೫೪೩

೭)೮೨೩೫೪೩(೧೧೭೬೪೯
೭

೨೨
೧೪

೮೩
೭೭

೬೫
೬೩

೨೪
೨೧

೩೫
೩೫

೦

೭೬೭೬೪೯= ಮೊದಲನೇ ಕೋಟೆಯ ಜನರು.
೭೬೭೬೪೯
೭೬೭೬೪೯
೪೯೦೦೭೦೪೯ = ೭. ,,
೭೦೦೭೦೪೯
೭೬೭೬೪೯೦೪೯ = ೪೫. ,,
೭೬೭೬೪೯೦೪೯
೮೨೩೫೪೩ = ೫೦. ,,
೮೨೩೫೪೩
೦

೩೭೫೬೩೬ | ೩೫೪೬೬೪

೬)೩೪೦೪೯೭೪(೨೦೦೭೦೪ | ೧೦=೩೫೦೪=೫.

೨೦೦೭೦೪ | ೩೪೪೪೪೫೬

೭)೩೬೦೫೬೪೭(೨೨೯೭೭೬ | ೧೩೫೯೬೦=೮.

೨೨೯೭೭೬ | ೧೩೭೬೪೪೯

೭)೩೪೪೫೦೦೪(೨೬೨೩೪೪೪ | ೩೦೭೪೪೦೯=೫.

ಶಂಕರ ಕೃಷ್ಣ ಮಾಸ್ತರ ನೀಲ್ಗಿ.

೨ ನೇ ರೀತಿಯು.

ಕೊಟೆಗಳ ಅಂಕೆಯಲ್ಲಿ ೧ ಅಧಿಕ ಮಾಡಬೇಕು, ಮತ್ತು ೧ ಕಳಿಯಬೇಕು. ಕಳಿದು ಬಂದ ಅಂಕೆಯನ್ನು ಕೂಡಿಸಿ ಬಂದ ಅಂಕೆಯ ಘಾತ ಮಾಡಬೇಕು, ಅಂದರೆ ೧ ನೇ ಕೋಟೆಯಲ್ಲಿ ಮುಂಚೆ ಇದ್ದ ಜನರ ಸಂಖ್ಯೆ ಮಾಯಿತು. ಆ ಸಂಖ್ಯೆಕ್ಕೆ ಆ ಕೂಡಿಸಿಬಂದ ಅಂಕೆಯಿಂದ ಭಾಗಿಸಿ ಬಂದದ್ದನ್ನು ಅದೇ ಸಂಖ್ಯೆದೊಳಗೆ ಕಳಿದು ಉಳಿದದ್ದನ್ನು ಅದೇ ಸಂಖ್ಯೆದೊಳಗೆ ಕೂಡಿಸಬೇಕು. ಅಂದರೆ ೨ ನೇ ಕೊಟೆಯ ಮೂಲ ಸಂಖ್ಯೆ ಮಾಯಿತು. ಇದೇ ಪ್ರಕಾರ ಕಡೆತನಕ.

೧ ನೇ ಕೊಟೇಸಂ.

೬ + ೧= ; ೬ − ೧=೬; ^{೬}=೨೬೨೧೪೪.

೨೬೨೧೪೪ − $\frac{೬^{೬}\sqrt{೧೪೪}}{೭}$ × ೨೬೨೧೪೪=೪೯೧೪೩೨

೫ ನೇ ಕೋಟೆ.

ಇದೇ ಪ್ರಕಾರ-೬೯೨೩೨೪೪-೩ ನೇ ಕೋಟೆ. ಇತ್ಯಾದಿ.

ಮಹಾರುದ್ರ ಕೃಷ್ಣ ವಿದ್ಯಾರ್ಥಿ ಮೋದಗೆ.

*ಇದೇ ಲೆಕ್ಕವನ್ನು ಕುರಿತು ಇನ್ನೂ ನಾಲ್ಕು ಪತಗಳು ಬಂದಿರುತ್ತವೆ. ಅವುಗಳಿಗೆಲ್ಲ ಸ್ಥಳ ಸಾಲದು. ಎ. ಶಾ. ಪ.

REGISTERED NO. 1179
1877

ಜಾಹಿರಾತು.

ಬೇಪ್ಪೂರ ಕೃತ ಹಿಂದುಸ್ಥಾನ ಅತಿಹಾಸದ, ಕ್ರ. ೧೦ ಅಣೆ, ಟ. ಹಾ. ೧ ಅಣೆ, ಇಂಗ್ರಜೀ ೧ ನೇ ಬುಕ್ಕಿನ ಸೆಲೆಬಲ್ ಬಿಡಿಸಿದ ಆ್ಯಕ್ಸೆಂಟ್ ಸಹಿತ ಸ್ಪೀಲು, ಉಚ್ಚಾರ, ಅರ್ಥ ಸಹಿತ ಶಬ್ದ ಸಂಗ್ರಹ ಕ್ರ. ೪ ಅಣೆ ಟ. ಹಾ. ೫ ಕ್ಕೆ ೧ ಅಣೆ. ರಾ. ಹ. ಬೇಪ್ಪೂರ ಇ. ಮಾ. ಹಳ್ಯಾಳ ಇವರ ಹತ್ತರ ಶಿಗುತ್ತವೆ. ಹಣ ಕಳಿಸಿದರೆ ಬಹಳ ತೀವ್ರ ರವಾನೆ ಆಗುವವು.

ಕನ್ನಡ ಶಾಲಾಪತ್ರಿಕೆ.

CANARESE SCHOOL PAPER.

ಪುಸ್ತಕ ೬೨] [ಸಂಚಿಕೆ ೧೦

ತಾರೀಖು ೨೫ ಮಾಹೆ ಫೆಬ್ರುವಾರಿ ೧೮೭೭.

ಅನುಕ್ರಮಣಿಕೆಯು.

ವಿಷಯಗಳು ..... ಪ್ರಟಿ.

ವಿದ್ಯಾ ಸುಧಾರಣಾ ಸಂಬಂಧದ ವೃತ್ತಾಂತಗಳು ೫೨೯

ಪರಭಾಷೆಯ ಅಭ್ಯಾಸವು ೫೩೨

ಭಾಷಾಂತರಣ ೫೩೫

ಧಾರವಾಡ ಟ್ರೇನಿಂಗಕಾಲೇಜದಲ್ಲಿ ಕಳೆದ ಅಗಸ್ತುಮೊದಲ್ ತಿಂಗಳಲ್ಲಿ ಆದ ಸರಕಿಭಿಕೀಟ ಪರಿಕ್ಷೆಯಲ್ಲಿ ಪಡೆದ ಗುಣಗಳ ಕ್ರಮವನ್ನು ಅನುಸರಿಸಿ-ಬಾಸಾದವರ ಹೆಸರುಗಳ ಪಟ್ಟಿ. ೫೪೨

ಪತ್ರವ್ಯವಹಾರವು ೫೪೯

CONTENTS ..... Page

Educational Intelligence. 529

Correspondence 549

BELGAUM.

Printed at the "Belgaum Samachar" Press.

ಶಾಲಾಪತ್ರಿಕೆಯು.

ಪುಸ್ತಕ ೩೨] [ಸಂಚಿಕೆ ೩೫

ತಾರೀಖು, ೨೫ನೇ ಮಾಹೆ ಫೆಬ್ರುವಾರಿ, ೧೮೫೩.

EDUCATIONAL INTELLIGENCE.

ವಿದ್ಯಾಸುಧಾತಣಾಸಂಬಂಧವಾದ ವೃತ್ತಾಂತಗಳು.

ದಿಲ್ಲೀ ಪಟ್ಟಣದಲ್ಲಿ ಒಂದು ಸರಕಾರೀ ಕಾಲೇಜುವಿರುತ್ತದೆ. ಅದನ್ನು ಬರುವ ಎಪ್ರಿಲ ತಿಂಗಳಿನ ೧ನೇ ತಾರೀಖಿನಿಂದ ಕಟ್ಟು ಮಾಡುವ ಆಲೋಚನೆಯು ಸರಕಾರದವರಿಂದ ಮಾಡಲ್ಪಟ್ಟಿದೆ. ಈ ಪಟ್ಟಣದ ಮುಸಲ್ಮಾನ ಜಾತಿಯ ನಿವಾಸಿಗಳು ಈ ಕಾಲೇಜನ್ನು ಸನ್ನ ೧೮೨೮ನೇ ವರ್ಷ ಮಂತ್ರಿಗಳಿಂದ ಹಣ ಕೂಡಿಸಿ ಸ್ಥಾಪಿಸಿದರು. ಮುಂದೆ ಸನ್ನ ೧೮೫೨ನೇ ವರ್ಷ ನಬಾಬ ಇತಮಾದುದವಲ್ಲಾ ಎಂಬವರು ಈ ಕಾಲೇಜಿಕ್ಕೆ ೧೫೦೦೦ ರೂಪಾಯಿ ಇನಾಮು ಕೊಟ್ಟರು. ಅಂದಿನಿಂದ ಈ ವಿದ್ಯಾಲಯವು ಬಹು ಸರಸಾಗಿ ನಡೆದು, ಕಡೆಯಲ್ಲಿ ಇದರ ವ್ಯವಸ್ಥಾಪಕರು ಸನ್ನ ೧೮೫೩ನೇ ವರ್ಷ ಇದನ್ನು ಸರಕಾರಕ್ಕೆ ಒಪ್ಪಿಸಿದರು. ಈ ಬಗೆಯಾಗಿ ಆ ಪಟ್ಟಣದ ನಿವಾಸಿಗಳು ೬೪ ವರ್ಷ ತಮ್ಮ ಸ್ವಂತ ವೆಚ್ಚದಿಂದ ಬಿ

ಹೀ ಪ್ರೀತಿಯಿಂದ ನಡಿಸದಂಥಾ ವಿದ್ಯಾಲಯವನ್ನು ಸರಕಾ
ರವರು ತಮ್ಮ ಕೈಯಲ್ಲಿ ಬಂದು ೨೫ ವರ್ಷಗಳಾಗ
ವ ಪ್ರೊವಾದಲ್ಲಿ ಮುರಿಯುವ ಆಲೋಚನೆಯನ್ನು ಮಾ
ದ್ದಾರೆ. ಮುರಿಯುವ ಕಾರಣವೇನಂದರೆ, ಲಾಹೋರ
ಟ್ಟಣದಲ್ಲಿ ಪ್ರೊಸಬೊಂದು ಸರಕಾರೀ ಕಾಲೇಜಪ್ಪ ಸ್ವಾ
ಪಿತವಾಗಿ ಅನಸ್ಟ್ಯ ಯುನಿವರ್ಸಿಟಿಯ ಅಧಿಕಾರವ
ಕೊಡಲ್ಪಟ್ಟಿದೆ. ಆ ಕಾರಣ ಒಂದೇ (ಪಂಜಾಬ) ಊರಾ
ಯಲ್ಲಿ ಎರಡು ದೊಡ್ಡ ಕಾಲೇಜುಗಳ ವೆಚ್ಚವು ಸರಕಾರಕ್ಕೆ
ದುಸಹವಾಗಿರುತ್ತದಂತೆ.

ಪಂಜಾಬಿನ ಯುನಿವರ್ಸಿಟಿಯಲ್ಲಿ ಝೆಂದ, ಪೆಹೆಲ್ವೀ
ಈ ಎರಡು ಭಾಷೆಗಳ ಅಭ್ಯಾಸವನ್ನು ನಡಿಸುವ ಆಲೋಚ
ನೆಯುಂಟು. ಝೆಂದ (ಝಂದ) ನಮ್ಮ ಖಯ್ಯಾಮಿನ ಭಾ
ಷೆಯೂ ಒಪ್ಪತರವಾಗಿ ಒಂದೇ. ಅಂದರೆ ಇವೆರಡೂ ಸಂ
ಸ್ಕೃತದ ಮೂಲ ಸ್ವರೂಪವನ್ನು ತೋರಿಸುತ್ತವೆ. ಪಾರ್ಸೀ
ಜನರ ಆವೆಸ್ತಾವೆಂಬ ಪ್ರಾಚೀನ ಧರ್ಮ ಪುಸ್ತಕವು
ಝೆಂದ ಭಾಷೆಯಲ್ಲಿಯೇ ಬರೆಯಲ್ಪಟ್ಟಿದ್ದುದಂಟು. ಖಯ್
ಯಾಮಿನ ಭಾಷೆಯು ನಮ್ಮ ದೇಶದಲ್ಲಿ ನಡೆಯುತ್ತಿದ್ದಾಗ
ಝೆಂದಭಾಷೆಯು ಇರಾಣ ದೇಶದಲ್ಲಿ ನಡೆಯುತ್ತಿತ್ತು.
ಪೆಹೆಲ್ವೀ ಭಾಷೆಯಾದರೂ ಅದೇ ದೇಶದಲ್ಲಿ ಎಷ್ಟೋ
ಶತಮಾನಗಳ ಹಿಂದೆ ನಡೆಯುತ್ತಿತ್ತು. ಇದು ಸಂಸ್ಕೃತ
ದಿಂದ ಹುಟ್ಟಿದ ಭಾಷೆಯು.

ಖಾನದೇಶ ಜಿಲ್ಲೆಯ ಮುಖ್ಯ ಸ್ಥಾನವಾದ ಧುಳೆ

ರುಲ್ಲಿ ಇದ್ದ ಟ್ರೇನಿಂಗ ಕಾಲೇಜವನ್ನು, ಬೋರ್ಡಿಂಗ
ಹೌಸೆಂದರೆ ವಿದ್ಯಾರ್ಥಿಗಳ ಉಟದ ಕೋಲಯನ್ನೂ ಕಟ್ಟು
ಮಾಡುವಬಗ್ಗೆ ಸರಕಾರೀ ಠರಾವು ಪ್ರಕಟಿಸಿದೆ.

ಕ್ರೈಸ್ತ ವರ್ಗದ ಯುರೋಪಿಯನ್ ಅಧಿಕಾರಿಗಳ
ಮಿಣ್ಣು ಮುಕ್ಕಳಸಲುವಾಗಿ ಸಿಮ್ಲಾ (ಹಿಮಾಲಯದಲ್ಲಿ)
ಎಂಬಲ್ಲಿ ಪ್ರೌಸದೊಂದು ಕಾಲೇಜವು ಸ್ಥಾಪಿತವಾಗತಕ್ಕ
ದ್ದು. ಅದರ ಸಲುವಾಗಿ ಕಳದ ಜನವರಿಯ ೫ ನೇ ತಾ
ರೀಖಿನಲ್ಲಿ ದಿಲ್ಲಿಯ ದರ್ಬಾರಿನಲ್ಲಿ ಕೂಡಿದ ಅರಸರು
ಗಳ ಕಡೆಯಿಂದ ೫ ಲಕ್ಷ ರೂಪಾಯಿಗಳನ್ನು ಕೂಡಿಸಿದ್ದಾರೆ.

ನಮ್ಮ ದೇಶದವರ ಹಿತಕ್ಕೋಸ್ಕರವಾಗಿ ವಿಲಾಯತಿ
ಯಲ್ಲಿ ಸ್ಥಾಪಿಸಲ್ಪಡಬೇಕಾಗಿದ್ದದ್ದೊಂದು ಸಮಾಜದ ಸ
ಲುವಾಗಿ ಪ್ರೊಫೆಸರ ವುಯಿಲಿಯಮ್ಸ್ ಎಂಬವರಿಗೆ ತಾ
ವಣಕ್ಕೋಸರ ಅರಸರು ೫೦೦೦೦ ರೂಪಾಯಿ ಕೊಟ್ಟಿ
ರೆಂದು ಕೇಳುತ್ತೇವೆ.

ಈ ಸ್ಪರ್ಧದಲ್ಲಿ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ
ಪ್ರವೇಶಕ್ಕೆ ವಿದ್ಯಾರ್ಥಿಗಳೆಲ್ಲರು ಮುಂಬಯಿಗೆ ಪ್ರಯಾಣ
ಮಾಡಿ, ಅಲ್ಲಿಯೇ ಮೊದಲಿನಿಂದ ಕಡೆತನಕ ಪರೀಕ್ಷೆಯನ್ನು
ಕೊಡಬೇಕಾಗುತ್ತಿತ್ತು; ಮತ್ತು ಮೆಡಿಸಲಿನ ಇಂಜಿನಿಯ
ರಿಂಗ್ ಸಂಬಂಧದ ಸ್ಪರ್ಧೆಗಳಲ್ಲಿ ನಾವಿಸ ಆಫೀಸರು ಮುಂ
ದೆ ಪರೀಕ್ಷೆಗೆ ಕೂಡ್ರಬೇಕು ಸುಮ್ಮನೆ ಹಿಂದಿರುಗಿ ಬರಬೇ
ಕಾಗುಗುತ್ತಿತ್ತು. ಆದರೆ ಒಳಗಡೆಯಲಿ ಯುನಿವರ್ಸಿ

ಟಿಯು ಅಧಿಕಾರಿಗಳು ಮಾಡಿದ ಪ್ರೊಸಡೊಂದು ನಿಯಮ
ವೇನೆಂದರೆ, ಇನ್ನು ಮುಂದೆ ಮೂರೂ ಭಾಗಗಳಲ್ಲಿ ಒ
ದೊಂದು ಮುಖ್ಯ ಸ್ಥಲವನ್ನು ಗೊತ್ತುಮಾಡಿ, ಆ ಮೂ
ರು ಸ್ಥಳಗಳಲ್ಲಿ ಸದರೀ ಪ್ರಶ್ನೆಗಳಲ್ಲಿ ವಿದ್ಯಾಗಳನ್ನು
ಪರೀಕ್ಷಿಸಲಾಗಿ, ಅವುಗಳಲ್ಲಿ ಪಾಸ್ ಆದವರು ಮಾತ್ರ
ಉಳಿದ ಪರೀಕ್ಷೆಯಸಲುವಾಗಿ ಮುಂಬಯಿಗೆ ಹ್ಹೋಗಬೇ
ಕು, ಪಾಸಾಗದವರು ಹ್ಹೋಗುವ ಪ್ರಯೋಜನವಿಲ್ಲ. ಇ
ರಿಂದ ಬಡ್ಡಿಜನ ವಿದ್ಯಾರ್ಥಿಗಳಿಗೆ ಸುಲಭಕವಾಗಿ ಆಗುತ್ತ
ಲಿದ್ದ ಶ್ರಮವೂ ವೆಚ್ಚವೂ ಉಳಿಯುವದು.

ರಾ. ರಾ. ವೆಂಕಟರಂಗೋ ಕಟ್ಟಿ ಇವರು ತಮ್ಮ ತ್ರಿ
ನ್ನಲ್ವೇಲಿಯ ಅಫೀಸಿನ ಚಾರ್ಜವನ್ನು ಹ್ಹೋದ ತಿಂಗಳಿನ
ಮೊದಲನೇ ತಾರೀಖಿನಲ್ಲಿ ತಕೊಂಡದರಿಂದ, ಅವರ ಸ್ಥಳ
ದಲ್ಲಿ ಮೊದಲು ಕೆಲಸ ಮಾಡುತ್ತಿದ್ದ ರಾ. ರಾ. ಪಾಂಡು
ರಂಗ ವೆಂಕಟೇಶ ಚಿಂತಾಮಣಿ ಪೇಷ್ಕರ ಇವರು ಮೈ. ರಸೆ
ಲ್ ಫೊರೆಗಳು ತಿರುಗಿ ಬರುವ ವರೆಗೆ ರಾ. ರಾ. ಚನಬ
ಸಪ್ಪನವರ ಸ್ಥಳದಲ್ಲಿ ಧಾರವಾಡಜಿಲ್ಲೆಯ ಡಿ. ಇ. ಕೆಲ
ಸಕ್ಕೆ ಅಪ್ಪಿಂಗ ಪ್ರಕಾರ ನೇಮಿಸಲ್ಪಟ್ಟಿದ್ದಾರೆ. ರಸೆಲ್
ಫೊರೆಗಳು ಬಂದ ಬಳಿಕ ಚನಬಸಪ್ಪನವರು ತಮ್ಮ ಧಾ
ರವಾಡದ ಸ್ಥಳಕ್ಕೆ ಹ್ಹೋಗಿ, ಪಾಂಡುರಂಗ ರಾಯರು ತ
ಮ್ಮ ಬೆಳಗಾವಿಯ ಸ್ಥಳಕ್ಕೆ ಹ್ಹೋಗುವರೆಂದು ತ್ರೋರುತ್ತ
ದೆ. ಆದರೆ ಇನ್ನೂ ಕೆಲವು ದೊಡ್ಡ ದೊಡ್ಡ ಹೆಚ್ಚಿನ ಜ
ಹಿವೆಗಳಾಗತಕ್ಕನಿರುತ್ತವೆಂದು ಕೇಳುತ್ತೇವೆ.

ಕಾಶೀವಾಡ ಪ್ರಾಂತದೊಳಗೆ ರಾಜಕೋಟೆಯೆಂಬಲ್ಲಿ ಯಂದು ಪ್ರದರ್ಶನವು ಆಗತಕ್ಕದ್ದಾಗಿದೆ. ಆ ಪ್ರದರ್ಶನದಲ್ಲಿ ಸೀಲಾದ ಕಸೂತಿಯುಳ್ಳಾದಹೊಲಿಯುವ ಕೈಗಾರಿಕೆಯು ಳ್ಳ ಈ ದೇಶದ ಹೆಂಗಸರಿಗೆ ಇನಾಮು ಕೊಡುವದ ಕ್ಕೋಸ್ಕರವಾಗಿ ಮೊರಬೀ ಸಂಸ್ಥಾನದ ರಾಜಕನ್ಯಳೊಬ್ಬ ಳು ೪೦೦ ರೂಪಾಯಿಗಳನ್ನು ಕೊಟ್ಟಿದ್ದಾಳೆ.

ಪಾರೀಸ ಪಟ್ಟಣದಲ್ಲಿ ಒಬ್ಬ ಬೇನೆಯವನ ಮೈಯಲ್ಲಿ ರಕ್ತವು ಬಹು ಸ್ವಲ್ಪ ಇದ್ದದರಿಂದ ಬಹಳ ದುರ್ಬಲನಾಗಿದ್ದನು. ಆ ಕಾರಣ ಡಾಕ್ತರನು ಒಂದು ಕುರಿಯನ್ನು ತಂದು, ಅದರ ಮೈಯೊಳಗಿನ ರಕ್ತವನ್ನು ಆ ಬೇನೆಯವನ ಮೈಯೊಳಗೆ ಯಂತ್ರದಿಂದ ತುಂಬಿದನು. ಅದರಿಂದಲಾ ಬೇನೆಯವನ ಮೈಯಲ್ಲಿ ತಕ್ಕ ಮಟ್ಟಿಗೆ ಸಾಮರ್ಥ್ಯವುಂಟಾಯಿತು. ಆದರೆ ಅವನು ಕುರಿಯಹಾಗೆ ಬದರ ತೊಡಗಿದನು; ಮತ್ತು ಕಟಿಕರ ಅಂಗಡಿಯನ್ನು ನೋಡಿದ ಕೂಡಲೆ ಅವನು ಸ್ನೇತಿಗೆಡುವನಂತೆ.

ಪರಭಾಷೆಯ ಅಭ್ಯಾಸವು.

—೦೦೦—

ಯಾವದೊಂದು ಭಾಷೆಯ ಅಭ್ಯಾಸದಲ್ಲಿ ಎರಡು ಉದ್ದೇಶಗಳಿರುತ್ತವೆ; ಆ ಭಾಷೆಯಲ್ಲಿ ಯಾವಾದನೂ ಮಾತಾಡಿದರೆ ಇಲ್ಲವೆ ಬರಿದರೆ ಅವನ್ನು ತಿಳಿದು ಕೊಳ್ಳುವದು ಒಂದು, ಅದರಲ್ಲಿ ನಾವು ಸ್ವತಃ ಮಾತ್ರಾಡಲಿಕ್ಕೂ ಬರೆಯಲಿಕ್ಕೂ ಸಮರ್ಥರಾಗಬೇಕೆಂಬುವದು ಮತ್ತೊಂ

ಮು. ಆ ಭಾಷೆಯ ಶಬ್ದಗಳನ್ನು ಕೇಳಿದ ಕೂಡಲೆ ಅವ
ಳ ಭಾವವು (ಅರ್ಥವು) ನಮ್ಮ ಮನಸ್ಸಿನಲ್ಲಿ ಕೇರ
ಕೆಂತಲೂ, ಯಾವದೊಂದು ಭಾವವನ್ನು ವ್ಯಕ್ತ ಪಡಿಸ
ಬೇಕೆಂದು ಅಪೇಕ್ಷಿಸಿದಕೂಡಲೆ ಅದಕ್ಕೆ ತಕ್ಕಂಥ ಆ ಭಾಷೆಯ ಶಬ್ದಗ
ನಮಗೆ ನೆನಪಾಗುವಂತೆಕೆಂತಲೂ ನಾವು ಕೋರುತ್ತೇವ
ಇದು ವ್ಯಾಕರಣಕ್ಕೆ ಎಷ್ಟು ಮಾತ್ರವೂ ಸಂಬಂಧವಾ
ದ್ದಲ್ಲ. ವ್ಯಾಕರಣವೆಂದರೆ ಭಾಷೆಯ ನಿಯಮಗಳ ಸ
ಗ್ರಹವು. ಅದರಲ್ಲಿ ಭಾಷಾಭಿಜ್ಞ ಸಿದ್ಧಾಂತಗಳು ನಮ
ಗೆ ತಿಳಿಯುತ್ತವೆ. ನಾವು ಕೆಲವೊಂದು ಭಾಷೆಯನ್ನು
ರಿತುಕೊಂಡ ಬಳಿಕ ಆ ಭಾಷೆಯಲ್ಲಿ ಶುದ್ಧವಾಗಿ ಮಾ
ತಾಡಲಿಕ್ಕೂ ಬರೆಯಲಿಕ್ಕೂ ವ್ಯಾಕರಣವು ತಕ್ಕ ಸಾಧ
ನವಾಗುತ್ತದೆಂದು ವಿದ್ವಾಂಸರು ನಿರ್ಣಯಿಸಿದ್ದಾರೆ. ಇ
ದಂದ ನಾವು ಅರಿಯದಂಥ ಭಾಷೆಯನ್ನು ವ್ಯಾಕರಣವ
ಕಲಿಸುತ್ತದೆಂದು ನಿಸ್ಸಂಶಯವಾಗುವದಿಲ್ಲ; ಮತ್ತೂ ಭಾಷೆಯ
ನ್ನು ಕಲಿಯಲಿಕ್ಕೆ ವ್ಯಾಕರಣವು ಅವಶ್ಯಕವಾದ ಸಾಧನ
ವೆಂತಲೂ ಯಾರೂ ಹೇಳಲಾರರು. ಹುಡುಗರು ಮತ್ತೆ
ಮ್ಮ ತಾಯಿಯ ಮಾತುಗಳನ್ನು ಕೇಳಿ ಕೇಳಿ ಅವರ ಭಾಷೆಯನ್ನು
ವ್ಯಾಕರಣಕ್ಕನುಸಾರವಾಗಿ ಸಾಂಪ್ರದಾಯ ಪ್ರಾರಂಭವ
ಯೂ ಆಡಲಿಕ್ಕೆ ಕಲಿಯುತ್ತಾರೆ. ಎಷ್ಟೋ ಜನರ
ವ್ಯಾಕರಣದ ಗಂಧವನ್ನು ಸಹ ಅರಿಯದಿದ್ದಾಗ್ಯೂ ತಮ್ಮ
ಮಾತೃ ಭಾಷೆಯನ್ನು ಶುದ್ಧವಾಗಿ ಆಡಲಿಕ್ಕೂ ಬರೆಯಲಿ
ಕ್ಕೂ ತಪ್ಪುವದಿಲ್ಲ. ವ್ಯಾಕರಣದ ಸಾಧಾರಣ ನಿಯಮಗಳ
ನ್ನು ಕಲಿಯಬಯಸುವವರು ಆ ನಿಯಮಗಳ ಅಪವಾದ
ಗಳನ್ನು, ಪ್ರತ್ಯಪವಾದಗಳನ್ನು ಸಹ ಕಲಿಯಲಿಕ್ಕೆ ಬೇ

ಕು. ಯಾಕಂದರೆ ಈ ಅಪವಾದ ಪ್ರತ್ಯಪವಾದಗಳಿಗೆ ಒಳಗಾಗುವಂಥ ಶಬ್ದಗಳು ಎಲ್ಲ ಭಾಷೆಗಳಲ್ಲಿ ಹೆಚ್ಚಿಗೆ ರೂಢವಾಗಿರುತ್ತವೆ. ಆ ಕಾರಣ ಅವುಗಳ ನಿಯಮಗಳು ಹೆಚ್ಚಿಗೆ ಚನ್ನಾಗಿ ತಿಳಿಯಲಿಕ್ಕೆ ಬೇಕು. ಆದದರಿಂದ ಈ ಬಗೆಯ ತೀಂವರೆಯ ನಿಯಮಗಳನ್ನು ಕಲಿಯುವ ಗೊಂದಲದಲ್ಲಿ ಭಾಷೆಯ ಅಭ್ಯಾಸವು ಕುಂಠಿತವಾಗುವದು; ಆಥವಾ ವ್ಯಾಕರಣದ ಹಂಬರದ ಅಂಜಿಕೆಯಿಂದ ಕಲಿಯುವವನ ಹವಣಿಕೆಯೇ ಹಿಂಪೆಟ್ಟು ಬಿಡುವದು.

ಬಹು ಜನರು ತಾವು ಕಲಿಯಬೇಕಾಗಿದ್ದ ಭಾಷೆಯ ಮರ್ಮಗಳನ್ನು ಬೇಗ ಅರಿತು ಕೊಳ್ಳುವ ಸಂಭ್ರಮದಿಂದ ಆರಂಭದಲ್ಲಿ ವ್ಯಾಕರಣವನ್ನೇ ಕೈಕೊಳ್ಳುತ್ತಾರೆ. ಆದರೆ ಅಂಥವರಿಗೆ ತಮ್ಮ ಅಭ್ಯಾಸವು ಎಂದಿಗೂ ಮುಗಿಯಲಾರದೇಂಬ ಮೂಕು ಬೇಗ ಮನದಟ್ಟಾಗುತ್ತದೆ. ನಿಯಮದ ಹಿಂದೆ ನಿಯಮವನ್ನು, ಅಧ್ಯಾಯದ ಹಿಂದೆ ಅಧ್ಯಾಯವನ್ನು ತಿರುತಿರುವಿ ಡಾಕುತ್ತ ಶಿಕ್ಷಕನೂ ವಿದ್ಯಾರ್ಥಿಯೂ ಬೇಸತ್ತು, ಬುಯಾರಿ, ಬಳಲಿ, ತಲೆದಿರುಗಿ, ಕಟ್ಟ ಕಡೆಗೆ ಕೈಯಲ್ಲಿ ತಕ್ಕೊಂಡ ಪುಸ್ತಕವನ್ನು ಅಂತೂ ಇಂತೂ ಎಳದು ಚಲ್ಲಿದ ಬಳಿಕ ತಾವು ಭಾಷೆಯನ್ನು ಎಷ್ಟು ಮಟ್ಟಿಗೆ ಕಲಿತಿರೇದು ನೋಡುವಷ್ಟರಲ್ಲಿ, ಇನ್ನೂ "ಶ್ರೀಗಣೇಶಾಯನಮಃ" ಎಂಬ ಮಂಗಲಾಚರಣವನ್ನು ಸಹ ದಾಟಿಲ್ಲವೆಂದರಿತು, ಅವರು ಗಾಬರಿಪಟ್ಟು ಸುರನಿಡುವರು. ವ್ಯಾಕರಣದ ಆರಂಭದಲ್ಲಿ ನಾವು ಪದಗಳ ವಿಭಕ್ತಿ ರೂಪಗಳೆಲ್ಲ ಬರೆದಿರುತ್ತವೆ. ಅವುಗಳನ್ನೆಲ್ಲ ಕಲಿತು, ಬಂದು ವರ್ಗದ ಶಬ್ದಗಳನ್ನೆಂತು ಪೂರಾಪೆಯೆಂದು ನಾವು ಸಂ

ತೋಷ ಪಡುತ್ತೇವೆ. ಆದರೆ ಅವೆಲ್ಲ ಗುಡ್ಡಕ್ಕೆ ಕಲ್ಲು
ಹೊತ್ತಹಾಗೇ. ಯಾಕಂದರೆ, ವ್ಯಾಕರಣವನ್ನು ಸಮಗ್ರ
ವಾಗಿ ಮುಗಿಸಿದ ಹೊರ್ತು, ಒಂದು ಬಿಟ್ಟು ಸಾವಿರ ಸಾ
ರ ನಾಮಗಳ ವಿಭಕ್ತಿ ರೂಪಗಳನ್ನು ಕಲಿತಾಗ್ಯೂ, ಅ
ಲ್ಲ ನಿಳಿಗೆ ಮಾತು ಕಲಿಸಿದ ಹಾಗೇ. ಆದರೆ ವ್ಯಾಕರಣ
ನ್ನು ಮುಗಿಸಿದಾಗ್ಯೂ ಭಾಷಾರೂಢಿಯ ಅಜ್ಞಾನವು ಹಾಗೇ
ಉಳಿಯುವದು. ವಾಕ್ಯಗಳಲ್ಲಿ ಶಬ್ದಗಳನ್ನು ಇಡುವ ಕ್ರ
ಮವು ಬೇರೆ ಬೇರೆ ಭಾಷೆಯಲ್ಲಿ ಬೇರೆ ಬೇರೆ ತರದ್ದಿ
ರುತ್ತದೆ. "ಮೋರೆ ಕೈಗಳನ್ನು ತೊಳದುಕೊಳ್ಳಲಿ
ಕ್ಕೆ ತಣ್ಣೀರು ತಾ" ಎಂಬ ದೊಂದು ಸುಲಭ ವಾಕ್ಯ
ನ್ನು ತಕ್ಕೊಳ್ಳುವ. ಇದು ಮಹಾರಾಷ್ಟ್ರದಲ್ಲಿ, "ಮೊ
ರೆ ಮತ್ತು ಕೈಗಳು ತೊಳೆಯಲಿಕ್ಕೆ ತಣ್ಣೀರು ತಾ"
ಹಿಂದುಸ್ಥಾನಿಯಲ್ಲಿ, "ತಣ್ಣೀರು ತಾ ಮೋರೆ ಮತ್ತು
ಕೈಗಳು ತೊಳೆಯಲಿಕ್ಕೆ" ಇಂಗ್ಲಿಷದಲ್ಲಿ, "ತಾ ತಣ್ಣೀ
ರು ತೊಳೆಯಲಿಕ್ಕೆ ನಂನ ಮೋರೆ ಮತ್ತೂ ಕೈಗಳು"
ತುರ್ಕೀ ಭಾಷೆಯಲ್ಲಿ, "ತಣ್ಣೀರು ನನಗಾಗಿ ತಾ ಮೋ
ರೆ ನನ್ನದು ಮತ್ತು ಕೈಗಳು ನನ್ನವು ತೊಳೆಯಲಿಕ್ಕೆ"
ಇತ್ಯಾದಿ. ಇದರಿಂದ ಇದಕ್ಕೂ ಹಚ್ಚಿಗೆ ತೊಡಕಾದ ಮೊ
ದಲಾದ ವಾಕ್ಯಗಳಲ್ಲಿ ಎಷ್ಟು ತೊಂದರೆ ಇರುತ್ತದೆಂಬುದನ್ನು
ಸುಲಭವಾಗಿ ತರ್ಕಿಸ ಬಹುದು. ಆದರೆ ಭಾಷೆಯ ಅಭ್ಯಾ
ಸದಲ್ಲಿ ಇದಕ್ಕಿಂತಲೂ ಬಹಳ ಹಚ್ಚಿಗೆ ಅಕ್ಕಟ್ಟಾದ ಪ್ರಸ
ಕ್ತಿಗಳು ಇನ್ನೂ ಕೆಲವುಂಟು. ಅವು ಯಾವವೆಂದರೆ
೧ ಒಂದೇ ಅರ್ಥವನ್ನು ಒಂದೇ ಭಾಷೆಯಲ್ಲಿ ಹಲವು
ಪ್ರಕಾರವಾಗಿ ವ್ಯಕ್ತ ಪಡಿಸುವ ರೀತಿಯು, ೨ ಕೆಲ ಕೆಲ

೨) ಪದಗಳಂನು ಲೋಪ ಮಾಡಿ ಪ್ರಯೋಗಿಸಲ್ಪಡುವ ವಾಕ್ಯಗಳು, ೪) ಲಾಕ್ಷಣಿಕ ವಾಕ್ಯಗಳು (ಇವನು ಕರ್ಣನಾದ್ದಾನೆ), ೪) ಸಂಕಲಿತ ಶಬ್ದಗಳು (ತಲೆದೂಗು, ಎದೆಯ ಮೇಲಿನ ಕೈ), ೫) ಗಾದೆಗಳು, ಇತ್ಯಾದಿ.

ಇಂಥಾ ಬಿಗಿಯಾದ ಸಂಗತಿಗಳಂನು ಕುರಿತು ವ್ಯಾಕರಣವು ಏನೇನು ಕಲಿಸುವದಿಲ್ಲ, ಇವೇ ಮೇರಿಗೆ ಶಬ್ದಗಳ ಉಚ್ಚಾರಗಳೂ, ಅವುಗಳ ವ್ಯುತ್ಪತ್ತಿಯೂ, ಅರ್ಥಭೇದಗಳೂ ಸಹ ವ್ಯಾಕರಣದಲ್ಲಿ ಎಷ್ಟು ಮಾತ್ರವೂ ತಿಳಿಯುವದಿಲ್ಲ. ತಾತ್ಪರ್ಯ ನೇನೆಂದರೆ, ಕಲಿಯುವವರು ಆತುರ ಪಟ್ಟು ಹುಡುಕುವಂಥ ನಿಯಮಗಳೇನು ವ್ಯಾಕರಣದಲ್ಲಿ ದೊರೆಯುವದಿಲ್ಲ; ಪಾಠಶಾಲೆಯಾಗಿ ಸುಲಭವಾಗಿರುವಂಥ ನಿರುಪಯುಕ್ತ ಪ್ರಸಕ್ತಿಗಳಂನು ಕುರಿತು ಮಾತ್ರ ಅದರಲ್ಲಿ ಉದ್ದುದ್ದ ನಿಯಮಗಳು ವಿಗ್ಗಳವಾಗಿ ಬರೆಯಲ್ಪಟ್ಟಿರುತ್ತವೆ. ಇದಲ್ಲದೆ ವ್ಯಾಕರಣದ ನಿಯಮಗಳು ಬಹು ತರವಾಗಿ ಸಂಶಯಗ್ರಸ್ತ ವಿರುತ್ತವೆ; ಈ ನಿಯಮಗಳ ಕಾರಣವಂತು ವ್ಯಾಕರಣದ ವಿಷಯವನ್ನೇ ಕಲ್ಲ.

(ಮುಂದೆ ಸಾಗುವದು)

ಭಾಷಾಂತರಪರ್ಣ.

——— ೦೦೦ ———

೩೨ ವರ್ಣಸ್ಥಾನಗಳು— ಬಾಯೊಳಗೆ ಅಕ್ಷರಗಳು ಹುಟ್ಟುವ ಸ್ಥಾನಗಳಿಗೆ ವರ್ಣಸ್ಥಾನಗಳೆಂಬ ಹೆಸರು. (ಕ; ೪೦ನೇ ಸೂ.).

ಉದಾಹರಣೆ.

'ಅ, ಆ, ಕ, ಖ, ಗ, ಘ, ಙ, ಹ, ವಿಸರ್ಗಗಳ ಕಂಠಸ್ಥಾನದಲ್ಲಿ (ಗಂಟಲೊಳಗೆ) ಹುಟ್ಟುವದರಿ ಕಂಠ್ಯವೆನಿಸುವವು.

'ಇ, ಈ, ಚ, ಛ, ಜ, ಝ, ಞ, ಯ, ಶ' ಈ ಗಳು ತಾಲುಸ್ಥಾನದಲ್ಲಿ (ಅಂಗಳದಲ್ಲಿ) ಹುಟ್ಟುವದ ತಾಲವ್ಯವೆನಿಸುವವು.

'ಋ, ಟ, ಠ, ಡ, ಢ, ಣ, ರ, ಷ, ಳ' ಕಾರಗ ಮೂರ್ಧಾಸ್ಥಾನದಲ್ಲಿ (ಅಂಗಳಿಗೂ ಹಲ್ಲುಗಳ ಬು ಕ್ಕೂ ನಡುವಿರುವ ಸ್ಥಾನ) ಹುಟ್ಟುವದರಿಂದ ಮೂರ್ಧ ನ್ಯವೆನಿಸುವವು.

'ಌ, ತ, ಥ, ದ, ಧ, ನ, ಲ, ಸ' ಕಾರಗಳು ದಂ ಸ್ಥಾನದಲ್ಲಿ (ಹಲ್ಲಿನೊಳಗೆ) ಹುಟ್ಟುವದರಿಂದ ದಂತ್ಯವೆ ನಿಸುವವು.

'ಉ, ಊ, ಪ, ಫ, ಬ, ಭ, ಮ' ಕಾರಗಳು ಔ ಸ್ಥಾನದಲ್ಲಿ (ತುಟಿಯುಲ್ಲಿ) ಹುಟ್ಟುವದರಿಂದ ಔಷ್ಠ್ಯ ವೆನಿಸುವವು.

'ಎ, ಏ, ಐ' ಕಾರಗಳು ಕಂಠತಾಲುಗಳಿಂದ ಹುಟ್ಟು ವ ಕಾರಣ ಕಂಠತಾಲವ್ಯವೆನಿಸುವವು.

'ಒ, ಓ, ಔ' ಕಾರಗಳು ಕಂಠೌಷ್ಠ್ಯಗಳಿಂದ ಹು ಟ್ಟುವ ಕಾರಣ ಕಂಠೌಷ್ಠ್ಯವೆನಿಸುವವು.

ಅನುಸ್ವಾರವು ನಾಸಿಕ್ಯ ಸಹಾಯದಿಂದ ಹುಟ್ಟುತ್ತ

'ವ' ಕಾರವು ದಂತೌಷ್ಠ್ಯಗಳಿಂದ ಹುಟ್ಟುವ ಕಾರಣ ದಂತೌಷ್ಠ್ಯವೆನಿಸುವದು.

೬೪ ಕಾ * ಗುಣಿತಾಕ್ಷರಗಳು—'ಕ್, ಗ್' ಮುಂತ್ತ

* ಕಾಗುಣಿತಾಕ್ಷರ (ಕ+ಆ+ಗುಣಿತ+ಅಕ್ಷರ) 'ಕ' ಕಾರ ಮುಂತಾಗಿ ಹೆಚ್ಚು ಮಾಡಿಕೊಂಡ ಅಕ್ಷರಗಳು.

ನ ವ್ಯಂಜನಗಳು ಸ್ವರಯುಕ್ತವಾಗದೇ ಉಚ್ಚಾರವಾಗು ದಿಲ್ಲ; ಸ್ವರ ಶೇರದಾಗ ಈ ವ್ಯಂಜನಗಳು ಅರ್ಧಾಕ್ಷರ ನಿನಿಸುವವು. ಆ ಕಾರಣ ಈ ವ್ಯಂಜನಗಳಿಗೆ ಸ್ವರಗಳ ನ್ನು ಕೂಡಿಸಿ ಉಚ್ಚಾರಣೆಗೆ ಸರಿಯಾಗುವಂತೆ ಬಳ್ಳಿಗಳ ನ್ನು ಮಾಡಿಕೊಂಡಿದ್ದಾರೆ. ಆ ಬಳ್ಳಿಗಳೇ ಕಾಗುಣಿತಾ ಕ್ಷರಗಳು.

ಉದಾಹರಣೆ.

'ಕ್' ಈ ವ್ಯಂಜನಕ್ಕೆ 'ಅ' ಸ್ವರ ಕೂಡಿದಾಗ 'ಕ' ಕ್ಷರ ವಾಗುವದು.

ಕ್	ಅ	ಕಾ
ಕ್	ಇ	ಕಿ
ಕ್	ಈ	ಕೀ
ಕ್	ಉ	ಕು
ಕ್	ಊ	ಕೂ
ಕ್	ಋ	ಕೃ
ಕ್	ೠ	ಕೄ
ಕ್	ಎ	ಕೆ
ಕ್	ಏ	ಕೇ
ಕ್	ಐ	ಕೈ
ಕ್	ಒ	ಕೊ
ಕ್	ಓ	ಕೋ

ಕ್	ಟಿ	ಕೌ
ಕ್	ಅಂ	ಕಂ
ಕ್	ಅಃ	ಕಃ

ಈ ಮೇರೆಗ 'ಳ' ಕಾರದ ವರೆಗೆ ಆದ ಬಳ್ಳಿಗಳು ಸಂಯುಕ್ತಾಕ್ಷರಗಳು.

(೩) ವ್ಯಂಜನಗಳಿಗೆ ಸ್ವರಗಳು ಸೇರಿ ಬಳ್ಳಿಗಳಾದ ಸ್ವರಚಿಹ್ನೆಗಳೂ ಅವುಗಳ ಸಂಜ್ಞೆಗಳೂ ಯಾವುವೆಂದರೆ.

ಸ್ವರ	ಚಿಹ್ನೆ	ಸಂಜ್ಞೆ
ಅ	೬ ಲೋಪ	ತಲೆಕಟ್ಟು
ಆ	ಾ	ಇಳಿ
ಇ	ಿ	ಬಿಳಿಗುಡಿಸು*
ಈ	ೀ	ಬೊರಗುಡಿಸು
ಉ	ು	ಕೊಂಬು
ಊ	ೂ	ಕೊಂಬಿನ ಇಳಿ
ಋ	ೃ	ಕರಾಳಿ
ಎ	ೆ	ಮೇಲ್ಗುಡಿಸು
ಏ	ೇ	"
ಐ	ೈ	ಕೆಳಗ್ಯೆತ
ಒ	ೊ	ಒತ್ತ್ವ
ಓ	ೋ	ಓತ್ತ್ವ
ಔ	ೌ	ಔತ್ತ

* ಗುಡಿಕಟ್ಟು=ವರ್ಣವಿಚಾರರೇಖೆ (ಕುಂಡಲೀಕರಣ). ಅಂದರೆ ಶಬ್ದ ಮಂಡಿಸುವ ಪದ್ಧತಿ.

೫೪ ದ್ವಿತ್ವಾಕ್ಷರಗಳು—ನಡುವೆ ಸ್ವರವಿಲ್ಲದೆ ಎರಡೂ ಮೂರೂ ವ್ಯಂಜನಗಳು ಒಂದಕ್ಕೊಂದು ಕೂಡಿ ಆದ ಅಕ್ಷರಗಳು; ಇವುಗಳಿಗೆ ಒತ್ತಕ್ಷರವೆಂತಲೂ ಹೆಸರು. ಉದಾ: ಕ್+ರ=ಕ್ರ, ತ್+ಪ=ತ್ಪ, ಬ್+ಲ=ಬ್ಲ, ಸ್+ತ್ರೀ=ಸ್ತ್ರೀ ಇತ್ಯಾದಿ.

(೬) ದ್ವಿತ್ವಾಕ್ಷರಗಳ ಸಂಯೋಗ ಚಿನ್ಹಗಳು—ಕ, ನ, ಮ, ಯ, ರ, ಲ' ಇವುಗಳನ್ನು ಕ್ರಮದಿಂದ ಂ, ಳ, ಃ, ೃ, ೄ, ಁ' ಹೀಗೆ ಒತ್ತು ಕೊಡುತ್ತಾರೆ. ಉದಾ: ಸ್ತ, ಸ್ನ, ಸ್ಮ, ಸ್ಯ, ಸ್ರ, ಸ್ಲ. ಕೆಲವುಗಳ ಮೂಲ ಸ್ವರೂಪ ಹಾಗೇ ಉಳಿದುಬಿವೆ. ಉದಾ: ಜ್ಞ, ಜ್ಞ, ಣ್ಣ, ಬ್ಬ. ಕೆಲವುಗಳ ತಲೆಕಟ್ಟು ಭ್ರೋಗುನದು. ಉದಾ: ಕ್ಕ, ಗ್ಗ, ಪ್ಪ, ಜ್ಜ, ಟ್ಟ, ಡ್ಡ, ದ್ದ, ಪ್ಪ, ವ್ವ, ಶ, ಸ್ಸ, ಹ್ಮ, ಳ್ಳ.

೫೫ ಮಹಾಪ್ರಾಣಕ್ಕೆ ಮಹಾಪ್ರಾಣದ ಒತ್ತು ಬರುವದಿಲ್ಲ. ಅಂಥ ಪ್ರಸಂಗ ಬಂದಾಗ ಮೊದಲಿನ ಮಹಾಪ್ರಾಣವು ಅಲ್ಪಪ್ರಾಣವಾಗುವದು. (೭೦ ನೇ ನಿಯಮ ನೋಡು). ಉದಾ: ಇಚ್ಛೆ, ಲೆಕ್ಖ, ಕಬ್ಬಪ (ಆವೆ), ಚಿಪ್ಪು ಇತ್ಯಾದಿ.

೫೬ 'ರ್' ಕಾರಕ್ಕೆ ಮತ್ತೊಂದು ಅಕ್ಷರವನ್ನು ಒಂ ಕೊಡುವದಕ್ಕೆ ಬದಲಾಗಿ ಆ ಅಕ್ಷರದ ಮುಂದೆ 'ರ' ಫ ಬರೆಯುತ್ತಾರೆ. ಉದಾ: ವರ್ತಮಾನ=ವರ್ತಮಾ ಕಾರ್ಯ=ಕಾರ್ಯ ಇತ್ಯಾದಿ.

೫೭ ಹಳೆಗನ್ನಡದಲ್ಲಿ ಹಲವು ವ್ಯಂಜನಾಂತ (ಹಲಂ ಶಬ್ದಗಳುಂಟು; ಆ ಶಬ್ದಗಳ ಕಡೆಯ ವರ್ಣಗಳು

ಯಾವವಂದರೆ. 'ಯ್, ರ್, ಲ್, ಣ್, ನ್, ಳ್' ವಾರು (ಶ. ೪೪ ನೇ ಸೂ.)

ಉದಾಹರಣೆ.

ಯಕಾರಕ್ಕೆ—ಬಾಯ್, ಬೆಯ್, ಕೊಯ್, ಪೊಯ್, ಸೊಯ್ ಇತ್ಯಾದಿ.

ರಕಾರಕ್ಕೆ—ನಾರ್, ಬೇರ್, ತೇರ್, ತೆಮರ್, ಬಿರ್, ಉಸಿರ್, ನೀರ್, ಮೊಸರ್, ತರ್, ಕುಳಿರ್, (ಚಳಿ) ಇತ್ಯಾದಿ.

ಲಕಾರಕ್ಕೆ—ಪಾಲ್, ಕಾಲ್, ಕೋಲ್, ನೂಲ್ ನೂಲ್ಕಲ್, ಹಲ್, ನೆಲ್, ಬಿಲ್, ಕವಲ್ ಜಗಲ್, ಬಗಲ್ ಇತ್ಯಾದಿ.

ಣಕಾರಕ್ಕೆ—ಪವಣ್, ನಾಣ್, ಜಾಣ್, ಮಾಣ್, ಗಣ್, ಕೆಣ್, ಮಣ್, ಪ್ರೊಣ್, ಪೆಣ್ ಇತ್ಯಾದಿ.

ನಕಾರಕ್ಕೆ—ಪೊನ್, ಬೆನ್, ಏನ್, ಜೇನ್, ಸೀನ್, ನೀನ್, ಬಾನ್ (ಆಕಾಶ) ಇತ್ಯಾದಿ.

ಳಕಾರಕ್ಕೆ—ಬಿಳ್, ತಳ್, ಮಿದುಳ್, ಕರುಳ್, ಕಡುಳ್, ತಿರುಳ್, ಮುಗುಳ್, ಪೊಗಳ್ ಬೀಳ್ ಇತ್ಯಾದಿ.

(೩) 'ಡ್' ಕಾರವು ವಿಕಲ್ಪದಿಂದ ಬರುತ್ತದೆ ಉ. ಕಾಡ್, ಕೋಡ್, ನಾಡ್ ಇತ್ಯಾದಿ.

(ಮುಂದೆ ಸಾಗುವದು.)

ಗಂಗಾಧರ ಮಡಿವಾಳೇಶ್ವರ ತೂರಮರಿ
ಆ. ತ್ರಾನಸ್ಲೇಟರ್.

ಪರೀಕ್ಷೆಯಲ್ಲಿ ಪಡೆದಗುಣಗಳ ಕ್ರಮವನ್ನು ಅನುಸರಿಸಿ ಪಾಸಾದವರ ಹೆಸರುಗಳ ಪಟ್ಟಿ.

ನಂಬರ.	ಹೆಸರು. ಎರಡನೇ ವರಷದ ಅಭ್ಯಾಸದವರು ಫರ್ಸ್ಟ್ ಕ್ಲಾಸ ಸರಟಿಫಿಕೀಟವನ್ನು ಪಡಕೊಂಡವರು.	ಗುಣಗಳಲ್ಲಿ ಪಾಸಾದ ಗುಣಗಳು.	೧೦೦ಕ್ಕೆ ಪಾಸಾದ ಗುಣಗಳು.	ಎಷ್ಟು ರೂಪಾಯಿದ ಲಾಯಖಿ ಸರಟಿಫಿಕೀಟದೊರಿಯಿತು.
೧	ರುದ್ರಾ ಬಂಡೆಪ್ಪಾ ರೇವಡಿ.	೪೪೪	೭೨೨	೨೫
೨	ಮಲ್ಲಾರ ವಾಸುದೇವ ಕುಲಕರ್ಣಿ.	೪೨೪	೭೦೨	೨೫
೩	ಆನಂದ ಬಾಳಕೃಷ್ಣ ದೇಶಪಾಂಡೆ.	೪೨೦	೭೦	,,
೪	ದಾಜಿ ನಾರಾಯಣ ಸೋಹನಿ.	೪೧೬	೬೯೩	೨೦
೫	ರಾಮಕೃಷ್ಣ ಕಾಶಿನಾಥ ಭಾರಮಾಡ.	೪೦೫	೬೭೫	,,
೬	ಚೆನ್ನಪ್ಪಾ ಬಸಪ್ಪಾ ವಪ್ಪಿನ.	೪೦೪	೬೭೪	,,
೭	ಸುಂಬಾಜಿ ಬಾಪ್ಪಾಜಿ ದಾನೆ.	೪೦೨	೬೭೦	,,
೮	ವೀರಭದ್ರಪ್ಪಾ ವೀರಬಸಪ್ಪಾ ಶ್ರಿಂಗಾರಿ.	೪೦೨	೬೭೦	,,

೧೯	೧೯	೧೯	೧೯	೧೯	೧೯	೧೯
೧೦	೧೦	೧೦	೧೦	೧೦	೧೦	೧೦

ಪುಟ	
೧	ಪ್ರಾರ್ಥನೆ
೧೧	ಸಂಧ್ಯಾವಂದನೆ
೨೫	ಪ್ರಾತಃಕಾಲದ ಪ್ರಾರ್ಥನೆ
೩೦	ಮಧ್ಯಾಹ್ನದ ಪ್ರಾರ್ಥನೆ
೩೫	ಸಾಯಂಕಾಲದ ಪ್ರಾರ್ಥನೆ
೪೦	ಪ್ರಾತಃಕಾಲದ ಸ್ತೋತ್ರ
೪೫	ಸಾಯಂಕಾಲದ ಸ್ತೋತ್ರ
೫೦	ಪ್ರಾತಃಕಾಲದ ಸ್ತೋತ್ರ
೫೫	ಸಾಯಂಕಾಲದ ಸ್ತೋತ್ರ
೬೦	ಪ್ರಾತಃಕಾಲದ ಸ್ತೋತ್ರ
೬೫	ಸಾಯಂಕಾಲದ ಸ್ತೋತ್ರ
೭೦	ಪ್ರಾತಃಕಾಲದ ಸ್ತೋತ್ರ
೭೫	ಸಾಯಂಕಾಲದ ಸ್ತೋತ್ರ
೮೦	ಪ್ರಾತಃಕಾಲದ ಸ್ತೋತ್ರ
೮೫	ಸಾಯಂಕಾಲದ ಸ್ತೋತ್ರ
೯೦	ಪ್ರಾತಃಕಾಲದ ಸ್ತೋತ್ರ
೯೫	ಸಾಯಂಕಾಲದ ಸ್ತೋತ್ರ
೧೦೦	ಪ್ರಾತಃಕಾಲದ ಸ್ತೋತ್ರ
೧೦೫	ಸಾಯಂಕಾಲದ ಸ್ತೋತ್ರ
೧೧೦	ಪ್ರಾತಃಕಾಲದ ಸ್ತೋತ್ರ
೧೧೫	ಸಾಯಂಕಾಲದ ಸ್ತೋತ್ರ
೧೨೦	ಪ್ರಾತಃಕಾಲದ ಸ್ತೋತ್ರ
೧೨೫	ಸಾಯಂಕಾಲದ ಸ್ತೋತ್ರ

| | | |

| | | |

೧೨೨೨

ರಾಮಚಂದ್ರ ಭೀಮರಾವ ಅಮಲಿಕರ.
ಅಧ್ಯಕ್ಷರು ಮಾಮಲೇದಾರರು.
ರಾಮಚಂದ್ರ ಕೇಶವ ಹಿರಿಯಕ್ಕ.
ಸಾಮಾ ಜ್ಞಾನ ಮಾಡಕ.
ಅಂತು ಲಿಖಿತಮಿದಂ ಸಾಕ್ಷಿ ರ.
ಸಿದ್ಧಿಕೊಂಡಪ್ಪ ಮಾಡಕ.

೧೯ ಸೋಮವಲೇ ಮಾಕ.
೨೧ ಎರಡಲೇ ಮಾಕ.
ಸಾಕ್ಷಿ
ಗಣಪತಿರಾಯ ಬಂಡಾಸು.
೨ ಸೋಮವಲೇ ಮಾಕ.
೨ ಎರಡಲೇ ಮಾಕ.

೧೯೦೨ ೧೯೦೨
೧೯೦೨ ೧೯೦೨
೧೯೦೨ ೧೯೦೨

೧೫ ೧ ೨ ೨

ತಯಾರವಾಡಿದ ತಾರೀಖು ೧೪ ಮಾರ್ಚ ಸನ್ನ
೧೮೭೭ ಇಸವಿ.

ಪ್ರಿ. ಟ್ರೈ. ಕ್ಲಾ. ಧಾರವಾಡ.

CORRESPONDENCE.
ಪತ್ರವ್ಯವಹಾರವು

ಜಾರುಬಂಡೆಯೂ ತಲೆಬಾವುಗವು.

ಪತ್ತು ಹುಡುಗರು ಕೂಡಿ ಯತ್ನದಿ
ಹತ್ತು ಹತ್ತಿಲೆ ಎಂದು ಕೂಗುತ|
ಮತ್ತೆ ಬೇಗನೆ ಹತ್ತಿರೆನುತಲಿ ಭರದಿ ಹತ್ತುವರು||
ಸುತ್ತು ಮುತ್ತಲೆ ನೋಡು ತೆಲ್ಲವ|
ರೆತ್ತರದ ಬಂಡೆಯನು ಯೇರುತ|
ಹತ್ತಿ ತಪಕದಿ ಜಾರ ಬೇಕೆಲೆ ಯೆಂದು ಕೂಗುವರೂ||೧|

ಟೀಪು.

ಈ ಜಾರಬಂಡಿಯು ಗದಗ ತಾಲೂಕ ಮುಳಗುಂದದ
ಸ್ಪೂರ್ವಭಾಗದಲ್ಲಿ, ಇದ್ದು ಕಾರ್ತಿಕ ಶುದ್ಧ ೧೫ ದಿವಸ ಪು
ಹಾ ಉತ್ಸಹವಾಗುವದು. ಇದು ಬಹ್ಳ ಪುರಾತನದ್ದು.
ಇದು ಬಹ್ಳ ದೊಡ್ಡ ಬಂಡೆಗಲ್ಲಿನ ಮೇಲೆ ಇಳಿಜಾರಾಗಿ
ಇರುವದರಿಂದ ಇದಕ್ಕೆ ಜಾರುಬಂಡೆ ಎಂಬ ಪೆಸರಾಯಿ
ತು. ಗುಡ್ಡದ ಮಧ್ಯದಲ್ಲಿ ಹರನಾಳಿಗಿಯ ಹಾಗೆ ತೆಗ್ಗು
ಟು. ಈ ತೆಗ್ಗಿಗೆ ಹುಡುಗರು ಎಂಟೆಯನ್ನು ಹಚ್ಚಿದಳ

ಹುರ್ರನೆ ಹಾರಿಸುತ ಹಾರುಬಂಡೆಯು ಕೆಳಗೆ ಕಂದು ಇ
ಸುವದು.

ಈ ಬಂಡೆಯ ಮೇಲೆ ಕಲ್ಲಿನ ಕತ್ತಿಯುಂಟು.
ಪೂರ್ವಕಾಲದಲ್ಲಿ ಈ ಬಂಡೆಯ ಮೇಲೆ ಯಾವನೊ
ಒಬ್ಬ ರಾಜನು ತಂನ ಕುದುರೆಯನ್ನು ಹತ್ತಿಸಿದ್ದನಂತ
ಅವನ ಕುದುರೆಯ ಹೆಜ್ಜೆಗಳು ಈಗಾವರೂ ಮೂಡಿರುತ್ತ
ವೆ. ಈ ಕಲ್ಲಿನ ಮೇಲಿಂದ ಮೇಲಕೆ ಹತ್ತಿದರೆ ಕಲ್ಲಿ
ನಗಾರಿ ಹತ್ತುತ್ತದೆ. ಆ ನಗಾರಿಯಂನು ಕಲ್ಲಿನಿಂದ ಹೊ
ದರೆ ಆಯಿತು; ಖಣ ಖಣ ಸಪ್ಪಳವು ಕೇಳಲಾರಂಭ
ಸುತ್ತದೆ.

ದೊಡ್ಡತಲೆ ಬಾವುಗವು.

ಮುಳಗುಂದದ ದಕ್ಷಿಣ ದಿಕೆನಲ್ಲಿ ಒಂದು ದೊಡ್ಡ ಗುಡ್ಡ
ಉಂಟು. ಆ ಗುಡ್ಡವು ಅನೇಕ ಬಂಡೆಗಲ್ಲುಗಳಿಂದಾಗಿರು
ತ್ತದೆ. ಈ ಬಂಡೆಗಳ ಸಾಲುಗಳಲ್ಲಿ ಒಂದರ ಹಿಂದೆ ಪ್ರಾ
ಚೀನ ಕಾಲದಲ್ಲಿ, ಯಾವನೋ ಒಬ್ಬ ಗ್ರಹಸ್ಥನು ಸು
ಮಾರು ೭ಳಿ ಫೂಟು ಎತ್ತರವಾದದ್ದೊಂದು ಮನುಷ್ಯ
ವಿಗ್ರಹವನ್ನು ಕಟಿದಿಟ್ಟಿರುತ್ತಾನೆ. ಈ ವಿಗ್ರಹವು ಲಿಲ್ಲಿ ಪಟ್ಟ
ಣ ದೇಶ ಪರ್ಯಟನ ಮಾಡಿದ ಗಳ್ಳವರನಂತೆ ಇರುವದು
ಇದರ ಪೂರ್ಣರೂಪವನ್ನು ಕಟೆಯುವಷ್ಟರಲ್ಲಿ ಕಟ್ಟೆ
ಯುವ ಗ್ರಹಸ್ಥನು ರಕ್ತ ಕಾರಿ ತೀರಿ ಹೋದನು. ಅವ
ನು ಈ ಮೂರ್ತಿಯ ಸೋರೆಯನ್ನಷ್ಟೇ ಚನ್ನಾಗಿ ಕಟದಿ
ರುತ್ತಾನೆ. ಉಳಿದ ಅವಯವಗಳು ನಿಚ್ಚಳ ಕಾಣಿಸುವದಿ
ಲ್ಲ. ಇವನನ್ನು ಈ ಮೂರ್ತಿಯು ತಾನೇ ತಿಂದು ಬಿಟ್ಟ
ಕಾರಣ ಆ ಮನುಷ್ಯನ ರಕ್ತವು ಅದರ ಸೋರೆಯ ಮೇ

ಲೆ ಈಗಲಾದರೂ ಕಾಣಿಸುತ್ತದೆ. ಎಂದೂ ನೋಡದವರು ಇದನ್ನು ನೋಡಿದರೆ ಗದಗದ ನಡಗುತ್ತಾರೆ. ಇದರ ಹೆಸರು ದೊಡ್ಡ ತಲೆ ಬಾವುಗವ್ವ.

ಮು।ಮುಳಗುಂದ. ತಾ।ಇ।ಎ।ಎ।ಎ

ಮು.ಸ್ವಾ.ಹಕಾತೀ ಹೈಸ್ಕೂಲ ವಿದ್ಯಾರ್ಥಿ ಧಾರವಾಡ.

ಮಹಾರಾಜ ರಾ. ರಾ. ಮುರಪತ್ರ ಕರ್ತರಾದ ಎಡೀಟರರ ಚರಣ ಸನ್ನಿಧಾನಕ್ಕೆ.

ವಿನಂತಿ ವಿಜ್ಞಾಪನೆ ಮಾಡಿ ಬರಕೊಳ್ಳುವದೇನಂದರೆ ಕೆಳಗೆ ಬರದ ನಾಲ್ಕು ಪಂಗ್ತಿಗಳಿಗೆ ತಮ್ಮ ಕರಕಮಲದಲ್ಲಿ ಉದ್ಭವಿಸುವ ಶಾಲಾಪತ್ರದಲ್ಲಿ ಸ್ಥಳಕೊಟ್ಟು ಛಾಪಿಸಿ ಪ್ರಸಿದ್ಧ ಮಾಡುವಿರೆಂದು ಅನೇಕ್ಷಿಸುತ್ತೇನೆ.

ಸೈದಕಹಾ ಎಂಬವನು ಕಳಸಿದ ಲೆಖ್ಖವು ಕಳದ ಜುಲಾಯಿ ತಿಂಗಳನ ಕಾ. ಪ. ಪ್ರ. ಎಪ್ಪತ್ತೊಂಭತ್ತರಲ್ಲಿ ಛಾಪಿಸಿದೆ. ಅದನ್ನು ಬಿಡಿಸುವ ರೀತಿಯು.

ಇಲ್ಲಿ (ಶೂ) ಗುಡಿಗಳಿದ್ದು ಇವುಗಳಲ್ಲಿ (ಐ) ನೇ ಗುಡಿಯಲ್ಲಿ ಇಪ್ಪತ್ತು ಒಟ್ಟು ಅಂತಾ ಇಲ್ಲ ಹಾಗು ಏರಿಸಿದ್ದು ಇಲ್ಲ ಅದರ ದಕೆಯಿಂದ ಬಾಕೀ ಉಳಿದ (೪) ಗುಡಿಗಳಿಗೆ ಏರಿಸಿದಷ್ಟೇ ಮೊದಲನೇ ಗುಡಿಗೂ ಏರಿಸಿದನು ಎರಡನೆ (೪) ಗುಡಿಗಳಿದ್ದವು ಎಂತ ತೆಗೆದುಕೊಂಡಿತು.

ಐ ನೇ ಗುಡಿಯಲ್ಲಿ ಒಂದಕ್ಕೆ ಎರಡಾಗಲಿ ಎಂದನು ಎಂತಾ ಐ

ಐ ನೇ ಗುಡಿಯಲ್ಲಿ ಒಂಡಕ್ಕೆ ಏಳಾಗಲಿ ಎಂದನು ಅದರ ದಕೆಯಿಂದ ಐ

ಷ ನೇ ಗುಡಿಯಲ್ಲಿ ಒಂದಕ್ಕೆ ಮೂರಾಗಲಿ ಎಂದ
ಆದ್ದರಿಂದ ಷ

ಳ ನೇ ಗುಡಿಯಲ್ಲಿ ಒಂದಕ್ಕೆ ಐದಾಗಲಿ ಎಂದ
ಅಂತಾ ಶ

೨×೩×೫×೫ ಇವುಗಳ ಲಘುತ್ತಮ ಭಾಜ್ಯ
(೨೩೦) ಇವು ಪ್ರತಿ ಯೊಂದೊಂದು ಗುಡಿಗೆ ಏರಿಸಿ
ಪ್ರ ಹಾಗು ಇನ್ನ ತಂದ ಪ್ಪಾವು ತೆಗೀ ತಕ್ಕಪ್ಪ.

೨೩೦÷೨=೧೦೫ ┐
೧೦೫÷೩= ೩೫ │
೩೫÷೫= ೭ │ ಇವುಗಳ ಬೀರಿದವು ೧೨೬
೭÷೭= ೧ ┘ ಇವು ನಾಲ್ಕು ಗುಡಿಗಳ ದಕೆಯಿಂ
ಪ್ರಪ್ಪಗಳು ಮತ್ತು ದರ ಒಂದು ಗ
೧೨೬

ಡಿಗೆ ೨೩೦ ರಂತೆ ಐದೂ ಗುಡಿಗೆ ಏರಸಿಅವೆ ಆ ಕಾರಣ
(೧) ನೇ ಗುಡಿಗೆ ಏರಿಸಿದ್ದು (೨೩೦) + ೧೨೬ ಈ
ಪ್ರ ನಾಲ್ಕು ಗುಡಿಗಳ ದೆಕೆಯಿಂದ ತಂದಪ್ಪು ಅಂತು ಪ್ರಪ್ಪಿ
ಮನೆಯಿಂದ ತಂದ ಪ್ರಪ್ಪವು.

REGISTERED NO. 147
1877

ಜಾಹಿರಾತ್ತು.

ಬೇಬ್ಲೊರ ಕ್ರತ ಹಿಂದುಸ್ಥಾನ ಇತಿಹಾಸದ, ಕ್ರ. ೧ ಅಣೆ, ಟಿ. ಹಾ. ಐ ಅಣೆ, ಇಂಗ್ರಜೀ ಐ ನೇ ಬುಕ್ಕಿನ ಬೆಲೆಲೆ ಬಿಡಿಸಿದ ಲೈಕ್ಸೆಂಟ ಸಹಿತಸ್ಪೇಲು, ಉಬ್ಬಿರ, ದ ಸಹಿತ ಶಬ್ದಸಂಗ್ರಹ ಕ್ರ. ೪ ಅಣೆ ಟಿ. ಹಾ. ೫ ಐ ಅಣೆ. ರಾ. ಹ. ಬೇಬ್ಲೊರ ಇ. ಮೂ. ಹಳ್ಳಿಳ ಇವ ಪತ್ತರ ಕಿಗುತ್ತವೆ. ಹಣ ಕಳಿಸಿದರೆ ಬಿಹ್ರಿ ತೀವ್ರ ರವ ತೇ ಆಗುವತ್ತೆ.

ಬೆಲಾಪತ್ರಕಾವ್ಯ.

ಪುಸ್ತಕ ೬೨] [ಸಂಚಿಕೆ ೬೨

ತಾರೀಖು, ೨೫ನೇ ಮಾಹೆ ಮಾರ್ಚ್, ೧೮೬೨.

EDUCATIONAL INTELLIGENCE.

ವಿದ್ಯಾಸುಧಾರಣಾಸಂಬಂಧವಾದ ವೃತ್ತಾಂತಗಳು.

ಮೆಡಿಬ್ರ್ಯಾನ ಡಾಯರೆಕ್ಟರ ಫೊರೆಗಳವರು ಈ ತಿಂ ಳಿನ ಆರಂಭದಲ್ಲಿ ಬೆಳಗಾಂವಿಗೆ ಬಂದಿದ್ದರು. ಅವರೆ ುಂದಕ್ಕೆ ಧಾರವಾಡದ ಕಡೆಗೆ ಬರದೆ ಹರೂರಿನ ಕೆಲಸ ನಿಮಿತ್ತವಾಗಿ ಹಿಂದಿರುಗಿ ಮುಂಬಯಿಗೆ ಹೋಗಿ ವಿ ುರು ತಿಂಗಳಿನ ಹಕ್ಕಿನ ರಜೆಯನ್ನು ತಕ್ಕೊಂಡಿದ್ದಾ ೆ. ಅವರು ಬರುವ ಮೇ ತಿಂಗಳಲ್ಲಿ ವಿಲಾಯತಿಗೆ ಹೋ ತಕ್ಕವರೆಂದು ಕೇಳುತ್ತೇವೆ.

ಮೆಡಿಬ್ರ್ಯಾನ ರಸೆಲ್ ಫೊರೆಗಳು ಎಪ್ರೀಲ್ ೫ನೇ ತಾರೀಖಿನಲ್ಲಿ ರಾ. ಸಾ. ಚನಬಸಪ್ಪನವರ ಕಡೆಯಿಂದ ಕಾ ವಾಡದಲ್ಲಿ ತಮ್ಮ ಆಫೀಸಿನ ಚಾರ್ಜವನ್ನು ತಕ್ಕೊಳ್ಳು ರೆಂದು ವರ್ತಮಾನ ವದೆ.

ರಾ. ರಾ. ವೆಂಕಟ ರಂಗೋ ಕಟ್ಟೀ ಇವರು ಮುಂ
ಯಿಯಲ್ಲಿ ಹಿರೀಯೆಂಟಲ ತ್ರಾನ್ಸಲೇಟರರ ಆಫೀಸಿನಲ್ಲಿ
ಸಭ್ಯಕ್ಕೆ ಕಾಯಬೆಯ ಭಾಷಾಂತರದ ಕೆಲಸಕ್ಕೆ ನೇಮಿ
ಲ್ಪಟ್ಟ, ಅವರ ಸ್ಥಲದಲ್ಲಿ ರಾ. ರಾ. ಪಾಂಡುರಂಗ ವೆಂ
ಟೇಶ ಚಿಂತಾಮಣಿ ನೇತಕರ ಇವರು ಅಕ್ಟಿಂಗ ಪ್ರಕಾ
ನೇಮಿಸಲ್ಪಡುವರೆಂದು ತಿಳಿದಬಿ.

ಮಧ್ಯಭಾಗದಲ್ಲಿ ಮುಂಬಾಯಿ ತ್ರಾನ್ಸಲೇಟರರಾಗಿದ್ದ
ಮೇಜರ ಕ್ಯಾಂಡೀಸಾಹೇಬರು ವೃದ್ಧಾಪ್ಯದಿಂದ ಮರಣ
ಪಟ್ಟರು. ಇವರು ವಿದ್ಯಾಖಾತ್ರೆಯಲ್ಲಿ ಕದೀಮ ನೌಕರ
ರು. ಪುಣೆಯಲ್ಲಿ ಪೂರ್ವದ ಕಾಲೇಜವೂ, ಸಂಸ್ಕೃತ
ಶಾಸ್ತ್ರಗಳ ಶಾಲೆಗಳೂ ಸ್ಥಾಪಿಸಲ್ಪಟ್ಟ ಬಳಿಕ, ಇವರೇ
ಮೊದಲಿಗೆ ಅವೆಲ್ಲವುಗಳ ಮುಖ್ಯಾಧಿಕಾರಿಗಳಾಗಿ ನೇಮಿ
ಸಲ್ಪಟ್ಟರು. ಆ ಕೆಲಸವನ್ನು ಇವರು ಬಹುಕಾಲ ಮಾಡಿ
ಬಿಳ್ಳೀ ಕೀರ್ತಿಯನ್ನು ಸಂಪಾದಿಸಿದರು. ಕೃಷ್ಣಶಾಸ್ತ್ರೀ
ಚಿಪಳೂಣಕರ ಮೊದಲಾದವರೆಷ್ಟೋ ಜನ ಪ್ರಸಿದ್ಧ ವಿ
ದ್ವಾಂಸರಿಗೆ ಕ್ಯಾಂಡೀಸಾಹೇಬರೇ ಇಂಗ್ಲಿಷ ಭಾಷೆಯನ್ನು
ಕಲಿಸಿದರು. ಮಹಾರಾಷ್ಟ್ರ ಭಾಷೆಯ ಜ್ಞಾನವು ಈ ಸಾ
ಹೇಬರಿಗಿದ್ದಷ್ಟು ಮಹಾರಾಷ್ಟ್ರದ ನಿವಾಸಿಗಳಲ್ಲಿ ಬಹು
ಸ್ವಲ್ಪ ಜನರಿಗೆ ಮಾತ್ರ ಇತ್ತೆಂದು ಹೇಳಬಹುದು.

ವಿದ್ಯಾಖಾತೆಯಲ್ಲಿ ನೌಕರರಾಗತಕ್ಕ ಯುರೋಪಿಯ
ರ್ ಜನರು ದೇಶಭಾಷೆಯಲ್ಲಿ ಪರೀಕ್ಷೆಯನ್ನು ಕೊಡುವ
ಬಗ್ಗೆ ಈ ಪೂರ್ವದಲ್ಲಿ ನಡೆಯುತ್ತಿದ್ದ ನಿಯಮಗಳನ್ನು

ಮುರಿದು, ಅವರು ಲಷ್ಕರೀ ಜನರಿಗೆ ನೇಮಿಸಿದ ಪರೀ
ಕ್ಷೆಯನ್ನೇ ಇನ್ನು ಮುಂದೆ ಕೊಡತಕ್ಕದ್ದೆಂದು ಸರಕಾರ
ವರು ತರಾಯಿಸಿದ್ದಾರೆ. ಇದರಿಂದ ಲಷ್ಕರದ ಜನರಿಗೆ
ವಿದ್ಯಾಖಾತೆಯಲ್ಲಿ ಕೇರಲಿಕ್ಕೆ ಮಾರ್ಗವು ಸುಲಭವಾಯಿತು.

ಮುಂಬಯಿಯ ಎಲ್ಫಿನಸ್ಟನ್ ಕಾಲೇಜಿನ ವಿದ್ಯಾರ್ಥಿ
ಗಳಾದ ಭೀಮಾಚಾರ್ಯ ಝಳಕಿ ಎಂಬವರು "ನ್ಯಾಯ
ಕೋಶ" ವೆಂಬದೊಂದು ಹೊಸ ಸಂಸ್ಕೃತ ಗ್ರಂಥವನ್ನು
ರಚಿಸಿದ್ದಾರೆ. ಆ ಪುಸ್ತಕವನ್ನು ಕುರಿತು ಬರ್ಲಿನ ಪಟ್ಟ
ಣ ಯುನಿವರ್ಸಿಟಿಯಲ್ಲಿ ಪ್ರೊಫೇಸರರಾಗಿದ್ದ ವೆಬರ್ ಎಂ
ಬ ಘನ ವಿದ್ವಾಂಸರು ಬಹು ಸರಸ್ವಾದ ಅಭಿಪ್ರಾಯವನ್ನು
ಬರೆದಿದ್ದಾರೆ. ಅವರು ಬರೆದದ್ದೇನೆಂದರೆ—"ಈ ಪುಸ್ತಕ
ದ ಅತ್ಯುತ್ತಮವಾದ ಯೋಗ್ಯತೆಯುಳ್ಳದ್ದು, ವೇಲಾದ
ಸಾಹಸಕ್ಕೆ ಮಾತ್ರ ಸಾಧ್ಯವಾಗತಕ್ಕಂಥಾದು; ಇದರಿಂದ
ನ್ಯಾಯಶಾಸ್ತ್ರದಲ್ಲಿ ಗ್ರಂಥಕರ್ತರ ಸ್ವೋರ್ಜ್ಞಾನವು ಸರ
ವಸ್ವಾಗಿ ವ್ಯಕ್ತವಾಗುತ್ತದೆ," ಇತ್ಯಾದಿ.

ಬ್ರಿಟಿಷ ಇಂಡಿಯದೊಳಗಿನ ವಿದ್ಯಾಖಾತೆಗಳಲ್ಲಿದ್ದ ಅ
ಧಿಕಾರಿಗಳ ಪಟ್ಟಿಯು ಬಳಗಡೆಯಲ್ಲಿ ಪ್ರಸಿದ್ಧವಾಗಿದೆ.
ಅದರಿಂದ ತಿಳಿಯುವದೇನೆಂದರೆ—

ಇಲಾಖೆಗಳ ಡಾಯರೆಕ್ಟರರು ೫೫ ಜನರುಂಟು. ಅವ
ರ ವಿವರವು—

೧ ಬಂಗಾಲದ ಡಾಯರೆಕ್ಟರರ ಸಂಬಳ ಮೊದಲು
೬000; ಮುಂದೆ ೧೦ ವರ್ಷಗಳಲಿ ೬೫00 ರೂ. ವ

ಕೆಗ ಏರುವದು.

೨ ಮುಂಬಯಿಯ ಡಾಯರೆಕ್ಟರರ ಸಂಬಳ ಮೇಲಿ
ನಂತೆ.

೩ ಮುಖ್ರಾಸದ ಡಾಯರೆಕ್ಟರರ ಸಂಬಳ ಮೊದಲ
೭೦೦೦; ಮುಂದೆ ೨೭೫೦ ರೂ. ವರೆಗೆ ಏರುವದು.

೪ ವಾಯವ್ಯ ಇಲಾಖೆಯ ಡಾಯರೆಕ್ಟರರ ಸಂ
ಳ ಮೊದಲು ೫೫೦೦; ಮುಂದೆ ೭೦೦೦ ರೂ. ವರೆ
ಏರುವದು.

೫ ಪಂಜಾಬದ ಡಾಯರೆಕ್ಟರರ ಸಂಬಳ ಮೇಲಿನಂತೆ

ಇವರಲ್ಲದೆ ಉಳಿದ ಮೇಲ್ತರದ ಅಧಿಕಾರಿಗಳಲ್ಲಿ ೪
ವರ್ಗಗಳು ಮಾಡಲ್ಪಟ್ಟಿವೆ. ಅವುಗಳ ವಿವರವು—

ಮೊನೇ ವರ್ಗದಲ್ಲಿ ೯ ಜನರುಂಟು. ಇವರ ಸಂಬಳವು
ಮೊದಲು ೭೭೫೦; ಮುಂದೆ ೫ ವರ್ಷಗಳಲ್ಲಿ ೫೫೦೦
ರೂ. ವರೆಗೆ ಏರುವದು.

೨ನೇ ವರ್ಗದಲ್ಲಿ ೧೯ ಜನರುಂಟು. ಇವರ ಸಂಬ
ಳವು ಮೊದಲು ೫೦೦೦; ಮುಂದೆ ೫ ವರ್ಷಗಳಲ್ಲಿ
೭೭೫೦ ರೂ. ವರೆಗೆ ಏರುವದು.

೩ನೇ ವರ್ಗದಲ್ಲಿ ೫೫ ಜನರುಂಟು. ಇವರ ಸಂಬ
ಳವು ಮೊದಲು ೨೫೫೦; ಮುಂದೆ ೫ ವರ್ಷಗಳಲ್ಲಿ ೫೦೦೦
ರೂ. ವರೆಗೆ ಏರುವದು.

೪ನೇ ವರ್ಗದಲ್ಲಿ ೪೦ ಜನರುಂಟು. ಇವರ ಸಂಬಳ
ವು ಮೊದಲು ೫೦೦; ಮುಂದೆ ೫ ವರ್ಷಗಳಲ್ಲಿ ೭೫೦
ರೂ. ವರೆಗೆ ಏರುವದು.

ಇದರೆ ಪಂಜಾಬ ಪ್ರಾಂತದ ಡಾಯರೆಕ್ಟರರಾದ ಮೆ.

ನಾರಾಯಣಭಾಯಿ ದಾಂಡೇಕರ ಎಂಬ ನೇಟೀವ ಗೃಹಸ್ಥರು ಇನೇ ವರ್ಗದಲ್ಲಿ ಎಣಿಸಲ್ಪಡುತ್ತಿದ್ದಾರ್ಗ್ಯೂ ಅವರಿಗೆ ೫೦೦೦ ರೂ. ಮಾತ್ರ ಕಾಯುವರ್ ಸಂಬಳ ಉಂಟು.

METHOD OF LEARNING FOREIGN LANGUAGES (Continued)

ಪರ ಭಾಷೆಗಳನ್ನು ಕಲಿಯುವ ಪದ್ಧತಿಯು.

———000———

(ಮುಂದಕ್ಕೆ ನೋಡಿರಿ.)

ವ್ಯಾಕರಣಗಳು ಮೊದಲು ಬರೆಯಲ್ಪಟ್ಟ ಬಳಿಕ ಅ ಪ್ರಗಳಲ್ಲಿ ತಮಗಿರುವ ಪ್ರೀತಿಯು ಮೂಲಕವಾಗಿ ಶೀಕ್ಷಕರು ಅವುಗಳನ್ನು ತಪ್ಪು ವಿದ್ಯಾರ್ಥಿಗಳಿಗೆ ಕಲಿಸ ತೊಡಗಿದರು. ಅದರೆ ವ್ಯಾಕರಣಗಳು ಹುಟ್ಟುವ ಪೂರ್ವದಲ್ಲಿ ಬಹು ಕಾಲದಿಂದ ಭಾಷೆಗಳು ನಡೆಯುತ್ತ ಬಂದವು. ಸಿಸರೊ ವರ್ಜಿಲ್, ಶೆಕ್ಸಪೀಯರ, ಮೊದಲಾದ ಪರದೇಶಗಳ ಗ್ರಂಥ ಕರ್ತರೂ, ವಾಲ್ಮೀಕಿ, ವೇದವ್ಯಾಸ, ಮುಂತಾದ ಈ ದೇಶದ ಗ್ರಂಥಕರ್ತರೂ ತಮ್ಮ ತಮ್ಮ ಹೆಸರಾದ ಗ್ರಂಥಗಳನ್ನು ಬರೆದಾಗ ಅವರವರ ಭಾಷೆಗಳಿಗೆ ವ್ಯಾಕರಣಗಳಿದ್ದಿಲ್ಲ. ಕೇವಲ ವ್ಯಾಕರಣವನ್ನೇ ಕಲಿಯುವದರಿಂದ ಯಾ ಭಾಷೆಯೂ ಅವಗತವಾಗದು. ಭಾಷೆಯನ್ನು ಪೂರ್ಣವಾಗಿ ಕಲಿತುಕೊಂಡ ಬಳಿಕ ಅದರ ವ್ಯಾಕರಣವನ್ನು ಕಲಿಯುವದು ವಿಹೀತವೆಂದು ಒಬ್ಬ ವಿದ್ವಾಂಸನು ಹೇಳಿರುತ್ತಾನೆ.

ಭಾಷೆಯು ಗಡಬಾದದ್ದೆಂದು ಅಯುಕ್ತದಂತೆ ಇರು

ತ್ತದೆ. ಅದನ್ನು ಪರರು ಪ್ರಯೋಗಿಸುವ ರೀತಿಯನ್ನು ಪ್ರ ಲಕ್ಷ್ಯಪೂರ್ವಕವಾಗಿ ನೋಡಿ ತಿಳಿದುಕೊಂಡ ಪ್ರೌಢ. ನಾವು ಸ್ವತಃ ಕೆಲಸಕ್ಕೆ ಬರುವಂತೆ ಅದನ್ನು ಪ್ರಯೋಗ ಲಾರೆವು. ಇದರಿಂದ ಪರಭಾಷೆಯನ್ನು ಕಲಿಯುವ ಸ್ವಾಭಾ ವಿಕ ಪದ್ಧತಿಯು ವ್ಯಕ್ತವಾಗುವದೇನಂದರೆ, ನಾವು ಕ ಯತಕ್ಕ ಭಾಷೆಯಲ್ಲಿ ಮಾತನಾಡಲಿಕ್ಕೆ ಯತ್ನಿಸುವ ಪ ರ್ಯಂತದಲ್ಲಿ ಆ ಭಾಷೆಯನ್ನು ಚನ್ನಾಗಿ ತಿಳಿದುಕೊಂಡು ಅ ರಲ್ಲಿಯೇ ನಮ್ಮ ಮನಸ್ಸಿನ ವಿಚಾರಗಳನ್ನು ನಡಿಸಲಿಕ್ಕೆ ಕಲಿಯಬೇಕು. ಇದೇ ಪರಭಾಷೆಯನ್ನು ಕಲಿಯುವ ರ ಹುಟ್ಟು. ಭಾಷೆಯನ್ನು ತಿಳಿದುಕೊಳ್ಳೋಣವೆಂದರೆ, ಅದನ್ನು ಕೇಳಿಯೂ ಓದಿಯೂ ಅದರ ಅಭಿಪ್ರಾಯವನ್ನು ಗ್ರಹಿಸೋಣವು; ಮತ್ತು ಭಾಷೆಯನ್ನು ಪ್ರಯೋಗಿಸೋಣವೆಂದರೆ ಅದರಲ್ಲಿ ಸ್ವತಃ ಮಾತನಾಡುವದೂ ಬರೆಯುವದೂ ಎಂದ ತಿಳಿಯ ತಕ್ಕದ್ದು. ಆ ಕಾರಣ ಈ ನಾಲ್ಕು ವಿಧಗಳಲ್ಲಿ ಪ ರಿಂಗತನಾದವನೇ ಭಾಷೆಯಲ್ಲಿ ಪಾರಂಗತನೆನಿಸಿ ಕೊಳ್ಳು ನು. ಅಂದರೆ ಮೊದಲು ಕಿವಿಗಳನ್ನು, ತರುವಾಯ ಕಣ್ಣು ಳನ್ನು, ಬಳಿಕ ನಾಲಿಗೆಯನ್ನು, ಕಡೆಯಲ್ಲಿ ಕೈಗಳನ್ನು ಭಾ ಷೆಯ ಅಭ್ಯಾಸದಲ್ಲಿ ತೊಡಗಿಸುವದೇ ಸ್ವಾಭಾವಿಕ ಕ್ರಮ ವಾಗಿರುತ್ತದೆ. ಈ ಕ್ರಮವಾಗಿ ಕಲಿತಂಥ ಭಾಷೆಯು ಪೂ ರ್ಣವಾಗಿ ಅವಗತವಾಗದೆ ಇರದು. ಈ ಪದ್ಧತಿಯು ಸ್ವಾ ಭಾವಿಕ ಕ್ರಮವುಳ್ಳದ್ದೆಂಬದರ ಕಾರಣವೇನಂದರೆ, ಇದರ ಲ್ಲಿ ಸುಲಭವಾದ ಅಭ್ಯಾಸವು ಮೊದಲಿಗೆ ಆರಂಭವಾಗಿ, ತ ಟ್ಟ ಕಡೆಯಲ್ಲ ಎಲ್ಲಕ್ಕಿಂತ ಕಠಿನವಾದ ಅಭ್ಯಾಸವು ಬರುತ್ತದೆ. ಕೇಳುವಾಗಲೂ ಓದುವಾಗಲೂ ನಮಗೆ ಭಾಷೆಯ ಜ್ಞಾ

ನವು ಅಪೂರ್ಣವಿದ್ದರೂ ಸಾಗುತ್ತದೆ. ಕೆಲವು ಶಬ್ದಗಳು ನಮಗೆ ಗೊತ್ತಿಲ್ಲದಿದ್ದರೂ ವಾಕ್ಯಾರ್ಥದ ಅನುಸಂಧಾನದಿಂದ ಅವುಗಳ ಅಭಿಪ್ರಾಯಗಳು ಸಾಧಾರಣವಾಗಿ ತಿಳಿಯುತ್ತವೆ. ವಿಭಕ್ತಿ ರೂಪಗಳೂ ಕ್ರಿಯಾಪದದ ರೂಪಗಳೂ ನಮಗೆ ಸರಿಯಾಗಿ ಗೊತ್ತಿಲ್ಲದಿದ್ದರೂ ವಾಕ್ಯಾರ್ಥ ತಿಳಿಯಲಿಕ್ಕೆ ಬಹುತರ ಅಡ್ಡಿಯಾಗುವದಿಲ್ಲ. ಆದರೆ ಮಾತಾಡಲಿಕ್ಕೂ ಬರೆಯಲಿಕ್ಕೂ ಬರಬೇಕಾದರೆ ಶಬ್ದಗಳ ನಿಜವಾದ ಅರ್ಥಗಳನ್ನು ನಾವು ಪೂರ್ವದಲ್ಲಿ ಚನ್ನಾಗಿ ಕಲಿತುಕೊಂಡಿರಲಿಕ್ಕೆ ಬೇಕು. ಇವೇ ಮೇರಿಗೆ ವಿಭಕ್ತಿರೂಪಗಳನ್ನೂ ಕ್ರಿಯಾ ರೂಪಗಳನ್ನೂ ಗಾಪೆ ಮೊದಲಾದ ಭಾಷಾರೂಢಿಗಳನ್ನೂ ಮೊದಲು ಚನ್ನಾಗಿ ಕಲಿತುಕೊಳ್ಳದೆ ನಾವು ಅವುಗಳನ್ನು ನಮ್ಮ ಮಾತುಗಳಲ್ಲಿಯೂ ಬರಹದಲ್ಲಿ ಪ್ರಯೋಗಿಸಲಾರೆವು. ಕೇಳಿ, ಓದಿ, ಭಾಷೆಯನ್ನು ತಿಳಿಸುಕೊಳ್ಳಲಿಕ್ಕೆ ಬಹಳ ವೇಳೆ ಬೇಕು. ಆದರೆ ಮಾತಾಡಲಿಕ್ಕೂ ಬರೆಯಲಿಕ್ಕೂ ಕಲಿಯಬೇಕಾದರೆ ಬಹಳ ಶ್ರಮ ಪಡಬೇಕಾಗುತ್ತದೆ. ಈಗ ವ್ಯವಹಾರದಲ್ಲಿ ಇಲ್ಲದಂಥ ಸಂಸ್ಕೃತ ಮುಂತಾದ ಪ್ರಾಚೀನ ಭಾಷೆಗಳಲ್ಲಿ ಮಾತನಾಡಲಿಕ್ಕೂ ಬರೆಯಲಿಕ್ಕೂ ಬಹುತರ ಯಾರೂ ಬಯಸುತ್ತಿರುವದಿಲ್ಲ. ಆದದರಿಂದಭಾಷೆಯಅಭ್ಯಾಸದಲ್ಲಿ ಬಹು ಇಷ್ಟವಾದ ಭಾಗವೇನಿರರ್ಥಕವಾಗುವ ಕಾರಣ,ಆ ಪ್ರಾಚೀನ ಭಾಷೆಗಳ ಅಭ್ಯಾಸವನ್ನು ಬಹು ಸ್ವಲ್ಪ ಶ್ರಮೆಯಿಂದ ಈ ಕಡೆ ಮಟ್ಟಿಗೆ ಸಾಧಿಸಿಕೊಳ್ಳಬಹುದು.

(ಮು. ಸಾ.)

TRIGNOMETRY.

ತ್ರಿಕೋಣ ಮಿತಿಯು.

———000———

ತ್ರಿಕೋಣ ಮಿತಿಯು ಗಣಿತವು ಭೂಮಿತಿಯು ಗಣಿತದಿಂದ ಬೇರೆ ಪ್ರಕಾರದ್ದು. ಅವೆರಡೂ ರೇಖೆ ಕೋನಗಳ ವಿಷಯವಾದ ಗಣಿತವನ್ನೇ ಹೇಳುತ್ತಿದ್ದಾಗ್ಯೂ, ಭೂಮಿತಿಯಲ್ಲಿ ಅಳತಿಯು ವಿಷಯವಾಗಿ ವಿವರಣವಿರುವದಿಲ್ಲ; ತ್ರಿಕೋಣಮಿತಿಯಲ್ಲಿ ರೇಖೆ ಕೋನಗಳ ವಿಷಯವಾಗಿ ವಿವರವು ಕೊಡಲ್ಪಟ್ಟಿರುತ್ತದೆ. ಭೂಮಿತಿಗಣಿತದ ಮೊದಲನೇ ಪುಸ್ತಕದ ನಾಲ್ಕನೇ ಸಿದ್ಧಾಂತದಲ್ಲಿ, ಎರಡು ತ್ರಿಕೋನಗಳಲ್ಲಿ ಎರಡು ಬಾಹುಗಳೂ ಅವುಗಳ ಮಧ್ಯ ಕೋನವೂ ಪರಸ್ಪರ ಸಮವಿದ್ದರೆ, ಅವೆರಡು ತ್ರಿಕೋನಗಳು ಸರ್ವಾಂಶ ಸಮವೆಂದು ನಿರೂಪಣ ಮಾಡಿದೆ. ಆವರೆ ಬಾಹುಗಳ ಅಳತಿ ಇಂತಿಷ್ಟೆಂಬದಾಗಲಿ ಕೋನಗಳ ಅಳತಿ ಇಂತಿಷ್ಟೆಂಬದಾಗಲಿ ಈ ಗಣಿತದಲ್ಲಿ ಪ್ರೊರಡುವದಿಲ್ಲ. ಆದರೆ ತ್ರಿಕೋನಮಿತಿಯು ಗಣಿತದಲ್ಲಿ ಎರಡು ಬಾಹುಗಳ ಅಳತಿಗಳನ್ನು, ಅವುಗಳ ಮಧ್ಯಕೋನದ ಪರಿಮಾಣವನ್ನೂ ಕೊಟ್ಟಲ್ಲಿ ಆ ತ್ರಿಕೋನದ ಉಳಿದ ಮೂರು ಅವಯವಗಳನ್ನು ತೆಗೆಯುವದಕ್ಕೆ ಸಾಧನವುಂಟು. ತ್ರಿಕೋನಮಿತಿ ಎಂಬ ಹೆಸರು ಅದಕ್ಕೆ ಬರುವ ಕಾರಣವೇನೆಂದರೆ, ಅದು ತ್ರಿಕೋನದ ಅವಯವಗಳನ್ನು ಗಣಿತದಿಂದ ನಿರ್ಣಯಿಸುತ್ತದೆ.

ಈ ಗಣಿತದ ವಿಷಯವನ್ನು ಆರಂಭಿಸುವ ಪೂರ್ವದಲ್ಲಿ ಕೋನಗಳನ್ನು ಹ್ಯಾಗೆ ಅಳಿಯಬೇಕೆಂಬದಕ್ಕಾಗಿ ಇ

ಲ್ಲಿ ತಿಳಿಸಿಕೊಡುವದು ತಕ್ಕದ್ದಾಗಿದೆ. ಆಇ, ಹಇ ಇವೆರಡು ರೇಪೆಗಳು ಒಂದನ್ನೊಂದು ಕಾಟಿಕೋನ ಮಾಡಿ ಛೇದಿಸಿ, ಇ ಸ್ಥಳದಲ್ಲಿ ನಾಲ್ಕು ಕಾಟಿಕೋನಗಳನ್ನು ಮಾಡುತ್ತವೆ, ಇ ಬಿಂದುವನ್ನು ಕೇಂದ್ರವೆಂದು ಕಲ್ಪಿಸಿ, ಇಕ ತ್ರಿಜ್ಯದಿಂದ ಒಂದು ಆಹಇಕ ವರ್ತುಲವನ್ನು ತೆಗಿ. ಆ ವರ್ತುಲದ ಪ್ರತ್ಯೇಕ ಪಾದವು ಒಂದು ಕಾಟಿಕೋನವನ್ನು ಅಳೆಯುತ್ತದೆ. ಈ ವರ್ತುಲ ಪಾದವನ್ನು ೯೦ ಅಂಕಗಳಲ್ಲಿ ವಿಭಾಗಿಸಲು, ಒಂದು ಅಂಕದ ಎದುರಿನ ಕೋನವು ಒಂದು ಅಂಕದ ಕೋನ ವೆಂದೆನಿಸಿಕೊಳ್ಳುವದು. ಒಂದು ಅಂಕದೊಳಗೆ ೬೦ ಕಳೆಗಳೆಂಬ ಭಾಗಗಳೂ, ಒಂದು ಕಳೆಯಲ್ಲಿ ೬೦ ವಿಕಳೆಗಳೆಂಬ ಭಾಗಗಳೂ ಮಾಡಲ್ಪಟ್ಟವೆ. ಈ ಪ್ರಕಾರ ಯಾವದೊಂದು ಕೋನವನ್ನು ಮಾಡುವಂಥ ಎರಡು ರೇಪೆಗಳ ನಡುವೆ ಬರುವಂಥ ವರ್ತುಲ ಪರಿಧಿಯ ಭಾಗವು ಆ ಕೋನವ ಅಳತೆಯಾಗಿರುತ್ತದೆ. ಉದಾ. ೨೦ ಅಂಕಗಳ, ೨೫ ಅಂಕಗಳ, ೩೦ ಅಂಕ ೨೦ ಕಳೆ ೨೫ ವಿಕಳೆಗಳ ಕೋನಗಳೆಂದರೆ, ಅವುಗಳ ಎದುರಿಗೆ ಅಷ್ಟಷ್ಟು ವರ್ತುಲ ಪರಿಧಿ ಭಾಗಗಳು ಬಿರುತ್ತವೆಂದು ತಿಳಿಯು ತಕ್ಕದ್ದು. ೦ , / , // , ಇವು ಕ್ರಮವಾಗಿ ಅಂಕ, ಕಳೆ ವಿಕಳೆಗಳ ಚಿಹ್ನಗಳು. ಅಂಕೆಯ ತಲೆಯಮೇಲೆ ಸೂಚಿಸಿ ಇಟ್ಟಿದ್ದರೆ, ಅದು ಅಂಕದ ಅಂಕೆಯೆಂತಲೂ, ಒಂದೇ ಉಪ್ಪಗರೆ ಇಟ್ಟಿದ್ದರೆ, ಅದು ಕಳೆಗಳ ಅಂ



ಕೆಯಿಂತಲೂ, ಎರಡು ಉದ್ದ ಗರೆಗಳಿದ್ದರೆ, ವಿಕಳಿಗಳ ಅಂಕಿ ಎತಲೂ ತಿಳಿದುಕೊಳ್ಳಬೇಕು. ಉದಾ.—೫೪೦ ೪, ೨೦, ಹೀಗೆ ಬರಿದರೆ ಐವತ್ತು ನಾಲ್ಕು ಅಂಕ, ನಾಲ್ಕು ಕಳೆ, ಇಪ್ಪತ್ತು ವಿಕಳಿಗಳೆಂಬರ್ಥವು. (ಮು.ಸಾ.)

BHASHADARPANA.

ಭಾಷಾದರ್ಪಣ.

———000———

ಸಂಧಿ ಪ್ರಕರಣ

ಈ ಸಂಸ್ಕೃತದಲ್ಲಿಯಾಗಲಿ ಕನ್ನಡದಲ್ಲಿಯಾಗಲಿ ಒಂದು ಶಬ್ದಕ್ಕೆ ಮತ್ತೊಂದು ಶಬ್ದವು ಪರವಾದರೆ, ಮೊದಲಿನ ಶಬ್ದದ ಕಡೆಯ ವರ್ಣವೂ ಪರಶಬ್ದವಲಿದ ವರ್ಣವೂ ಕೂಡಿ ಒವ್ವೊಮ್ಮೆ ಒಂದೇ ವರ್ಣವಾಗುವದು; ಇಲ್ಲವೆ ಮೊದಲಿನದು ಬದಲಾಗಿ ಮುಂದಿನದು ಹಾಗೆಯೇ ಉಳಿಯುವದು; ಇಲ್ಲವೆ ಮುಂದಿನದು ಬದಲಾಗಿ ಮೊದಲಿನದು ಉಳಿಯುವದು. ಇದಕ್ಕೆ ಸಂಧಿಯನ್ನುವರು. ಕೂಡುವ ವರ್ಣಗಳು ಸ್ವರಗಳಿದ್ದರೆ ಸ್ವರ ಸಂಧಿ ಎಂತಾಗಲಿ ಅಚ್ ಸಂಧಿ ಎಂತಾಗಲಿ ಹೆಸರು. ಅವುಗಳಲ್ಲಿ ಮೊದಲಿನ ವರ್ಣವಾಗಲಿ ಇಲ್ಲವೆ ಎರಡೂ ವರ್ಣಗಳಾಗಲಿ ವೆಂಜನಗಳಿದ್ದರೆ ವೆಂಜನ ಸಂಧಿ ಎಂತಾಗಲಿ ಹಲ್‌ಸಂಧಿ ಎಂತಾಗಲಿ ಹೆಸರು.

ಈ ಸಂಧಿಯಲ್ಲಿ ಲೋಪ, ಆಗಮ, ಆದೇಶಗಳೆಂಬ ಮೂರು ಸಾಧನಗಳು. ಈ ಸಂಧಿ ಸಾಧನಗಳ ನಿಯಮಗಳನ್ನೂ ಉದಾಹರಣೆಗಳನ್ನೂ, ಕೆಳಗೆ ವಿವರಿಸುತ್ತೇನೆ.

ಲೋಪವೆಂದರೆ— ಒಂದು ವರ್ಣವು ಲೋಪವಾಗು

ವದು. ಉದಾ: ತಂಪು+ಗಾಳಿ=ತಂಗಾಳಿ, ತಂಪು ಶಬ್ದದ ಕಡೆಯ 'ಪು' ವರ್ಣವು ಲೋಪ ವಾಯಿತು; ಅವನು+ಇಲ್ಲ=ಅವನಿಲ್ಲ, ಇದರಲ್ಲಿ ಅವನು ಶಬ್ದದ ಕಡೆ 'ಉ' ಲೋಪವಾಯಿತು.

ಆಗಮವೆಂದರೆ— ಎರಡು ವರ್ಣಗಳ ನಡುವೆ ಬೇರೊಂದುಪ್ರೊಸ ವರ್ಣವು ಬರುವದು. ಉದಾ: ಕೆಲಸ+ಆಯಿತು=ಕೆಲಸವಾಯಿತು, ಇದರಲ್ಲಿ 'ವ್' ಆಗಮ ಬಂತು. ಮನೆ+ಒಳಗೆ=ಮನೆಯೊಳಗೆ, ಇದರಲ್ಲಿ 'ಯ್' ಆಗಮ ಬಂತು.

ಆದೇಶವೆಂದರೆ— ಒಂದು ವರ್ಣಕ್ಕೆ ಬದಲಾಗಿ ಬೇರೊಂದು ಬರುವದು. ಉದಾ: ಮರ+ಕಾಲು = ಮರಗಾಲು, ಇದರಲ್ಲಿ 'ಕ' ಕಾರಕ್ಕೆ 'ಗ' ಕಾರಾದೇಶವಾಯಿತು; ಕುರಿ+ತಲೆ=ಕುರಿದಲೆ, ಇದರಲ್ಲಿ 'ತ' ಕಾರಕ್ಕೆ 'ದ'ಕಾರಾದೇಶವಾಯಿತು; ಒಡಂ+ಪಡು=ಒಡಂಬಡು, ಇದರಲ್ಲಿ 'ಪ' ಕಾರಕ್ಕೆ 'ಬ' ಕಾರಾದೇಶವಾಯಿತು.

೨೦ ಈ ವ್ಯಾಕರಣದಲ್ಲಿ ಸಂಸ್ಕೃತಸಂಧಿ, ಕನ್ನಡಸಂಧಿ ಎಂಬ ಎರಡು ಪ್ರಕಾರಗಳು. ಒಂದರ ನಿಯಮವು ಒಂದಕ್ಕೆ ಸಂಬಂಧವಿಲ್ಲ. ಇವೆರಡೂ ಪ್ರಕಾರಗಳಲ್ಲಿ ಸ್ವರಸಂಧಿ, ವ್ಯಂಜನಸಂಧಿ ಎಂಬ ಎರಡೆರಡು ಭೇದಗಳುಂಟು.

ಸಂಸ್ಕೃತ ಸ್ವರಸಂಧಿ

೨೧ ಸಂಸ್ಕೃತ ಸ್ವರಸಂಧಿಯಲ್ಲಿ ಸವರ್ಣದೀರ್ಘ, ಯಣ್, ಗುಣ, ವೃದ್ಧಿ ಎಂಬ ೪ ಪ್ರಕಾರಗಳು.

೨೨ ಸವರ್ಣದೀರ್ಘವೆಂದರೆ— ಯಾವದಾದರೊಂದು ಸ್ವರದ ಮುಂದೆ ಅದರ ಸವರ್ಣವು ಬಂದರೆ, ಅವೆ

ಕಡೂ ಕೂಡಿ ದೀರ್ಘಸ್ವರವಾಗುತ್ತವೆ.

ಉದಾಹರಣೆಗಳು.

ಅ+ಅ, ಅ+ಆ, ಆ+ಅ, ಆ+ಆ	'ಆ' ಆದೇ ಶ	ನರ+ಅಧಿಪ=ನರಾಧಿಪ.
		ಪರಮ+ಅಕ್ಷರ್ಯ=ಪರಮಾಕ್ಷರ್ಯ
		ವಿದ್ಯಾ+ಅಭ್ಯಾಸ=ವಿದ್ಯಾಭ್ಯಾಸ.
		ಕವಿತಾ+ಆದಿ=ಕವಿತಾದಿ.
ಇ+ಇ, ಇ+ಈ, ಈ+ಇ, ಈ+ಈ	'ಈ' ಆದೇ ಶ	ಅತಿ+ಇಚ್ಛೆ=ಅತೀಚ್ಛೆ.
		ಗಿರಿ+ಈಶ್ವರ=ಗಿರೀಶ್ವರ.
		ಮಹೀ+ಇಂದ್ರ=ಮಹೀಂದ್ರ.
		ಲಕ್ಷ್ಮೀ+ಈಶ=ಲಕ್ಷ್ಮೀಶ.
ಉ+ಉ, ಉ+ಊ, ಊ+ಉ, ಊ+ಊ	'ಊ' ಆದೇ ಶ	ಗುರು+ಉಪದೇಶ=ಗುರೂಪದೇಶ.
		ಭಾನು+ಉದಯ=ಭಾನೂದಯ.
		ತನು+ಊರು=ತನೂರು (ಸೂಕ್ಷ್ಮ ತೊಡೆ). ವಧೂ+ಉತ್ತರ=ವಧೂತ್ತರ.
		ಭೂ+ಊರ್ಜಿತ=ಭೂರ್ಜಿತ (ಭೂಮಿಯಲ್ಲಿ ಹೆಸರಾದವ)
		ಸಯಂಭೂ+ಉಪನಿಷತ್=ಸಯಂಭೂಪನಿಷತ್.
ಋ+ಋ	'ಋ' ಆದೇ ಶ	ಹೋತೃ+ಋಷಿ=ಹೋತೃಷಿ (ಯಜ್ಞದಋಷಿ)
		ಪಿತೃ+ಋಣ=ಪಿತೃಣ (ತಂದೆಯ ಸಾಲ)
		ಜಾಮಾತೃ+ಋತಂ=ಜಾಮಾತೃತಂ (ಅಳಯನ ಸತ್ಯ)

'ಷ' ಕಾರದ ಉದಾಹರಣೆಗಳು ಪ್ರಚಾರದಲ್ಲಿ ಇಲ್ಲ.

೨೪ ಯಣ್‌ಸಂಧಿಯಂದರೆ— 'ಇ, ಉ, ಋ' ಈ ಹ್ರಸ್ವಗಳಿಗಾಗಲಿ ಇವುಗಳ ದೀರ್ಘಗಳಿಗಾಗಲಿ ಅಸವರ್ಣಗಳು ಪರವಾದರೆ, ಕ್ರಮದಿಂದ ಇವುಗಳ ಅಂತಸ್ಥವರ್ಣಳು ಬರುವವು; ಅಂದರೆ 'ಇ' ಕಾರಕ್ಕೆ 'ಯ್'; 'ಉ' ಕಾರಕ್ಕೆ 'ವ್'; 'ಋ' ಕಾರಕ್ಕೆ 'ರ್'; 'ಌ' ಕಾರಕ್ಕೆ 'ಲ್' ಆದೇಶ ಬರುತ್ತವೆ.

ಉದಾಹರಣೆ

ಇ+ಅ	ಯ್ ಆದೇಶ	ಪ್ರತಿ+ಅಕ್ಷ=ಪ್ರತ್ಯಕ್ಷ.
ಇ+ಆ		ಅತಿ+ಆದಿ=ಇತ್ಯಾದಿ.
ಇ+ಉ		ಪ್ರತಿ+ಉತ್ತರ=ಪ್ರತ್ಯುತ್ತರ.
ಇ+ಊ		ಅತಿ+ಊರ್ಧ್ವ=ಅತ್ಯೂರ್ಧ್ವ (ಮೇಲ್ಬಾಗ). ಜಾತಿ+ಏಕ=ಜಾತ್ಯೇಕ.
ಇ+ಋ		ಅತಿ+ಋಷ್ಯ=ಅತ್ಯೃಷ್ಯ.
ಇ+ಐ		ದಧಿ+ಓದನ=ದಧ್ಯೋದನ (ಮೊಸರು ಅನ್ನ). ಅಕ್ಷಿ+ಔಷಧ=ಅಕ್ಷ್ಯೌಷಧ.
ಇ+ಓ		
ಇ+ಔ		
ಇ+ಅ		ಪದ್ಮಿನೀ+ಅಲಂಕಾರ=ಪದ್ಮಿನ್ಯಲಂಕಾರ. ಕರಿಣೀ+ಆಕೃತಿ=ಕರಿಣ್ಯಾಕೃತಿ. ವಾಪೀ+ಉದಕ=ವಾಪ್ಯುದಕ (ಭಾವೀನೀರು). ನದೀ+ಊರ್ಮಿ=ನದ್ಯೂರ್ಮಿ (ಹೊಳೆಯ ತೆರೆ) ಸುಧೀ+ಓಘ=ಸುಧ್ಯೋಘ (ಪಂಡಿತಸಮೂಹ)
ಇ+ಆ		
ಇ+ಉ		
ಇ+ಊ		
ಇ+ಓ		

ಉ+ಅ ಉ+ಆ ಉ+ಇ ಉ+ಈ ಉ+ಏ ಉ+ಐ ಉ+ಓ ಉ+ಔ	'ವ್' ಆದೇ ಶ	ಭಾನು+ಅಸ್ತ=ಭಾನ್ವಸ್ತ. ಪಶು+ಆದಿ=ಪಶ್ವಾದಿ. ಗುರು+ಇಚ್ಛಾ=ಗುರ್ವಿಚ್ಛಾ. ಧೇನು+ಈಡಾ=ಧೇನ್ವೀಡಾ (ಆ ಳ ಇಚ್ಛೆ) ತನು+ಏಣ=ತನ್ವೇ (ಸೂಕ್ಷ್ಮ ಎರಳೆ) ಮೇರು+ಐರ ಪತ=ಮೇರ್ವೈರಾವತ. ತರು+ಓ =ತರ್ವೋಷ (ಗಿಡಸವೂಹ) ಲಘು+ಔದುಂಬರ= ಲಘ್ವೌದುಂಬ (ಸಣ್ಣ ಅತ್ತೀಮರ)
ಋ+ಅ ಋ+ಆ ಋ+ಇ ಋ+ಉ ಋ+ಔ	'ರ್' ಆದೇ ಶ	ಮಾತೃ+ಅಂತಃಕರಣ = ಮಾತ್ರ ತಃಕರಣ. ಪಿತೃ+ಆನಂದ=ಪಿತ್ರಾ ನಂದ. ಜಾಮಾತೃ+ಇಚ್ಛಾ = ಜ ಮಾತ್ರಿಚ್ಛಾ. ದಾತೃ+ಉತ್ಸವ=ದ ತ್ರುತ್ಸವ. ಭ್ರಾತೃ+ಔರಸ=ಭ್ರಾ ತ್ರೌರಸ (ಅಣ್ಣನಮಗ)

(ಮುಂದೆ ಸಾಗುವದು)

ಗಂಗಾಧರಮಡಿವಾಳೇಶ್ವರ ಅ. ತಾನ್ನಲೇಟಿರ

NOTICES.

ನೋಟೀಸುಗಳು.

——000——

ನಂಬರು. ೬೬೪

ಕಾನಡಾಜಿಲ್ಲೆ ಯೊಳಗಿನ ಯಾವತ್ತು ಸ್ಕೂಲಮಾ
ರರಿಗೆ–

ಡಿ॥ ಎ॥ ಇನಸ್ಪೆಕ್ಟರ ಜಿಲ್ಲಾ ಕಾನಡಾ ಅವರಕಡಿಯಿಂ
ತಿಳಿಯಪಡಿಸುವದೇನಂದರೆ–

ಸೂಪಾತ್ರಾಲೂಕು ಕಸಬಾ ಜನಗೆ ಸ್ಕೂಲಮಾಸ್ತರರಾ
ದ್ದ ಕಲ್ಲಪ್ಪಾ ಯೋಗಪ್ಪಾ ಇವರು ಶಾಲೆ ಸುಧಾರಿಸು
ವಿಷಯದಲ್ಲಿ ಕಿಂಚಿತ್ತಾದರೂ ಲಕ್ಷ ಕೊಡದೆ ಗ್ರಾಮು
ರ ಖಾಸಗೀ ತಂಟೆಗಳಲ್ಲಿ ಪ್ರವೇಶ ಮಾಡಿ ಅಪ್ರಿಯು
ದದ್ದಲ್ಲದೆ ಪದೇ ಪದೇ ತಂವು ಗ್ರಾಮು ಬಿಟ್ಟು ಖಾಸ
ೀ ಕೆಲಸದಮೇಲೆ ತಿರುಗುತ್ತಾ ಇದ್ದು ಶಾಲೆ ತೀರ ಕೆ
ಸಿ ಅವಮಾನು ಬಂದುಮಾಡುವದು ಅವಶ್ಯ ಪಡಿಸಿದರು.
ಈ ಎಲ್ಲಾ ಅವರ ಅಪರಾಧಗಳಂನು ಮೇಹರಬಾನ್ ಎ॥
ನಸ್ಪೆಕ್ಟರ ಸಾಹೇಬು ಬಹಾದ್ದೂರವೆರಿಗೆ ಶ್ರುತಗೊಳಿಸ
ಲಿಗಿ ಅವರು ಸದರ ಮಾಸ್ತರರಿಗೆ ಒಂದು ತಿಂಗಳ ಪಗಾ
ರ ಜುರುಮಾನೆ ಮಾಡಬೇಕೆಂತಲೂ ದರಮಹಾ ಇ೨
ರೂಪಾಯಿ ಸಂಬಳದಿಂದ ೪ ರೂಪಾಯಿಯು ಕೆಲಸದಮೇ
ಲೆ ಅಸಿಸ್ಟಂಟು ಮಾಸ್ತರರಾಗಿ ನೇಮಿಸಬೇಕೆಂತಲೂ ಅಪ್ಪ
ಣೆ ಕೊಟ್ಟಿರುತ್ತಾರೆ. ಎಲ್ಲ ಮಾಸ್ತರರು ತಿಳಿದು ಜಾಗ್ರತೆ
ಯಿಂದ ವರ್ತಿಸತಕ್ಕದ್ದು. ತಾರೀಖು, ೧೫ನೇ ಮಾರ್ಚ

ಸನ್ ೧೮೮೭ ನೇ ಇಸ್ವಿ ಮುಕ್ಕಾಂ ಶಿರ್ಶಿ.

R. W. Bhanap.

ಡಿ॥ ಎ॥ ಇನಸ್ಪೆಕ್ಟರ ಜೆಲ್ಹಾ ಕಾನಡಾ.

ಪಗಾರವಗಿರಿಗಳು.

೧ ಕೃಷ್ಣಾಜಿ ಹರಿ ಮಾವ್ಲಳಂಗರ ಹೆಡ್ಡಮಾಸ್ತರ ಗ:
ಗ ಇವರನ್ನು ಅಷ್ಟೇ ಪಗಾರದಮೇಲೆ ನವಲಗುಂದ ಸ:
ಲಿಯಲ್ಲಿ ಅಶಿಷ್ಟಂಟ ಮಾಸ್ತರ ನೇಮಿಸಿರುತ್ತಾರೆ.

೨ ರಾಮಚಂದ್ರ ಧೊಂಡದೇವ ಕಶೇಳಕರ ಅಶಿಷ್ಟಂಟ
ಮಾಸ್ತರ ನವಲಗುಂದ ಇವರನ್ನು ಅಷ್ಟೇ ಪಗಾರದ ಮೇ
ಲೆ ಗರಗ ಸಾಲಿಯ ಹೆಡ್ಡಮಾಸ್ತರ ಕೆಲಸಕ್ಕೆ ನೇಮಿಸಿತ.
ತ್ತದೆ.

೩ ಲಕ್ಷ್ಮಣ ನಾಗೇಶ ಭಾಗವತ ಅಶಿಷ್ಟಂಟ ಮಾಸ್ತ
ರ ಶಿಗ್ಗಲಿ ಇವರನ್ನು ಅಷ್ಟೇ ಪಗಾರದ ಮೇಲೆ ಧಾರವಾ
ಡ ಮರಾಠಿ ಸಾಲಿಯ ಹೆಡ್ಡಮಾಸ್ತರ ಕೆಲಸಕ್ಕೆ ನೇಮಿಸಿ
ರುತ್ತದೆ.

೪ ರಾಮಚಂದ್ರ ಗುಂಜೋ ಮಂಡಗದ್ದಿ ಹೆಡ್ಡಮಾಸ್ತ
ರ ಚಿನ್ನಮುಳಗುಂದ ಇವರನ್ನು ೧೫ ರು. ಯಿಂದ ೨೦
ರುಪಾಯಿ ಪಗಾರದ ಮೇಲೆ ನಾಗವಂದ ಸಾಲಿಯ ಹೆಡ್ಡ
ಮಾಸ್ತರ ಕೆಲಸಕ್ಕೆ ನೇಮಿಸಿರುತ್ತದೆ.

೫ ಶ್ರೀನಿವಾಸ ಭೀಮಾಜಿ ಸ್ಕೂಲಮಾಸ್ತರ ನಾಗವಂ
ದ ಇವರನ್ನು ಅಷ್ಟೇ ಪಗಾರದ ಮೇಲೆ ಚಿನ್ನಮುಳಗುಂ
ದ ಸಾಲಿಯ ಹೆಡ್ಡಮಾಸ್ತರ ಕೆಲಸಕ್ಕೆ ನೇಮಿಸಿರುತ್ತದೆ.

೬ ಶಿದ್ರಾಮಯ್ಯಾ ಮಡಿವಾಳಯ್ಯಾ ಹೆಡ್ಡಮಾಸ್ತರ

ಛಬ್ಬಿ ಇವರನ್ನು ಅಷ್ಟೇ ಪಗಾರದ ಮೇಲೆ ನರೇಂದ್ರ ಸಾಲಿಯ ಹೆಡ್ಡಮಾಸ್ತರ ಕೆಲಸಕ್ಕೆ ನೇಮಿಸಿರುತ್ತದೆ.

೩ ರಾಘವೇಂದ್ರ ಮುಳ್ಳಿಂಗಿತ ಹೆಡ್ಡಮಾಸ್ತರ ನರೇಂದ್ರ ಇವರನ್ನು ಅಷ್ಟೇ ಪಗಾರದ ಮೇಲೆ ಸಾವನೂರ ಇಂಗ್ಲಿಷ ಸಾಲಿಯ ಅಶಿಷ್ಟಂಟ ಕೆಲಸಕ್ಕೆ ನೇಮಿಸಿರುತ್ತದೆ.

೪ ಖಿರೋಜಿ ಆನಂದಪ್ಪ ಅಶಿಷ್ಟಂಟ ಸ್ಕೂಲಮಾಸ್ತರ ಇಂಗ್ಲಿಷ ಸ್ಕೂಲ ಸಾವನೂರ ಇವರನ್ನು ಅಷ್ಟೇ ಪಗಾರದ ಮೇಲೆ ಛಬ್ಬಿಯ ಸಾಲೀ ಹೆಡ್ಡಮಾಸ್ತರ ಕೆಲಸಕ್ಕೆ ನಿಮಿಸುತ್ತಾರೆ ತಾರೀಖು ೪ ನೇ ಮಾರ್ಚ ಸನ್ನ ೧೮೭೭ ಇ.

P. V. Chintamanpetkar.
ಅಕ್ಟಿಂಗ ಡಿll ಇ. ಇ. ಜಿಲ್ಲಾ ಧಾರವಾಡ.

ನಂಬರು. ೩

ಕಾನಡಾ ಜಿಲ್ಲೆಯೊಳಗಿನ ಎಲ್ಲ ಸೆಕಂಡಗ್ರೇಡ ಅಂಗ್ಲೋವ್ಹರನೆಕ್ಯುಲರ ಹಾಗು ವ್ಹರನೆಕ್ಯುಲರ ಸ್ಕೂಲಮಾಸ್ತರರಿಗೆ ತಿಳಿಯ ಪಡಿಸುವದೇನೆಂದರೆ:—

ಕುಮಟಾ ತಾಲೂಕು ಕಸಬಾ ಅವರ್ನಾ ಸ್ಕೂಲಮಾಸ್ತರರಾಗಿದ್ದ ಮಹಾಬಲೇಶ್ವರ ನಾಗಪ್ಪ ಗೋಕರ್ಣಕರ ಇವರು ವಿದ್ಯಾರ್ಥಿಗಳನ್ನು ಕಲಿಸುವದರಲ್ಲಿ ಅಲಕ್ಷ ಮಾಡಿ ಶಾಲೆಗಳನ್ನು ಕೆಡಿಸಿದ್ದಲ್ಲದೆ ನಮ್ಮ ಕೂಡ ಅವರು ನಡಿಸಿದ ವ್ಯವಹಾರದಲ್ಲಿ ತಾವು ಉದ್ದಟರೂ ಘನವಾದ ಶಿಕ್ಷಕಿ ಕೆಲಸಕ್ಕೆ ತೀರ ಅಯೋಗ್ಯರೂ ಎಂದು ಕಾಣಿಸಿಕೊಂಡರು. ಇಷ್ಟೆಲ್ಲ ಅಲ್ಲದೆ ವರ್ತಮಾನವ ಸ್ಥಳ

ಕ್ಕೆ ಯೋಗ್ಯ ವಾಯಿದೆಯೊಳಗೆ ಹೋಗದೆ ಬಹಳ ದಿವ
ಸಗಳ ಪರಿಯಂತರ ಹುಕುಮಿನ ಶಿವಾಯಿ ಗೈರಹಾಜರ
ಇದ್ದರು. ಈ ಎಲ್ಲಾ ಅಪರಾಧಗಳನ್ನು ನೊಹೆಬ್ಬಾನ ಎ॥
ಇನಸ್ಪೇಕ್ಟರ ಸಾಹೇಬ ಬಹಾದ್ದೂರ ಇವರ ಜಾಹಿರಾತಿಗೆ
ತರಲಾಗಿ ಅವರು ಸವರಹು ಮಾಸ್ತರರನ್ನು ಕೆಲಸದಿಂದ
ದೂರ ಮಾಡಿದರು. ಈ ಸಂಗತಿ ಸರ್ವ ಮಾಸ್ತರರು ಧ್ಯಾ
ನದಲ್ಲಿ ಇಟ್ಟುಕೊಂಡು ವರ್ತಿಸತಕ್ಕದ್ದು. ತಾರೀಖು ೯
ನೇ ಮಾಹೆ ಮಾರ್ಚಿ ಸನ್ನ ೧೮೭೨ ಇಸವಿ.

ಮುಕ್ಕಾಮು ಸೊಂದಾ.

R. W. Bhanap.

ಡಿ॥ ಎ॥ ಇನಸ್ಪೇಕ್ಟರ ಜಿಲ್ಲಾ ಕಾನಡಾ.

ದಕ್ಷಿಣ ಭಾಗದೊಳಗಿನ ಯಾವತ್ತು ಸಾಲೀ ಮಾಸ್ತರ
ಹಾಗೂ ಅಶಿಷ್ಟ್ಯಂಟರಿಗೆ ತಿಳಿಸುವದೇನಂದರೆ:—ಬೇರೆ ಋ
ತುವಿನಲ್ಲಿ ಜಾಗೆಗಳು ಖಾಲೀ ಇದ್ದಾಗ್ಯೆ ಅಥವಾ ಬೇರೆ
ಕಾಲದಲ್ಲಿ ಮಾಸ್ತರ ಮತ್ತು ಅಶಿಷ್ಟ್ಯಂಟರು ವರಭಾರೆ ಅ
ರ್ಜಿಗಳನ್ನು ಹಾಕುತ್ತಾರೆ ಹೀಗೆ ಕಂಡು ಬಂದಿರುತ್ತದೆ.
ಕಾರಣ ಯಾವತ್ತರಿಗೂ ಇದರ ಮೂಲಕ ತಿಳಿಸೋಣದ
ರಲ್ಲಿ ಬರುವದೇನಂದರೆ:—ಇನ್ನು ಮೇಲೆ ಯಾವ ಮಾಸ್ತರ
ನಾಗಲೀ ಅಶಿಷ್ಟ್ಯಂಟನಾಗಲೀ ಸರಕಾರಿ ಕಾಮದಾರರ ಕಡೆ
ಗೆ ವರಭಾರೆ ಅರ್ಜಿ ಮಾಡಿದ್ದಲ್ಲಿ ಅವನು ದಂಡಕ್ಕೆ ಪಾತ್ರ
ನಾಗುವನು. ಅರ್ಜಿ ಹಾಕುವದಿದ್ದರೆ ಡಿಪ್ಪುಟಿ ಎಜ್ಯುಕೇಶ
ನಲ್ ಇನಸ್ಪೇಕ್ಟರ ಇವರ ಮಾರಿಫತ ಹಾಕಬೇಕು. ತಿ

ಳಿಯುವನು. ತಾರೀಖು ೬ ಎಪ್ರೀಲ ಸನ್ನ ೧೮೭೫ ಇ.

(Signed) W. A. Russell.

ಎ. ಇ. ದಕ್ಷಿಣ ಭಾಗ.

CORRESPONDENCE

ಪತ್ರವ್ಯವಹಾರವು

ಮಹಾರಾಜ ರಾ. ರಾ. ಕನ್ನಡಶಾಲಾಪತ್ರಕದ ಎಡಿಟರ ರಾಯರಿಗೆ—

ವಿನ್ನಹ ಮಾಡಿ ಬರಕೊಳ್ಳುವದೇನಂದರೆ— ಜಿಲ್ಲಾ ಬೆಳಗಾವ ತಾಲೂಕ ಪರಸಗಡ ಪೈಕಿ ಹಂಚಿನಾಳ ಸಾಲಿಯ ವಿದ್ಯಾರ್ಥಿಯು ನಡಿಯೋ ವರ್ಷದ ದಿಜಂಬರ ತಿಂಗಳಿನ ಶಾಲಾಪತ್ರಕದ ಪುಟಿ ೪೯೬।೪೯೭ ನೇದರಲ್ಲಿ ಕೊಟ್ಟ ಕವಿತೆಯ ಅರ್ಥವನ್ನು ನನ್ನ ಅಲ್ಪ ಬುದ್ಧಿಗೆ ತಿಳಿದಷ್ಟು ಮಾಡಿ ಕಳುಹಿಸಿರುತ್ತೇನೆ ಇದು ತಮ್ಮ ಶಾಲಾಪತ್ರಕದಲ್ಲಿ ಛಾಪಿಸಿ ಕವಿತಾಭಿಲಾಷಿತ ಮನಸ್ಸನ್ನು ತೃಪ್ತಿಪಡಿಸುವಿರೆಂದು ಕೋರುತ್ತೇನೆ.

ವಾ॥ ಮರುಗಿದವು ಕೋಕಕೋಕನದಂಗಳಾಗ ಬೂಯ್ದು ರದವು ಚಕೋರಕೋರಕ ಕುಮುದ ರಾಜಿಗಳ್ತರುಗಿದ ತಮಿಸ್ರಮಾಲೋಕ ಲೋಕಸ್ಥಿತಿಗೆ ತೊಲಗಿದವು ದೆಶೆದೆಶೆಯೊಳು॥ ಮೊರದುದು ಸಮುದ್ರಮುದ್ರವದ ಪೆಚ್ಚುಗೆಯಿಂ ದಲೊರತುದುಡುಕಾಂತಕಾಂತಪ್ರತತಿ ಕುಸುಮ ಕರನುರು

ಬಿದನಗಲ್ದರಂ ಬಾಪಬಾಪಲ ಹಸ್ತನಾಗಿ ಚಂದ್ರೋದಯ
ದೊಳು॥೬೦॥

ಅನ್ವಯ ಶಬ್ದಾರ್ಥವು.

ಚಂದ್ರೋದಯದೊಳು = ಚಂದ್ರಮಸ ಉದಯ ಕಾಲದ
ಲ್ಲಿ, ಮರುಗಿದವು ಕೋಕಕೋಕನದಂಗಳು; ಕೋಕ=ಚ
ಕ್ರವಾಕಪಕ್ಷಿಗಳು, ಕೋಕನದಂಗಳು = ಕೆಂಪುಕಮಲಗ
ಳು, ಮರುಗಿದವು=ಚಿಂತಿಸಿದವು (ದುಃಖಿಬಿಟ್ಟವು), ಅಗ
ಬಾಯ್ದೆರದವು ಚಕೋರಕೋರಕಕುಮುದರಾಜಿಗಳ್; ಆಗ
=ಆವೇಳೆಯಲ್ಲಿ, ಚಕೋರ=ಜೊನ್ನವಕ್ಕಿಗಳು, ಕೋರ
ಕ= ಪುಷ್ಪಿನವೊಗ್ಗಗಳೂ, ಕುಮುದರಾಜಿಗಳ್ = ನೈದಿಲೆ
ಯಸಮೂಹಗಳು, (ಅಥವಾ ಕುಮುದಕೋರಕರಾಜಿಗಳ್
=ನೈದಿಲೆಯವೊಗ್ಗಿಗಳಸಮೂಹವು,) ಬಾಯ್ದೆರದವು = ಬಾ
ಯಿಬಿಟ್ಟವು (ಅರಳಿದವು), ದೆಶೆದೆಶೆಯೊಳು ತುರುಗಿದತಮಿ
ಸ್ರವಾಲೋಕಲೋಕಸ್ಥಿತಿಗೆ ತ್ರೋಲಗಿದವು; ದೆಶೆದೆಶೆಯೊ
ಳು=ದಿಕ್ಕುದಿಕ್ಕುಗಳಲ್ಲಿ, ತುರುಗಿದ=ಕಿಪ್ಪಿಕ್ಕಿಂದವಾದ (ದ
ಟ್ಟವಾದ), ತಮಿಸ್ರ=ಕತ್ತಲೆಯು, ಆಲೋಕ=ಪ್ರಕಾಶ
ಕ್ಕಾಗಿ, ಲೋಕ=ಮಾತಾಳಲೋಕದಲ್ಲಿ, ಸ್ಥಿತಿಗೆ=ಇರುವ
ದಕ್ಕೆ, ತ್ರೋಲಗಿದವು=ಹೋದವು, ಮೊರದುದುಸಮುದ್ರ
ಮುದ್ರನದಪೆಚ್ಚಗೆಯಿಂದಲಿ; ಉದ್ರವದ=ಒಳ್ಳೆಧ್ವನಿಯು,
ಪೆಚ್ಚಗೆಯಿಂದಲಿ = ಹೆಚ್ಚಳಿಕೆಯಿಂದಲಿ, ಸಮುದ್ರಂ=ಸ
ಮುದ್ರವು, ಮೊರದುದು=ಘೋಷಿಸುವದು, ಒರತುದುಡು
ಕಾಂತಕಾಂತಪ್ರತತಿ; ಉಡುಕಾಂತ=ನಕ್ಷತ್ರಗಳಿಗೆಒಡೆಯನಾ
ದಚಂದ್ರ, ಕಾಂತ=ಕಲ್ಲು (ಉಡುಕಾಂತಕಾಂತ=ಚಂದ್ರಕಾಂ
ತಶಿಲೆಯು), ಪ್ರತತಿ=ಸಮೂಹವು, ಒರತುದು=ಸ್ರವಿಸಲಿ

ಕ್ಕೆಹತ್ತಿತು, ಚಾಪಚಾಪಲಹಸ್ತನಾಗಿಕುಸುಮಶರಂಅಗಲ್ದ
ರಂಉರುಬಿದಂ; ಚಾಪ=ಬಿಲ್ಲು, ಚಾಪಲ=ಚಂಚಲವಾದ,
ಹಸ್ತನಾಗಿ = ಕೈಯಲ್ಲಿ ಧರಿಸಿದವನಾಗಿಅಂದರೆಚಂಚಲವಾದ
ಕೈಯಲ್ಲಿಧನುಷ್ಯುಳ್ಳವನಾಗಿ, ಕುಸುಮಶರಂ=ಪುಷ್ಪಬಾ
ಣವುಳ್ಳವನ್ಮನ್ಮಥನು, ಅಗಲ್ದರಂ=ಅಗಲಿದಂಥಸ್ತ್ರೀಪುರುಷ
ರಗಳನ್ನು, ಉರುಬಿದಂ(ಉರುಬು=ಸುಡು) = ವಿರಹಾಗ್ನಿ
ಯಿಂದಸುಡಹತ್ತಿದನು.

ಭಾವಾರ್ಥವು.

ಚಂದ್ರೋದಯಪಕಾಲದಲ್ಲಿ ಚಕ್ರವಾಕಪಕ್ಷಿಗಳೂ, ಕೆಂಪು
ಕಮಲಗಳೂ, ದುಃಖಬಿಟ್ಟವು; ಜೋನ್ನವಕ್ಕಿಗಳೂ, ಹುವ್ವಿ
ನವೊಗ್ಗಗಳೂ, ಕನ್ನೈದಿಲೆಯಸಮೂಹವೂ ಅಥವಾನೈದಿ
ಲೆಯವೊಗ್ಗಗಳಸಮೂಹವೂಅರಳಿದವು (ಸಂತೋಷಬಟ್ಟ
ವು); ದಿಕ್ಕುದಿಕ್ಕುಗಳಲ್ಲಿ ಕಿಪ್ಪಿಂಥವಾದ ಕತ್ತಲೆಯೂ ಬಿ
ಳಕಿಗೆ ಅಂಜಿ ಸಾತಾಳ ಲೋಕಗಳಲ್ಲಿ ಇನುವಡಜ್ಜಿ ದೋ
ಡಿದವು, ಒಳ್ಳೇ ಧ್ವನಿಯು ಜೋಕ್ಕುವಿಕೆಯುಂದ ಸಮುಚ್ಚಯವು ಮ
ದರಲಾರಂಭಿಸಿತು, ಚಂದ್ರಕಾಂತ ಶಿಲೆಗಳ ಸಮೂಹವು ದ್ರ
ವಿಸಲಾರಂಭಿಸಿದವು, ಚಂಚಲಸ್ವಭಾವವುಳ್ಳ ಕೈಯಲ್ಲಿ ಧನುಷ್ಯು
ಳ್ಳವನಾಗಿ ಮನ್ಮಥನು ಅಗಲಿದಂಥ ಸ್ತ್ರೀಪುರುಷರುಗಳ
ನ್ನು ಸುಡಹತ್ತಿದನು.

ಕತ್ತಲೆ—ಇದು ಬಹುವಚನಾರ್ಥವು.

ಅದಳು—ಸಂತೋಷಬಿಡು.

ಚಂದ್ರೋದಯದಲ್ಲಿ ಯುವ್ವನಸ್ಥರಾದ ಸ್ತ್ರೀಪುರುಷ
ರುಗಳಿಗೆ ವಿರಹ ಹೆಚ್ಚುವೆಂಬುವ ವಿಷಯದಲ್ಲಿ ಸಂಶ
ಯವಿಲ್ಲ.

ಮುಕ್ಕಾಮು ಮುಮದಾಪ್ಪೂರ ತಾಲೂಕ ವಿಜಾಪ್ಪೂರ ಜಿಲ್ಲಾ ಕಲಾದಗಿ ತಾರೀಖು ೫ ಮಾರ್ಚಿ ಸನ್ನ ೧೮೭೭ ಇಸವಿ.

ರಂಗನಾಥ ನರಸಿಂಹ ವಿಜ್ಞಾಪ್ಪೂರಕರ ಮೂನಿಟರ ಕಸಬ ಮುಮದಾಪ್ಪೂರ ತಾಲೂಕ ಜ್ಯೋತಿಪ್ಪೂರ.

ರಾವಸಾಹೇಬ ಕನ್ನಡ ಶಾಲಾಪತ್ರಿಕೆಯ ಎಡಿಟರ ಇವರಿಗೆ—

ವಿ. ವಿ. ಕೆಳಗೆ ಬರೆದ ನಾಲ್ಕು ವಳಿಗಳಿಗೆ ತಮ್ಮ ಕರ ಪಂಜರಗಳಲ್ಲಿ ಬ್ಯಾದ್ಯವಿಸುವ ಕನ್ನಡ ಶಾಲಾಪತ್ರಿಕೆಯಲ್ಲಿ ಸ್ಥಳ ದೊರಿಯುಹುದೆಂದು ನೆರನಂಬಿದ್ದೇನೆ.

ಶ್ಯಾಮಚರಿತ್ರೆಯ

ಹೊಸಕವಿತೆಯು.

ಭಾ.॥ ಕಂದು ಗೊರಳನೆ ವ್ಯಾಘ್ರ ಚರ್ಮಾಂಬರನೆ।
ಯಿಂದು ರವಿಶಿಖಿ ನೇತ್ರ ಯುತನೆ।
ವಂದಿಸುವೆನಾ ಗಂಗಧರನೆ ಪಾರ್ವತೀ ಪ್ರಿಯನೆ॥
ಗಂಧರೀಕಸ ಹರಿಯರಿವರಿಂ।
ದೊಂದನೆಯ ಕೈಕೊಂಬ ಸಾಂಬನೆ।
ಛಂದದಿಂದಲಿ ಯಿತ್ತು ಬುದ್ಧಿಯ ಸಲಹುವದು ನಿತ್ಯಾ॥೧
ಭಾ॥ ಬಸವ ನಾವುವ ವಸಿದು ನೆನದರೆ।
ಅಸಮ ಪಾಪವು ಕುಸಿದು ಹೋಹುದು।
ಹಸಿದ ಶಿಸುವಿಗೆ ಪಾಲು ವ್ರಣಿಸುವ ತಾಯಿ ತೆರದಿಂದ॥
ಬಿಸುವ ನೇತ್ರಗಳಿಂದ ನೋಡುತ।

ಹಸನವಾಗಿರು ಯೆಂದು ಬುದ್ಧಿಯ।
ರಸವ ಕೊಟ್ಟ ತ್ರಿ ಮುಮತ್ತೆಯೋಳ್ಸಲಹುವನು ನಿರುತದಲಿ।।೫।
ಭಾ।। ಕುಲ್ಲ ಮನುಜನು ನಿಲ್ಲದಲೆ ತಾ।
ಬಲ್ಲಿದವರನು ಜರಿಯಲವರೊಳು।
ಸಲ್ಲಲಿತ ಗುಣ ಪ್ರೋಗಿ ಅತಿ ಕುಜನತ್ವ ವದಗುವದೇ।।
ಸಲ್ಲುಸಲ್ಲಿಗ ವದರಿ ಗದ್ದಲ।
ನಿಲ್ಲದಂ ಮೂಡಿದಡೆ ಬುಧತನ।
ಯಿಲ್ಲರಿಗೆ ಬಪ್ರ್ಪವದೆ ಅವನಿಯೊಳಗ ನಿರುತದಲಿ।।೪।।
ಭಾ।। ಗುರುಗಳ್ಕೀ ಪೇಳುವದು ಯಿಂದಿಗೆ।
ಬರೆವ ಚರಿತ್ರೆಯು ನಮಗೆ ಯನಲು।
ಅರಿತ ತ್ರೆರದಿಂ ಬಸವಲಿಂಗನು ಪೇಳಿದನು ಕಥೆಯು।।
ಬರಿಯು ಮಾತಿನ್ನೇನು ಶೇವಕ।
ಸುರವತ್ರಿಯು ತಾ ವೃಷ್ಟಿ ಯೀಯುಚಿ
ಬರವು ಪದಗಿತು ಲೋಕಪದೋಳತಿ ಘೋರತೆರದಿಂದ।।೪।।
ಭಾ।। ಯೆಲವ್ರೊ ಭೃತ್ಯನೆ ಯಿಂಸುದಿನ ಯೀ।
ಸೆಲಕೆ ವೃಷ್ಟಿ ಸುನಿತ್ತುನಾನತ್ತಿ।
ಬಲವ ಮೂಡಿದಡಿವಳು ನನಗತಿ ಸೇವ ತ್ರೋರಿಸಳು।।
ಸಲುಗೆ ಬೇಡವು ಯಿವಳವೆಂಬಾ।
ಛಲದಿ ಅಂಬರ ಜೇವಿ ತಾ ನೆರೆ।
ಮಳಯನೀವುದು ಬಿಟ್ಟಳೋ ಯೆಂಬಂತೆ ಕೋಭಿಸಿತು।।೫।
ಭಾ।। ಮುಂದಿನೊರುಷಕೆ ಗಿರಿಜ ಪತಿಯು।
ಛಂದದಿಂದಲಿ ಅವನಿಯುಂ ನೆರೆ।
ಕುಂದವಿಲ್ಲದೆ ಕಾಯ್ವನದರಿಂದೀಗ ಪ್ರೋಗುವದು।।
ಯೆಂದು ಕ್ಷಾಮನೆ ಕಳುಪ ಭೂಮಿಯು।

ಮುಂದಣೈಭವನೆಲ್ಲವನು ಸುಡು।
ಯೆಂದು ಅಂಬರದೇವಿ ಭುದ್ವಿಯವೆರಸಿ ಕಳುಹಿದಳೊ॥೬
ಭಾ॥ ಪ್ರೌಮದೂತನು ಗಗನದೇವಿಯ।
ನೇಮದಂತೆಯ ಪರಮ ಧಾತ್ರಿಗೆ।
ಸಾಮಸಂಪತ್ಸದದಿ ಪದಗಿತು ಮರ್ತ್ಯಲೋಕದೊಳು॥
ಗ್ರಾಮಪ್ರೊಳಲನು ಬಿಡದೆ ತಿರಗುತ।
ಕಾಮಿಸಿದ ವಸ್ತುವನು ಪಿಡಿಯುತ।
ಭೂಮಿದೇವಿಯ ಭಂಗಬಡಿಸುತ ತಿರುಗಿದನು ತಾನು॥೭॥
ಭಾ॥ ಮಳೆ ಬೆಳೆಗಳಿಲ್ಲದೆ ಬಡಪಳ ಕ್ರಮದಿಂ।
ಬಳಲುತಿರ್ದರು ಮತ್ತೆ ತಮ್ಮೊಳು।
ಫಳಿಸಿದರ್ಥವು ಸಾಲಬೆಟ್ಟೀಯಿತು ಪ್ರೌಮಕಾಲದಲಿ॥
ತೊಳಲಿ ದೇಶವ ತಿರಗುತಿರ್ದರು।
ಪುಳಿದ ಮಾತಿನ್ನೇನು ಪೇಳಲಿ।
ಮುಳಿದನಿಂದಿಗೆ ಯೀಕನೆನುತಲಿ ಕಷ್ಟಬಡುತಿಹರು॥೮॥

ಮುಂಡಕ್ಕೆ ಸಾಗುವದು.)

ಪತ್ರವಿಸ್ತಾರಕ್ಕೆ ಮಾಫಿ ಇರಲೆಂದು ಬೇಡಿಕೊಳ್ಳು
ತ್ತೇನೆ ದಿವ್ಯಚಿತ್ತಕ್ಕೆ ಕೃತ ವಿರಬೇಕು.
ತಾ॥ ೪ಸೇ ಎಪ್ರೀಲ } ಬಸಲಿಂಗಪ್ಪ ಬಸವಪ್ಪ ಕಾರಿ
ಸನ್ನ ೧೮೭೩ ಇಸವಿ. } ಕೇರಿಹೆ. ಮಾ. ಸವಡಿ ತಾ ರೋಣ







ಸ್ಮರಣೆ : ೧೮೬೮

ಸಂಸ್ಥಾಪಕರ

ಜೀವನ ಲಕ್ಷಣ ಪತ್ರಿಕೆಯು
ಶತವಾನೋತ್ತರ ಜೆಲ್ಲಿ ಮಟ್ಟದ
ಪುಸ್ತಕ ಪ್ರದರ್ಶನ ೧೯೮೯

ಶತವಾನೋತ್ತರ ಜೆಲ್ಲಿ ಮಟ್ಟ
(ಎಲ್ಲಾ ಗಾಂಜಾ ಬಿಡಿ)
ಮರ್ಮ

ತೆ ಚಿನ್ನಪಿಸಪ್ಪನವರ
'ಅಭಿನವ ಗುರು'
ನಯ ಸಂಪ್ಪ



ಶಿಕ್ಷಣ ಸಂಚಯ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚಿನ್ನಪಿಸಪ್ಪ ವೃತ್ತ, ರೊದ್ದಪೆಟ್ಟೆ, ಧಾರವಾಡ

1878

ಸಿದ್ಧನಾಥ ಗಾಚಿಗ ಮಂದಿರ
ಮೈಸೂರು ಜಿಲ್ಲೆ

ಕನ್ನಡ ಶಾಲಾಪತ್ರಿಕೆ.

KANARESE

SCHOOL PAPER.

—o*o—

ಪುಸ್ತಕ ೧೩] [ಸಂಚಿಕೆ ೪

ತಾರೀಖು ೩೧ನೇ ಮೂಹೆ ಮಾರ್ಚ, ೧೮೭೮.

ಅನುಕ್ರಮಣಿಕೆಯು.

ಪುಟ.

ವಿದ್ಯಾಸುಧಾರಣಾಸಂಬಂಧವಾದ ವೃತ್ತಾಂತಗಳು.... ೭೩

ಪುಂಜುಗಣ್ಣು..... ೭೮

ವಸಂತವರ್ಣನಂ..... ೮೪

ಜ್ಯೋತಿಷಶಾಸ್ತ್ರದಚರಿತ್ರೆ..... ೮೭

ನೋಟೀಸುಗಳು..... ೯೦

ಪತ್ರವ್ಯವಹಾರ..... ೯೪

CONTENTS.

Page

Educational Intelligence. 73

Short Sight. 78

New Poetry—Description of Spring. 84

History of Astronomy. 87

Departmental Notices. 90

Correspondence. 94

DHARWAR.

Printed at the Dnana Wardhaka Press.

ಶಾಲಾಪತ್ರಕವು.

—— ೦ ೦ * ೦ ೦ ——

ಪುಸ್ತಕ ೧೩] [ಸಂಚಿಕೆ ೪

ತಾರೀಖು - ೩೧ ನೇ ಪೂರ್ಣ, ೧೭೭೮.

Educational Intelligence.

ವಿದ್ಯಾಸುಧಾರಣೆಯಾಸಂಬಂಧವಾದ ವೃತ್ತಾಂತಗಳು.

ನೇಕಸಾಮಾಜಾರ ಗವರ್ನರ್ ಜನರಲ್ಲರಾದ ಲಾರ್ಡ್ ಲಿನ್ ಧೊರೆಗಳವರು ಪ್ರೊಳಗಡೆಯಲ್ಲಿ ನಾಲ್ಕು ಸಂಭಾಷಣೆಗಳಲ್ಲಿ ವಿದ್ಯಾಭ್ಯಾಸತೆಯ ವ್ಯವಸ್ಥೆಯನ್ನು ಕುರಿತು ತಮ್ಮ ಅನಿಪ್ರಾಯಗಳನ್ನು ಪ್ರಕಟಿಸಿದರು. ಆ ಸಂಭಾಷಣೆಗಳನ್ನೆಲ್ಲ ಪೊಪ್ಪಗೂಡಿಸಿ ಕಲಕತ್ತಾ ಸ್ಟೇಟ್ಸ್ ಮನ್ ಪತ್ರಿಕೆ ಎಡಿಟರರು ಪೊಂದು ಸಣ್ಣ ಪುಸ್ತಕವನ್ನು ಪ್ರಾಪಿಸಿರುತ್ತಾರೆಂದು ಕೇಳುತ್ತೇವೆ. ಆ ಪುಸ್ತಕವು ನಮಗೆ ದೊರಿದರೆ; ಅದನ್ನು ಭಾಷಾಂತರಿಸಿ ಈ ಪತ್ರಿಕೆಯಲ್ಲಿ ಹೊತ್ತಸ್ಕೃತಿಂದ ಪ್ರಸಿದ್ಧಿಸುವೆವು.

—— ೦ ——

ಮುಂಬಯಿಯಲ್ಲಿ ಡಾಕ್ಟರ ವುಯಿಲ್‌ಸನ್ ಧೊರೆಗಳ ಕಾಲೇಜಿದಲ್ಲಿ ಪ್ರೊಫೆಸರನಾಗಿದ್ದ ರೆವರೆಂದ ಮಿಸ್ಟರ ಮಾಕೇಕೆನ ಯೆಂಬವರು ಈ ತಿಂಗಳವ ಏನೇ ತಾರೀಖಿನಲ್ಲಿ ಚೆಲ್ಸೀ ಫ್ರೀನಯೆಂಬ ಯಾಂತ್ರವನ್ನು ಕುರಿತು ಟೌನಹಾಲ್ ಮಂದಿರದಲ್ಲಿ ವ್ಯಾಖ್ಯಾನ ಮಾಡಿದರು. ಆ ಸಭೆಯಲ್ಲಿ ನಾಮಾಡಾರ ಗಣ್ಯನಾಗಿದ್ದ ಸ್ಯೂಗಳು ಅಧ್ಯಕ್ಷರಾಗಿದ್ದರು. ವ್ಯಾಖ್ಯಾನಕರ್ತರು ಚೆಲ್ಸೀಫ್ರೀನ ಅಂದರೆ ಪೂರ್ವ ನಿಯಂತ್ರಮೆಂಬ ಆ

ರ್ಥವನ್ನು ತಿಳಿಸಿ, ಆ ಯಂತ್ರದ ಅತಿಸುಲಭವಾದ ರಚನೆಯನ್ನೂ, ಅದರ ಸಹಾಯದಿಂದ ಬೇಕಾದಷ್ಟು ದೂರದಲ್ಲಿ ಧ್ವನಿಯು ಕೇಳ ಬರುವದರ ಉಪಪತ್ತಿಯನ್ನೂ ಬಹು ಸರಸವಾಗಿ ನಿರೂಪಿಸಿದರು. ಕಡೆಯಲ್ಲಿ ಅವರು ಆ ಟೌನಹಾಲಿಗೂ ಅಲ್ಲಿಂದ ಸುಮಾರು ೧೫. ಮೈಲು ದೂರವಾಗಿರುವ ಬೋರೀಬಂದರವ ಮೇಲಿನ ಹೊಗೆ ಬಂಡಿಯ ಸ್ಟೇಶನ್ನಿಗೂ ನಡುವೆ ಆ ಯಂತ್ರದ ತಂತಿಯನ್ನು ಸಾಗಿಸಿ, ಪ್ರೊಂಟ ಸ್ಥಳದಲ್ಲಿ ಯಂತ್ರದೊಳಗೆ ಮಾತಾಡಿದ ಧ್ವನಿಯು ಮೆರಡನೇದರಲ್ಲಿ ಅತಿಸ್ಪಷ್ಟವಾಗಿ ಕೇಳುವದನ್ನು ಪ್ರತ್ಯಕ್ಷವಾಗಿ ತೋರಿಸಿದರು. ಈ ಯಂತ್ರದಲ್ಲಿ ಸೂಕ್ಷ್ಮವಾದ ಮಂಜುಳ ಸ್ವರದಿಂದ ಹಾಡಿದ್ದು ಬೇಕಾದಷ್ಟು ದೂರ ಕೇಳಬರುವದಲ್ಲದೆ, ಮಾತಾಡುವ ಮನುಷ್ಯನ ಗುರ್ತು ಹತ್ತುವಹಾಗೆ ಅವನ ಸ್ವರವು ಕೇಳಬರುತ್ತದೆಂತಲೂ, ಈ ಹೊತ್ತು ಆ ಯಂತ್ರದಲ್ಲಿ ಮಾತಾಡಿದವನ ಧ್ವನಿಯನ್ನು ಮುಂದೆ ಬೇಕಾದಾಗ ಸ್ಪಷ್ಟವಾಗಿ ಯಾವತ್ತಿನಿಂದ ಕೇಳಿಕೊಳ್ಳ ಬಹುದೆಂತಲೂ ಹೇಳುತ್ತಾ ನಾವು ಮೊಮ್ಮೆ ಆ ಯಂತ್ರದಲ್ಲಿ ಮಾತಾಡಿ ಬಿಟ್ಟರೆ ನಮ್ಮ ಮೊಮ್ಮಕ್ಕಳು, ಮರಿ ಮಕ್ಕಳು ಜಿರಿ ಮಕ್ಕಳು ಸಹ ನಮ್ಮ ಧ್ವನಿಯನ್ನು ಅದರಲ್ಲಿ ಕೇಳಬಹುದು! ಇದೆಲ್ಲಾ ಆ ಸೂರೀ ಮಾಯೆಯಂತೆ ತೋರುತ್ತದೆ. ನಮ್ಮ ಈಗಿನ ಗಹ್ವನ್ನರಾದ ಸರ್ ರಿಚರ್ಡ್ ಟೆಂಪಲ್ ಧೊರೆಗಳು ಹೊಗಳಿಕೆಯಂಥ ವಿದ್ಯಾಭಿಮಾನಿಗಳಿರುತ್ತಾರೆಂದು ನೋಡಿ ಅತ್ಯಾನಂದವಾಗುತ್ತದೆ.

—೦—

ಸಭೆಯ ಮುಖ್ಯ ಉದ್ದೇಶವಾದ ನೈತಿಕ್ರೋಜನ್ನೆಂಬ

ನಡಾರ್ಫ್‌ರವ್ರು, ನೀರು ಹುಟ್ಟಿಸುವ ಮೂಲತತ್ವಗಳಾದ ಆಕ್ಸಿಜನ್, ಹೈಡ್ರೊಜೆನ್, ಯೆಂಬವ್ರಗಳೂ ವಾಯುರೂಪಿಗಳಾಗಿ ಹೊಗೆಯು ಹಾಗೆ ಯಾವಾಗಲೂ ಅಂತರಿಕ್ಷದಲ್ಲಿ ಇರುತ್ತವೆಂದು ಇದುವರೆಗೂ ಯಾವತ್ತು ರಸಾಯನ ಶಾಸ್ತ್ರಜ್ಞರು ನಂಬುತ್ತ ಬಂದರು. ಆದರೆ ಪಾರಿಸ ಪಟ್ಟಣದಲ್ಲಿ ಮಿ. ಪ್ಲೆಕೇತನೆಂಬವನೊಬ್ಬ ಶೋಧಕನು ಮೆಲಾವ ಕೌತುಕದ ಯುಕ್ತಿಯಿಂದ ಭಾರಹಾಕುವದೊಂದು ಯಂತ್ರವನ್ನು ರಚಿಸಿ, ಆ ಯಂತ್ರದಿಂದ ಆಕ್ಸಿಜನ್ನಿನ ಮೇಲೆ ೬೦೦ ವಾತಾವರಣಗಳ (ಭೂಮಿಯ ಸುತ್ತು ಮುತ್ತಲಿರುವ ಹವೆಯೆಲ್ಲಕೂಡಿ ೧ ವಾತಾವರಣ ವೆನಿಸುತ್ತದೆ.) ಭಾರ ಹಾಕಿ ಅದನ್ನು ನೀರಿನಂತೆ ದ್ರವರೂಪಿಯಾಗಿ ಮಾಡಿದನು! ಇದೇ ರೀತಿಯಿಂದ ಮಿ. ಕೆಲಿಟೆಟ್ ಯೆಂಬವನು ಹೈಡ್ರೊಜನ್ ನೈತ್ರೊಜನ್‌ಗಳಿಗೂ ದ್ರವಾಕಾರರೂಪ ಕೊಟ್ಟನು. ಈ ಶೋಧಗಳಿಂದ ಆಶ್ಚರ್ಯಕರವಾದ ಪರಿಣಾಮಗಳು ಮೊಡಗುವವೆಂದು ರಸಾಯನ ಶಾಸ್ತ್ರಜ್ಞರು ತರ್ಕಿಸುತ್ತಾರೆ.

—೦()೦—

ಬಂಗಾಲ ಇಲಾಖೆಯಲ್ಲಿ ಹೋದ ವರ್ಷ ೫೮ ವರ್ತಮಾನ ಪತ್ರಗಳಿದ್ದವು. ಅವುಗಳಲ್ಲಿ ೨೩ ದೇಶಭಾಷೆಯ ಪತ್ರಗಳು ಆಶ್ರಯವಿಲ್ಲದ ಕಾರಣ ಕಟ್ಟಿದವು. ಉಳಿದ ೩೫ರಲ್ಲಿ ೪ ಪ್ರತಿದಿನ ಹೊರಡುತ್ತವೆ. ಇಂಗ್ಲಿಷ ವಿದ್ಯೆಯು ಜನರಲ್ಲಿ ಬಹಳ ಹಬ್ಬಿ ಇಂಗ್ಲಿಷ ಪತ್ರಗಳನ್ನೇ ಓದುವ ಅಭಿರುಚಿಯು ಬೆಳೆಯುತ್ತ ಸಾಗಿದ ಕಾರಣ ದೇಶಭಾಷೆಯ ಪತ್ರಗಳಿಗೆ ಆಶ್ರಯವು ತಕ್ಕಷ್ಟು ದೊರೆಯುವದಿಲ್ಲವೆಂದು ಸ್ಪಷ್ಟಪಡುತ್ತಾರೆ.

ಕಲಕತ್ತೆಯ ಡಾಕ್ಟರ ರಾಜೇಂದ್ರಲಾಲ ಮಿತ್ರರಯೆಂಬವರಿ
ಗೆ ಕೆಲ ದಿವಸಗಳಹಿಂದೆ ಫ್ರೆಂಚ ಸರಕಾರದವರು ಬೋಂದು
ಬಹುಮಾನದ ಪದವಿಯನ್ನು ಕೊಟ್ಟರು. ಈಗ ಅವರಿಗೆ ಆ
ದೇ ಸರಕಾರದವರು "ಆಫೀಸರ ಅಫ್ ಪಬ್ಲಿಕ್ ಇನ್‌ಸ್ಟ್ರಕ್
ಶನ್" (ವಿದ್ಯಾಖಾತೆಯ ಆಫೀಸರರು) ಯೆಂಬ ಪದವಿಯ
ನ್ನು ಕೊಟ್ಟರು. ಈ ಪಂಡಿತರು ಬಹು ಸಹಾಸದಿಂದ ಬಂ
ಗಾಲ ಇಲಾಖೆಯಲ್ಲಿ ಬಹಳ ಸಂಸ್ಕೃತ ಹೊಸ ಗ್ರಂಥಗಳನ್ನು
ಗೊತ್ತು ಹಚ್ಚಿದರಿಂದ ಗವರ್ನರ ಜನರಲ್ ಥೊರೆಗಳು ಇ
ವರಿಗೆ ಬಹು ಮಾನದ ಪತ್ರವನ್ನು ಬರಿದರೆಂಬು ಕೇಳುತ್ತೇವೆ.

—೦೦೦—

ಗಿರಣಿ ಪ್ರಾಂತದಲ್ಲಿ ಬರ್ಮಾ ಬಿದ್ದು ಹಳ್ಳಿಗಳೂ ಕೋ
ಟೆಗಳೂ ಅದರೊಳಗೆ ಮುಳುಗಿ ಹೋದವಂತೆ.

—೦—

ಕ್ಯಾಥೊಲಿಕ ಮತದ ಮುಖ್ಯಗುರುವಾದ ಪೋಪನು ನಿರ್ದೋ
ಷಿಯೆಂದು ಆ ಮತದವರು ಯೋಚಿಸುತ್ತಾರೆ. ಆದರೆ ಆ ಪ
ರಾತ್ಪರಗುರುವಿಗೆ ಸಹ ಜೀರೊಬ್ಬ ಗುರುವಿರುತ್ತಾನೆಂತಲೂ,
ಆ ಗುರುವಿನ ಬಳಯಲ್ಲಿ ಪೋಪನು ತನ್ನ ಪಾಪಗಳನ್ನು
ಪೊಪ್ಪಿಕೊಂಡು ಕ್ಷಮೆ ಬೇಡುತ್ತಿರುತ್ತಾನೆಂತಲೂ ಪೊಬ್ಬ ಕ್ಯಾ
ಥೋಲಿಕ ಮತದವನೇ ತಿಳಿಸುತ್ತಾನೆ. "ನೌಸರ ಗಾಡಾ,
ಗಾಡೆಪರನೌ"

—೦—

ನಮ್ಮ ದೇಶದಲ್ಲಿ ಹೋದ ಪರ್ವ ಬಿದ್ದ ಬರಕ್ಕಿಂತ ಬ
ಹಳ ದೊಡ್ಡ ಬರವು ಚೀನ ದೇಶದಲ್ಲಿ ಈಗ ಬಿದ್ದಿರುತ್ತದೆ.
ಅದಕ್ಕಾಗಿ ಹಣ ಜಮೆ ಮಾಡುವದೊಂದು ಹೊಸ ಕಲ್ಪನೆ

ಯನ್ನು ಆ ದೇಶದ ಸರಕಾರದವರು ತೆಗೆದುಹಾಕ್ಯಾಗಿಂದ ರೆ, ಸಂಪಿರಾರು ಬಹುಮಾನದ ಪದವಿಗಳ ಸರ್ಟೀಫಿಕೇಟುಗಳನ್ನು ಭಾಮಿನಿ, ಆಯಾ ಪದವಿಯ ಯೋಗ್ಯತೆಯಂತೆ ಹೆಚ್ಚು ಕಡಿಮೆ ಬೆಲೆಯಿಂದ ಆ ಸರ್ಟೀಫಿಕೇಟುಗಳನ್ನು ಜನರಿಗೆ ಮಾರುತ್ತಾರೆ!

—೦—

ಅಮೇರಿಕದ ನ್ಯೂಯಾರ್ಕ್ ಪಟ್ಟಣದಲ್ಲಿ ರೋಮನ್ ಕ್ಯಾಥೋಲಿಕ ಮತದವರೊಂದು ಗುಡಿಯನ್ನು ಕಟ್ಟುವ ಕೆಲಸವು ಈಗ ೨೦ ವರ್ಷ ನಡಿಯಿತೆ. ಅದರ ಗುಮ್ಮಟವು ೩೨೫ ಘಟ್ಟು ಯೆತ್ತರ ವುಂಟು; ಅದು ಮುಗಿಯಲಿಕ್ಕೆ ಇನ್ನೂ ಮೂರು ವರ್ಷ ಬೇಕು. ಈ ಗುಡಿಗಾಗಿ ಆಗುವರೆಗೆ ೩೦ ಲಕ್ಷ ರೂಪಾಯಿ ಖರ್ಚಾಯಿತಂತೆ!

—೦—

ಮೊಹಬ್ಬಾನ ಚಾಪಿಲ್ಡ ಧೊರೆಗಳು ಯೇಳು ವರ್ಷ ತಿಂಗಳಿನ ರಜೆಯನ್ನು ತಕ್ಕೊಂಡ ರೆಂತಲೂ, ಅವರ ಸ್ಥಳಕ್ಕೆ ಮುಖ್ಯಭಾಗದ ಇನಸ್ಪೆಕ್ಟರರಾದ ಮೆಹೆಬ್ಬಾನ್ ವಾರಿಂಗಟನ ಧೊರೆಗಳು ಮೊಕರರಾದ ರೆಂತಲೂ ಸರಕಾರೀ ಗ್ಯಾರೆಟ್ಟಿನಲ್ಲಿ ಭಾಮಿಸಿರುತ್ತದೆ.

—೦—

ಮೆಹೆಬ್ಬಾನ್ ರಸಲ್ ಧೊರೆಗಳವರ ಸ್ಥಳಕ್ಕೆ ಪುಣಿಯ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾದ ರಾ. ಪಾ. ಸೀತಾರಾಮ ವಿಶ್ವನಾಥ ಮಿತಮ್ಮನ ಇವರು ಮೊಕರಾಗಿಬಂದು ಚಾರ್ಜ ತಕ್ಕೊಂಡು ಕೆಲಸ ನೋಡಕತ್ತಿದರು.

—೦—

ಸಿದ್ಧನಾಥ ವಾಚನ ಮಂದಿರ.
ಮೂರಬಿ. ಬಿ ಧಾರವಾಡ.

ಬಿ. ಸಿ. ಪಾಂಡುರಂಗ ಪೆಂಕಟೇಶ ಇವರಿಗೆ ಇಲ್ಲ
ಕಲೆಕ್ಟರರ ಕೆಡೆ ರೈಟರರ ಸ್ಥಳ ದೊರಿಯುವ ಸಂಭವವಿಲ್ಲ
ತಿಳಿದಪೆ.

—o—

Sort Sight:
ಮುಂಜುಗಣ್ಣು.

ಡಾಕ್ಟರ ಸೀ. ಬೀ. ಟೀಲರ ಯೆಂಬ ವಿದ್ವಾಂಸ...
ಕ್ಷೇಟರ ಯೆಂಬ ಪರ್ತಮಾನಪತ್ರದಲ್ಲಿ ಮುಂಜುಗಣ್ಣಿನ
ವಿಷಯವಾಗಿ ಪೊಂದು ವಿಶ್ವಪನ್ನು ಪ್ರಸಿದ್ಧಿಸಿರುತ್ತಾನೆ.
ಸಾರಾಂಶವನ್ನು ಕೆಳಗೆ ಬರಿಯುತ್ತೇವೆ.

ಕಣ್ಣಿಗೆ ತೀರ ಸಮೀಪವಾಗಿ ಹಿಡಿದ ಪದಾರ್ಥಗಳ
ಬೇರೆ ಯಾವ ಪದಾರ್ಥಗಳೂ ಮುಂಜುಗಣ್ಣಿನವರಿಗೆ ಸ್ಪಷ್ಟವಾ
ಗಿ ಕಾಣಿಸುವದಿಲ್ಲ. ಈ ದೃಷ್ಟಿ ದೋಷದ ಚಿಕಿತ್ಸೆಯನ್ನು
ನಾನು ಬಹು ಕಾಲದಿಂದ ಮಾಡುತ್ತ ಬಂದಿರುತ್ತೇನೆ. ಇ
ಗಿನ ಕಾಲದಲ್ಲಿ ಈ ದೋಷವು ಜಿಗಗು ಅಕ್ಷರಗಳನ್ನು ಬಹ
ಳವಾಗಿ ಓದುವದರಿಂದ ಹುಟ್ಟುವದೇ ಬಹಳ.

ಕಣ್ಣಿ ಗುಡ್ಡೆಯ ಹಿಂದೆ ಕಾಜಿನಂತೆ ಅಪಾರದರ್ಶಕವಾದದ್ದೊಂದು ಗೋಲವಿರುತ್ತದೆ. ಅದೇ ಮುಖ್ಯ
ನೇತ್ರವು. ಅದರ ಸ್ವಾಭಾವಿಕ ಆಕಾರವು ಅನೇ ಗುಲ
ಗುಂಜಿಯಂತೆ ಇರುತ್ತದೆ. ಅದಕ್ಕೆ ನೇತ್ರ ಗೋಲವೆನ್ನುವರು. ಅದರ ಹಿಂದೆ, ಮುಖ್ಯಭಾಗದಲ್ಲಿ ಛಿದ್ರವುಳ್ಳದ್ದೊಂದು
ಪಟಲವಿರುವುದು. ಆಛಿದ್ರಕ್ಕೆ ಕನೀನಿಕೆ ಯೆನ್ನುವರು. ಆದರ ಹಿಂದೆ
ಗೋಲಾಕಾರವಾದದ್ದೊಂದು ನೇತ್ರಕೋಶವೆಂಬ ಪೊಳ್ಳು ಪ್ರದೇಶ

